ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



Blog :janashakthi.wordpress.com e-mail : js_weekly@yahoo.com


ಸಂಪುಟ 5 ಸಂಚಿಕೆ 27 ಜುಲೈ 03, 2011 ರೂ. 5/- ಪುಟ 16

ಕಪ್ಪು ಸುಂದರಿ ಜೋಯ್ಡಾ :

ಜನತೆಗೀಗ ಒಕ್ಕಲೇಳುವ 'ಭಾಗ್ಯ'

8–9





ಆಣೆ - ಪ್ರಮಾಣ ಎಂಬ ವಂಚನೆಯ ರಾಜಕೀಯ

5

"ಬಡವರು ಭತ್ತ ಮಾರಿಕೊಂಡಮೇಲೆ ಬಿಜೆಪಿ ಸರ್ಕಾರದ ಖರೀದಿ ಆದೇಶ !"

11

ಆರಂಭಗೊಳ್ಳದ ಸಂಸತ್ತು :

ಸಂವಿಧಾನಿಕ ವ್ಯವಸ್ಥೆ ಬುಡಮೇಲು ಹುನ್ನಾರ

7

ಲೋಕಪಾಲ ಮಸೂದೆ : ಇನ್ನೂ ಮರೀಚಿಕೆ

12

ಗ್ರೀಸ್ : 'ಕುಪಿತರ' ಬಂಡಾಯ



14

ಆಂಧ್ರ ಪ್ರದೇಶ

ಜನರ ಸಮಸ್ಯೆಗಳ ಬಗ್ಗೆ ಸಿಪಿಐ(ಎಂ) ನಿರಂತರ ಕಾರ್ಯಕ್ರಮ

ಕೆಲ ದಿನಗಳ ಹಿಂದೆ ಸೇರಿದ ಆಂಧ್ರ ಪ್ರದೇಶದ ಸಿಪಿಐ(ಎಂ)ರಾಜ್ಯ ವಿಸ್ತೃತ ಸಮಿತಿ ಜನಪರ ಸಮಸ್ಯೆಗಳ ಬಗ್ಗೆ ನಡೆಸುತ್ತಿರುವ ಹೋರಾಟವನ್ನು ಮತ್ತಷ್ಟು ವಿಶಾಲಗೊಳಿಸುವ, ವಿಸ್ತರಿಸುವ ನಿರ್ಧಾರ ಕೈಗೊಂಡಿದೆ. ಇದೇ ವೇಳೆ, ತೆಲಂಗಾಣ ವಿಷಯದ ಕುರಿತಂತೆ ರಾಜ್ಯವನ್ನು ವಿಭಜಿಸುವ ಕುರಿತ ರಾಜಕೀಯ ಬೇಡಿಕೆ ಬಗ್ಗೆ ತನ್ನ ನಿಲುವನ್ನು ಸ್ಪಷ್ಟಗೊಳಿಸಬೇಕು ಎಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ.

ಎರಡು ದಿನಗಳ ಸಭೆಯ ಬಳಿಕ ಪಕ್ಷದ ರಾಜ್ಯ ಕಾರ್ಯದರ್ಶಿ ಬಿ.ವಿ. ರಾಘವುಲು, ಸಭೆಯ ನಿರ್ಣಯಗಳನ್ನು ಮಾಧ್ಯಮಕ್ಕೆ ವಿವರಿಸಿದರು. ಜೂನ್ 25ರಿಂದ ಒಂದು ವಾರಗಳ ಕಾಲ ಆರೋಗ್ಯ ಸಪ್ತಾಹವನ್ನು ಆಚರಿಸಲು ರಾಜ್ಯ ಸಿಪಿಐ(ಎಂ) ಘಟಕ ನಿರ್ಧರಿಸಿದೆ. ಈ ಸಪ್ತಾಹದಲ್ಲಿ ರಾಜ್ಯದ ಆರೋಗ್ಯ ಕ್ಷೇತ್ರದಲ್ಲಿರುವ ಕುಂದು ಕೊರತೆಗಳನ್ನು ಸರ್ಕಾರದ ಗಮನಕ್ಕೆ ತರಲು ಮತ್ತು ಹೋರಾಟ ನಡೆಸಲು ನಿರ್ಣಯಿಸಲಾಯಿತು.

ಮಳೆಗಾಲದ ಸಂದರ್ಭದಲ್ಲಿ ಬರುವ ಚಿಕೂನ್ ಗುನ್ಯಾ, ಮಲೇರಿಯಾ, ವಾಂತಿ ಬೇಧಿ ಮುಂತಾದ ಖಾಯಿಲೆಗಳನ್ನು ಎದುರಿಸಲು ಸರ್ಕಾರ ಸಜ್ಜಾಗಬೇಕೆಂಬ ಒತ್ತಾಯವನ್ನೂ ಮಾಡಲಾಯಿತು. ರಾಜ್ಯದ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಈ ನಿಟ್ಟಿನಲ್ಲಿ ಸರ್ವಸಿದ್ಧತೆ ನಡೆಸಬೇಕೆಂಬ ಒತ್ತಾಯವನ್ನೂ ಮಾಡಲಾಯಿತು. ಕೆಲವು ಕೇಂದ್ರಗಳಲ್ಲಂತೂ ಪ್ಯಾರಸಿಟಮಲ್‌ನಂತಹ ಅತ್ಯಾವಶ್ಯಕ ಔಷಧಿಯೂ ಇಲ್ಲ ಎಂಬುದನ್ನು ಸಭೆ ಸರ್ಕಾರದ ಗಮನಕ್ಕೆ ತಂದಿತು.

ಇದೇ ವೇಳೆ, ಕೆಲವು ಪ್ರಮುಖ ಕೇಂದ್ರಗಳಲ್ಲಿ ಸ್ವಚ್ಛತಾ ಆಂದೋಲನವನ್ನು ಶ್ರಮದಾನದ ಮೂಲಕ ನಡೆಸಲು ನಿರ್ಧರಿಸಲಾಯಿತು.

ಶೈಕ್ಷಣಿಕ ವರ್ಷ ಆರಂಭವಾಗಿದ್ದರೂ ಪಠ್ಯಪುಸ್ತಕಗಳ ಅಲಭ್ಯತೆ ಮತ್ತು ಇತರ ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸುವಂತೆ ಸರ್ಕಾರವನ್ನು ರಾಜ್ಯ ಸಿಪಿಐ(ಎಂ) ಒತ್ತಾಯಿಸಿದೆ.

ರಾಜ್ಯದ ಭೂಮಿ ಹೋರಾಟವನ್ನು ಮುಂದುವರಿಸಲು ಮತ್ತು ಕೆಲವು ಪ್ರಮುಖ ಜಿಲ್ಲೆಗಳಲ್ಲಿ ನಿರ್ಣಾಯಕ ಹೋರಾಟಕ್ಕೆ ಚಾಲನೆ ನೀಡಲು ರಾಜ್ಯ ವಿಸ್ತೃತ ಸಮಿತಿ ನಿರ್ಣಯ ಕೈಗೊಂಡಿದೆ.

ಇದೇ ರೀತಿ, ದಲಿತ ಮತ್ತು ಆದಿವಾಸಿ ಜನರ ಹಕ್ಕುಗಳ ಬಗ್ಗೆ ಆಂದೋಲನ ನಡೆಸಲು ಸಿದ್ಧತೆ ನಡೆಸಿದೆ. ಈ ಶೋಷಿತ ಜನ ಸಮುದಾಯಕ್ಕಾಗಿ ಮೀಸಲಾದ ನಿಧಿಯನ್ನು ಅವರ ಕಲ್ಯಾಣಕ್ಕೆ ಬಳಸಬೇಕು ಎಂಬ ಬೇಡಿಕೆ ಮೇಲೆ ಜನಾಂದೋಲನ ನಡೆಸಲು ನಿರ್ಧರಿಸಿದೆ.

ಈ ಯೋಜನೆಯ ಜಾರಿಗೆ ಪ್ರತಿ ಜಿಲ್ಲೆಯಲ್ಲಿ ನೋಡೆಲ್ ಅಧಿಕಾರಿಗಳನ್ನು ನಿಯೋಜಿಸಲು ಸಭೆ ಒತ್ತಾಯಿಸಿದೆ. ಕಳೆದ ಮಾರ್ಚ್‌ನಲ್ಲಿ ನಡೆದ ಬಿ.ವಿ. ರಾಘವುಲು ಅವರ ನಿರಶನ ಸತ್ಯಾಗ್ರಹದಲ್ಲಿ ಇದು ಪ್ರಮುಖ ಬೇಡಿಕೆಯಾಗಿತ್ತು ಎಂಬುದು ಗಮನಾರ್ಹ. ಈ ಬೇಡಿಕೆಗೆ ದಲಿತ ಮತ್ತು ಆದಿವಾಸಿ ಸಮುದಾಯದಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿತ್ತು.

ರಾಜ್ಯದಲ್ಲಿ ಇರುವ 10.5 ಲಕ್ಷ ತಾತ್ಕಾಲಿಕ ನೌಕರರನ್ನು ಖಾಯಂಗೊಳಿಸುವ ಕುರಿತ ಸರ್ಕಾರಿ ಆದೇಶವನ್ನು ಹೊರಡಿಸಬೇಕೆಂಬ ಪ್ರಮುಖ ನಿರ್ಣಯವನ್ನು ಅಂಗೀಕರಿಸಲಾಗಿದೆ. ಸಮಾನ ಕೆಲಸಕ್ಕೆ ಸಮಾನ ವೇತನ, ಭವಿಷ್ಯ ನಿಧಿ ಮುಂತಾದ ಕನಿಷ್ಠ ಸೌಲಭ್ಯಗಳನ್ನು ತಾತ್ಕಾಲಿಕ ನೌಕರರಿಗೆ ವಿಸ್ತರಿಸಬೇಕೆಂಬ ಒತ್ತಾಯವನ್ನು ಈ ಸಂದರ್ಭದಲ್ಲಿ ಮಾಡಲಾಯಿತು.

ಎರಡು ದಿನಗಳ ವಿಸ್ತೃತ ಸಭೆಯಲ್ಲಿ ಪ.ಬಂಗಾಳ, ಕೇರಳ ಸೇರಿದಂತೆ ವಿಧಾನಸಭಾ ಚುನಾವಣೆಗಳು ಮತ್ತು ಪ್ರಸ್ತುತ ರಾಜಕೀಯ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸಲಾಯಿತು. ಪ್ರಧಾನ ಕಾರ್ಯದರ್ಶಿ ಪ್ರಕಾಶ್ ಕಾರಟ್, ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯ ವಿ. ಶ್ರೀನಿವಾಸ ರಾವ್ ಸಭೆಗೆ ವಿವರಗಳನ್ನು ನೀಡಿದರು. ಅಂತಿಮವಾಗಿ ವಿವಿಧ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಎರಡು ಗಂಟೆಗಳ ಕಾಲ ರಾಜ್ಯ ಕಾರ್ಯದರ್ಶಿ ರಾಘವುಲು ಉತ್ತರ ನೀಡಿದರು.



ಆಂಧ್ರಪ್ರದೇಶದಲ್ಲಿ ಬುಡಕಟ್ಟು ಜನ ಟಿಡಿಪಿ ಶಾಸಕರೊಬ್ಬರನ್ನು ಅಟ್ಟಿಸಿಕೊಂಡು ಹೋಗುತ್ತಿದ್ದಾರೆ ಯಾಕೆ? ನಿರೀಕ್ಷಿಸಿ....

ತಮಿಳುನಾಡು

25 ವರ್ಷಗಳ ಬಳಿಕ ಮಂದಿರ ಪ್ರವೇಶಿಸಿದ ದಲಿತರು

ತಮಿಳುನಾಡಿನಲ್ಲಿ ಅಸ್ಪೃಶ್ಯತೆ ಕುರಿತ ಸಿಪಿಐ(ಎಂ)ನ ಹೋರಾಟ ಮುಂದುವರಿದಿದೆ. ಈಗಲೂ ರಾಜ್ಯದಲ್ಲಿ ದಲಿತರಿಗೆ ಪ್ರವೇಶ ನಿರಾಕರಿಸುವ ನೂರಾರು ದೇಗುಲಗಳು ರಾಜ್ಯದಲ್ಲಿವೆ. ಇದರ ವಿರುದ್ಧ ಪಕ್ಷದ ಕಾರ್ಯಕರ್ತರು ಮತ್ತು ಸಾಮೂಹಿಕ ಸಂಘಟನೆಗಳು ನಿರಂತರ ಹೋರಾಟವನ್ನು ನಡೆಸಿವೆ. ಇದರಲ್ಲಿ ಪೊಲ್ಲಾಚಿಯ ಕಿನ್ನಾತುಕಡವು ಎಂಬಲ್ಲಿನ ವನ್ನಿಯಾ ಕುಮಾರಸ್ವಾಮಿ ದೇವಸ್ಥಾನವೂ ಒಂದು. ಕಳೆದ 25 ವರ್ಷಗಳಿಂದ ಈ ದೇವಸ್ಥಾನಕ್ಕೆ ದಲಿತರ ಪ್ರವೇಶವನ್ನು ನಿರ್ಬಂಧಿಸಲಾಗಿತ್ತು. ಅವರಿಗೆ ಇಲ್ಲಿ ಪ್ರಾರ್ಥನೆ ಸಲ್ಲಿಸುವುದನ್ನು ನಿಷೇಧಿಸಲಾಗಿತ್ತು.

ಇದು ಸರ್ಕಾರದ ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ ದೇವಸ್ಥಾನ ಎಂಬುದು ಗಮನಾರ್ಹ ಅಂಶ. ಇಲ್ಲಿ ದೇವರ ದರ್ಶನ ಹಾಗೂ ಪ್ರಾರ್ಥನೆಗೆ ಅವಕಾಶ ನೀಡುವಂತೆ ದಲಿತ ಸಮುದಾಯ ತುಂಬ ಸಮಯದಿಂದ ಮನವಿ ಮಾಡುತ್ತಲೇ ಬಂದಿತ್ತು. ಆದರೆ, ಅಧಿಕಾರಿಗಳು ಮತ್ತು ದೇವಸ್ಥಾನದ ಆಡಳಿತ ಮಂಡಳಿಯ ಕಿವಿಗಳು ಕಿವುಡಾಗಿತ್ತು. ಈ ಸಮಸ್ಯೆಯನ್ನು ಕೈಗೆತ್ತಿಕೊಂಡ ರಾಜ್ಯ ಅಸ್ಪೃಶ್ಯತಾ ವಿಮೋಚನಾ ರಂಗ (ಟಿಎನ್‌ಯುಇಎಫ್) ಮತ್ತು ಆದಿ ತಮಿಳರ್ ವಿಡುತಲೈ ಮುನ್ನನಿ (ಟಿಎನ್‌ಯುಇಎಫ್‌ನ ಇಂದು ಅಂಗ ಸಂಸ್ಥೆ) ಜೂನ್ 12ರಂದು ದೇವಸ್ಥಾನ ಪ್ರವೇಶ ಎಂಬ ಚಳವಳಿಯನ್ನು ನಡೆಸಿತು.

ಮೂರು ವಾರಗಳ ಮೊದಲು, ದೇವಸ್ಥಾನಕ್ಕೆ ಪ್ರವೇಶಿಸಲು ಅನುಮತಿ ನೀಡುವಂತೆ ಕೋರಿ ತಮಿಳರ್ ವಿಡುತಲೈ ಮುನ್ನನಿ ಜಿಲ್ಲಾಡಳಿತಕ್ಕೆ ಮನವಿಯನ್ನು ನೀಡಿತು. ಕೊಯಮತ್ತೂರು ಜಿಲ್ಲೆಯಲ್ಲಿ ಈ ಎರಡು ಸಂಘಟನೆಗಳು ಸಕ್ರಿಯವಾದ ಬಳಿಕ ಡಜನ್‌ಗಟ್ಟಲೆ ದೇವಸ್ಥಾನಗಳ ಪ್ರವೇಶಕ್ಕೆ ಯಶಸ್ವಿ ಹೋರಾಟ ನಡೆದಿದೆ. ಇದರಿಂದಾಗಿ ಸಂಘಟನೆ ಮತ್ತು ಅದರ ನಾಯಕರಿಗೆ ಜಿಲ್ಲೆಯಲ್ಲಿ ವಿಶೇಷ ಗೌರವ ಪ್ರಾಪ್ತವಾಗಿದೆ.

ಜೂನ್ 12ರಂದು ತಮಿಳರ್ ವಿಡುತಲೈ ಮುನ್ನನಿಯ ಸಂಚಾಲಕ ಮತ್ತು ಟಿಎನ್‌ಯುಇಎಫ್‌ನ ಉಪಾಧ್ಯಕ್ಷ ರವಿಕುಮಾರ್, ಮತ್ತು ಟಿಎನ್‌ಯುಇಎಫ್‌ನ ಕಾರ್ಯದರ್ಶಿ ವಿ. ಪೆರುಮಾಳ್ ನೇತೃತ್ವದಲ್ಲಿ ದೇವಸ್ಥಾನಕ್ಕೆ ಬೃಹತ್ ರ‍್ಯಾಲಿ ನಡೆಸಲಾಯಿತು. ಇದೇ ವೇಳೆ, ಸರ್ಕಾರ ತನ್ನ ಪೊಲೀಸ್ ಬಲವನ್ನು ಬಳಸಿ ದೇವಸ್ಥಾನದ ಎಂಟ್ರಿ ಚಳವಳಿಯನ್ನು ಹತ್ತಿಕ್ಕಲು ಪ್ರಯತ್ನಿಸಿತು. ಭಾರೀ ಪ್ರಮಾಣದ ಪೊಲೀಸ್ ಬಲವನ್ನು ಲೆಕ್ಕಿಸದೆ ಕಾರ್ಯಕರ್ತರು ಉತ್ಸಾಹದಿಂದ ದೇವಸ್ಥಾನದತ್ತ ಹೆಜ್ಜೆ ಹಾಕಿದರು. ಅಂತಿಮವಾಗಿ ದೇವಸ್ಥಾನದ ಇನ್ನೊಂದು ದ್ವಾರದ ಮೂಲಕ ದಲಿತರಿಗೆ ಪ್ರವೇಶ ನೀಡಲು ಒಪ್ಪಲಾಯಿತು. ದೇವರ ದರ್ಶನ ಮತ್ತು ಪ್ರಾರ್ಥನೆಗಾಗಿ ದಲಿತರು ಉತ್ಸಾಹದಿಂದ ಭಾಗವಹಿಸಿದರು.

ಯಶಸ್ವೀ ಹೋರಾಟದ ಬಳಿಕ ಉಭಯ ಸಂಘಟನೆಗಳ ನಾಯಕರು ಚಳವಳಿಕಾರರನ್ನು ಉದ್ದೇಶಿಸಿ ಮಾತನಾಡಿದರು. ಸಂಘಟನೆಯನ್ನು ರಾಜ್ಯಾದ್ಯಂತ ಪ್ರಬಲವಾಗಿ ಕಟ್ಟಿಬೆಳೆಸಲು ವಿವಿಧ ಹಂತಗಳಲ್ಲಿ ಸಮ್ಮೇಳನಗಳು ನಡೆಯಲಿದ್ದು, ಡಿಸೆಂಬರ್‌ನಲ್ಲಿ ರಾಜ್ಯ ಸಮ್ಮೇಳನ ನಡೆಸಲು ನಿರ್ಧರಿಸಲಾಗಿದೆ.

ಪಂಜಾಬ್

ಕಾರ್ಮಿಕ ಸಂಘಟನೆಗಳಿಂದ ಎರಡು ಗಂಟೆಗಳ ಚಕ್ಕಾ ಜಾಮ್- ಪಂಜಾಬ್ ಸಂಚಾರ ಸ್ತಬ್ದ

ರಾಜ್ಯದ ವಿವಿಧ ಕಾರ್ಮಿಕ ಸಂಘಟನೆಗಳು ಕರೆ ನೀಡಿದ ಎರಡು ಗಂಟೆಗಳ ಚಕ್ಕಾ ಜಾಮ್ ಚಳವಳಿಗೆ ಅಭೂತಪೂರ್ವ ಪ್ರತಿಕ್ರಿಯೆ ಪಂಜಾಬ್‌ನಲ್ಲಿ ಲಭ್ಯವಾಗಿದೆ. ಸಿಐಟಿಯು, ಎಐಟಿಯುಸಿ, ಇಂಟಕ್, ಎನ್‌ಟಿಯುಐ, ಎಚ್‌ಎಂಎಸ್ ಮತ್ತು ಪಂಜಾಬ್ ಸಿಐಟಿಯು ನೀಡಿದ ಕರೆಯನ್ವಯ ಈ ಹೋರಾಟ ನಡೆಯಿತು. ರಾಜ್ಯ ಮತ್ತು ಕೇಂದ್ರ ಸರ್ಕಾರದ ಜನವಿರೋಧಿ ಮತ್ತು ಕಾರ್ಮಿಕ ವಿರೋಧಿ ನೀತಿಗಳಿಗೆ ಸಿಕ್ಕ ಪ್ರತಿಕ್ರಿಯೆ ಇದು. ಜನ ಹೆಚ್ಚು ದಿನ ತಮ್ಮ ವಿರುದ್ಧದ ಅನ್ಯಾಯಗಳನ್ನು ಸಹಿಸಿಕೊಳ್ಳುವುದಿಲ್ಲ ಎಂಬುದು ಇದರಿಂದ ಶ್ರುತಪಟ್ಟಿದೆ.

ಸಾಮಾನ್ಯ ಕಾರ್ಮಿಕರಿಗೆ ಕನಿಷ್ಠ 10 ಸಾವಿರ, ಅರೆಕುಶಲ ಕಾರ್ಮಿಕರಿಗೆ ಸ15 ಸಾವಿರ, ಕುಶಲ ಕಾರ್ಮಿಕರಿಗೆ 20 ಸಾವಿರ ಕನಿಷ್ಟಕೂಲಿ ನಿಗದಿ ಪಡಿಸಬೇಕೆಂದು, ಇತ್ಯಾದಿ ಬೇಡಿಕೆಗಳಿಗಾಗಿ ಕೈಗಾರಿಕಾ ವಲಯದ ಕಾರ್ಮಿಕರು, ಉದ್ಯೋಗ ಖಾತ್ರಿ ಕಾರ್ಮಿಕರು, ಅರಣ್ಯ ನೌಕರರು, ಆಹಾರ ನಿಗಮದ ನೌಕರರು ಮತ್ತು ಗುತ್ತಿಗೆ ಆಧಾರದಲ್ಲಿ ದುಡಿಯುತ್ತಿರುವ ಕಾರ್ಮಿಕರು, ಆಶಾ ಮತ್ತು ಬಿಸಿಯೂಟ ಸಹಾಯಕರು ಸಾವಿರಾರು ಸಂಖ್ಯೆಯಲ್ಲಿ ರಾಜ್ಯಾದ್ಯಂತ ಈ ಹೋರಾಟದಲ್ಲಿ ಪಾಲ್ಗೊಂಡರು.

ಪಂಜಾಬ್‌ನ 20 ಜಿಲ್ಲೆಗಳಲ್ಲಿ ನಡೆದ ಹೋರಾಟ ಇತ್ತೀಚಿನ ದಿನಗಳಲ್ಲಿ ರಾಜ್ಯ ಕಂಡ ದಾಖಲೆಯ ಚಳವಳಿಯಾಯಿತು. 100 ಕಡೆಗಳಲ್ಲಿ ರಾಷ್ಟ್ರೀಯ ಹೆದ್ದಾರಿಗಳನ್ನು ತಡೆ ಮಾಡಲಾಯಿತು. ಇದರಲ್ಲಿ 50 ಕಡೆಗಳಲ್ಲಿ ಸಿಐಟಿಯು ಕಾರ್ಯಕರ್ತರು ಚಕ್ಕಾ ಜಾಮ್ ಹೋರಾಟಕ್ಕೆ ನೇತೃತ್ವ ನೀಡಿದರು ಎಂಬುದು ಗಮನಾರ್ಹ.


ಸರ್ಕಾರ ತನ್ನ ನೀತಿಗಳನ್ನು ಸಡಿಲಿಸದಿದ್ದರೆ ಇನ್ನಷ್ಟು ಪ್ರಬಲ ಚಳವಳಿ ನಡೆಸುವುದಾಗಿ ಹೋರಾಟಗಾರರು ಎಚ್ಚರಿಕೆ ನೀಡಿದರು. ಇದೇ ವೇಳೆ, ಚಕ್ಕಾ ಜಾಮ್ ಚಳವಳಿಯನ್ನು ಮುರಿಯಲು ಪೊಲೀಸ್ ಪಡೆಗಳನ್ನು ಬಳಸಿದ ರಾಜ್ಯ ಸರ್ಕಾರದ ಕ್ರಮವನ್ನು ತೀವ್ರವಾಗಿ ಖಂಡಿಸಲಾಯಿತು. ಉನ್ನತ ಮಟ್ಟದ ಅಧಿಕಾರಿಗಳು ತಕ್ಷಣ ಮಧ್ಯ ಪ್ರವೇಶಿಸಿ ಎಲ್ಲ ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು ಚರ್ಚೆ ನಡೆಸುವುದಾಗಿ ಭರವಸೆ ನೀಡಿದರು. ಇದೇ ವೇಳೆ, ಚಳವಳಿಯಲ್ಲಿ ಬಂಧನಕ್ಕೊಳಗಾದ ಕಾರ್ಮಿಕ ಸಂಘಟನೆಗಳ ನಾಯಕರು ಮತ್ತು ಕಾರ್ಯಕರ್ತರನ್ನು ತಕ್ಷಣ ಬಿಡುಗಡೆ ಮಾಡಿ ಅವರ ಮೇಲೆ ಹಾಕಲಾದ ಎಲ್ಲ ಕೇಸುಗಳನ್ನು ವಾಪಸ್ ಪಡೆಯುವ ಲಿಖಿತ ಭರವಸೆಯನ್ನೂ ಪಡೆಯಲಾಯಿತು.

ರಾಜ್ಯ ಬಿಜೆಪಿ ಸರ್ಕಾರದ ಭ್ರಷ್ಟಚಾರ ಆಣೆ ಪ್ರಮಾಣಗಳ ವಿರುದ್ಧ ಪ್ರತಿಭಟನೆ – ಜೂನ್ 29

ಇತ್ತೀಚೆಗೆ ರಾಜ್ಯದ ಮುಖ್ಯಮಂತ್ರಿ ಯಡಿಯೂರಪ್ಪನವರ ವಿರುದ್ಧ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಭ್ರಷ್ಟಾಚಾರದ ಕೆಲವು ಹೊಸ ಆರೋಪಗಳನ್ನು ಮಾಡಿದಾಗ ತಾನು ಕಳಂಕರಹಿತ ಎಂಬುದನ್ನು ಸಾಬೀತು ಪಡಿಸಲು ಯಡಿಯೂರಪ್ಪ ಧರ್ಮಸ್ಥಳಕ್ಕೆ ಹೋಗಿ ಆಣೆ ಪ್ರಮಾಣಮಾಡುವ ಸವಾಲು ಹಾಕಿದ್ದು, ಕುಮಾರಸ್ವಾಮಿ ಆ ಸವಾಲನ್ನು ಅಂಗೀಕರಿಸಿ ತಾನೂ ಅಲ್ಲಿಗೆ ಹೋಗಿ ಪ್ರಮಾಣ ಮಾಡುವುದಾಗಿ ಹೇಳಿದ ಪ್ರಕರಣ ರಾಜ್ಯದ ಜನತೆಗೆ ಸಾಕಷ್ಟು ಮನೋರಂಜನೆಯನ್ನು ನೀಡಿತ್ತು, ಅನಂತರ ವ್ಯಕ್ತವಾದ ತೀವ್ರ ವಿರೋಧದ ಹಿನ್ನಲೆಯಲ್ಲಿ ಈ ಪೌರುಷ ಪ್ರದರ್ಶನಕ್ಕೆ ತೆರೆಬಿದ್ದಂತಾಗಿದೆ. ಈ ಕುರಿತು ಚರ್ಚೆಮಾಡಿದ ಸಿಪಿಐ(ಎಂ)ರಾಜ್ಯ ಸಮಿತಿಯು ಯಡಿಯೂರಪ್ಪ ಹಾಗೂ ಅವರ ನೇತೃತ್ವದ ರಾಜ್ಯ ಸರ್ಕಾರದ ಭ್ರಷ್ಟಚಾರ ಜನರು ನಕ್ಕು ಸುಮ್ಮನಾಗುವ ವಿಷಯವಲ್ಲ. ಆಣೆ ಪ್ರಮಾಣಗಳ ಮೂಲಕ ಭ್ರಷ್ಟಾಚಾರದಂತಹ ಪ್ರಶ್ನೆಗಳನ್ನು ಇತ್ಯರ್ಥಪಡಿಸುವುದಾದರೆ ನ್ಯಾಯಾಲಯ ಗಳು ಏಕೆ ಬೇಕು? ಯಡಿಯೂರಪ್ಪ ತಾನು ಕಳಂಕಿತನಲ್ಲ ಎಂದು ಸಾಬೀತು ಪಡಿಸಲು ನಿಜವಾಗಿಯೂ ಆಸಕ್ತಿ ಇದ್ದರೆ ಪ್ರಕರಣ ಗಳನ್ನು ತನಿಖೆಗೆ ಏಕೆ ಒಪ್ಪಿಸಬಾರದು? ಈಗಾಗಲೇ ನ್ಯಾಯಾಲಯದ ಮುಂದಿ ರುವ ಪ್ರಕರಣಗಳಿಗೆ ಇವರಾಗಲಿ, ಇವರ ಕುಟುಂಬದವರಾಗಲಿ ತಡೆಯಾಜ್ಞೆ ತರಲು ಯಾಕೆ ಯತ್ನಿಸುತ್ತಿರುವುದು? ಆಣೆ ಪ್ರಮಾಣಗಳ ಮೂಲಕ ಜನತೆಯ ಮೌಢ್ಯತೆಯನ್ನು ಬೆಳೆಸುವ ಪ್ರವೃತ್ತಿಯನ್ನು ವಿರೋಧಿಸಬೇಕಾಗಿದೆ. ಈ ಎಲ್ಲಾ ಅಂಶಗಳನ್ನು ಜನರ ಗಮನಕ್ಕೆ ತರಲು ಮತ್ತು ಭ್ರಷ್ಟ ಯಡಿಯೂರಪ್ಪ ತನ್ನ ಸ್ಥಾನಕ್ಕೆ ರಾಜಿನಾಮೆ ನೀಡಿ ಮುಕ್ತ ತನಿಖೆಗೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯಿಸಿ ಇದೇ ಜೂನ್ 29ರಂದು ಬುಧವಾರ ಜಿಲ್ಲಾ, ತಾಲ್ಲೂಕು ಕೇಂದ್ರಗಳಲ್ಲಿ ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಸಾಮೂಹಿಕ ಧರಣಿ/ಪ್ರತಿಭಟನಾ ಪ್ರದರ್ಶನಗಳನ್ನು ಏರ್ಪಡಿಸಬೇಕೆಂದು ಇದೇ ಜೂನ್ 21–22ರಂದು ಬೆಂಗಳೂರಿನಲ್ಲಿ ಸೇರಿದ್ದ ರಾಜ್ಯ ಸಮಿತಿಯು ನಿರ್ಧರಿಸಿದೆ.

ಭಷ್ಟಾಚಾರ–ದೇಶವ್ಯಾಪಿ ಪ್ರಚಾರಾಂದೋಲನ: ಭ್ರಷ್ಟಚಾರ ತಡೆಯುವ ಕುರಿತು ನಿರ್ದಿಷ್ಟ ಬೇಡಿಕೆಗಳಾಧಾರದಲ್ಲಿ ದೇಶದಾದ್ಯಂತ ಇದೇ ಜುಲೈ 15 ರಿಂದ 21ರವರೆಗೆ ಪ್ರಚಾರಾಂದೋಲನ ನಡೆಸಲು ಎಡಪಕ್ಷಗಳ ಕರೆ ನೀಡಿವೆ. ●

'ನಾಗರೀಕತೆಯ' ನಡುವಿನಲ್ಲಿ ಮಲ ಹೊರುವ ಕೈಗಳು





ನಾಗರಿಕ ಸಮಾಜದ ಸಾಧನೆ, ಮುನ್ನಡೆಗಳ ಬಗ್ಗೆ ಮಾತುಕತೆಗಳು ನಿತ್ಯವೂ ನಡೆಯುತ್ತವೆ. ಮಾಲ್‌ಗಳು, ಗಗನ ಚುಂಬಿ ಕಟ್ಟಡಗಳಿಂದ ಆರಂಭಗೊಂಡು ಅಂಬಾನಿಗಳ 460 ಕೋಟಿ ರೂಪಾಯಿಗಳ ಅರಮನೆ, ಅದರೊಳಗಿನ ಸ್ನಾನದ ಗೃಹ, ಶೌಚಾಲಯಗಳವರೆಗೂ ವರ್ಣಮಯ ವರದಿಗಳು ಹೊರಬರುತ್ತವೆ. ಆಧುನಿಕ ತಂತ್ರಜ್ಞಾನ ಬಳಕೆಯನ್ನು ನಾಗರೀಕತೆಯ ಮುನ್ನಡೆಯಾಗಿ ಗುರುತಿಸುತ್ತೇವೆ. ನಿಜ, ಇವೆಲ್ಲವು ಆಧುನಿಕ ನಾಗರಿಕತೆಯ ಬೆಳವಣಿಗೆಗಳು. ಆ ಪಾರ್ಕಿನಲ್ಲಿ ನಡೆವ ಮಹಿಳೆ ಗೊಣಗುತ್ತಿದ್ದಳು. 'ಛೇ ಎಂತಹ ಜನ, ಏನಾದ್ರೂ ಒಂದಿಷ್ಟು 'ಸಿವಿಕ್‌ಸೆನ್ಸ್' ಬೇಡವಾ?' ಆಕೆ ಗೊಣಗಲು ಕಾರಣ ಪಾರ್ಕ್‌ನ ಪುನಶ್ಚೇತನದ ಕೂಲಿ ಕೆಲಸ ಮಾಡಲು ಪಾರ್ಕ್‌ನ ಮೂಲೆಯಲ್ಲೇ ಜೋಪಡಿ ಜೋಡಿಸಿಕೊಂಡ ಕೂಲಿಕಾರರ ಮಗುವಿಗೆ ನಡೆಗೆ ಪಥದ ಪಕ್ಕದಲ್ಲಿ ಸ್ನಾನ ಮಾಡಿಸಿದ ನೀರು ಬರುತ್ತಿದೆಯೆಂದು. ಮತ್ತು ಈ ಚಿಕ್ಕಮಕ್ಕಳು ಪಾರ್ಕಿನ ಮೂಲೆಯಲ್ಲಿ ಮಲಮೂತ್ರ ಮಾಡಿವೆಯೆಂದು. ಅದು ಅಲ್ಪ ಕಿರಿಕಿರಿ ಉಂಟು ಮಾಡಬಹುದಾದರೂ ನಾಗರೀಕತೆ, ನಾಗರೀಕತನವನ್ನೇ ಪ್ರಶ್ನಿಸುವಂತಹುದೇ? ಹಾಗಾದರೆ ಇದಕ್ಕಿಂತಲೂ ಘೋರವಾಗಿರುವ ಸಂಗತಿಗಳ ಬಗ್ಗೆ ನಮ್ಮ ಪ್ರತಿಕ್ರಿಯೆ ಹೇಗಿರಬಹುದು, ಹೇಗಿರಬೇಕು? ಅನೇಕ ಸಂಗತಿಗಳ ಬಗ್ಗೆ ನಾಗರೀಕ ಸಮಾಜದ ಪ್ರತಿಕ್ರಿಯೆ ಹೇಗಿರಬೇಕೋ ಹಾಗಿಲ್ಲ. ಪ್ರತಿಕ್ರಿಯೆಗಳೂ ಆಯಾ ವರ್ಗಗಳ ಹಿನ್ನೆಲೆಯಲ್ಲಿಯೇ ಹೊರಬರುತ್ತವೆ. ಭ್ರಷ್ಟಾಚಾರ, ಕಪ್ಪು ಹಣ ಏನೆಂದೆಲ್ಲಾ ಅಬ್ಬರ ನಡೆಯುತ್ತಿರುವಾಗ, ಸಾಯಲೂ ಸನ್ನದ್ಧವೆಂದು ಹೋರಾಟಗಳಿಗೆ ಅಣಿಯಾಗುತ್ತಿರುವಾಗ ನಮ್ಮ ನಿಮ್ಮಂತೆ ಬಾಳುವ ನಿಕೃಷ್ಟ ಸ್ಥಿತಿಯಲ್ಲಿರುವವರ ಬಗ್ಗೆ ಪ್ರತಿಕ್ರಿಯೆ ಏನು? ಅಸ್ಪೃಶ್ಯತೆ, ಅಸಮಾನತೆ ತಾರತಮ್ಯ ಗಂಭೀರ ವಿಷಯವಲ್ಲವೇ?

ತೀರಾ ಇತ್ತೀಚೆಗೆ ಕೆಲವು ತಿಂಗಳುಗಳ ಹಿಂದೆ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ತಮ್ಮ ಕನಿಷ್ಠ ಬೇಡಿಕೆ ಈಡೇರಿಸಲಿಲ್ಲ. ತಾರತಮ್ಯ – ದಮನ ನಿಲ್ಲಲಿಲ್ಲ ಎಂದು ಕೊನೆಗೆ ಬೇಸತ್ತು ಅನ್ಯ ಮಾರ್ಗ ಕಾಣದೇ ತಮ್ಮ ಮೈಮೇಲೆಯೇ ಮಲ ಸುರಿದುಕೊಂಡು ಪ್ರತಿಭಟಿಸಿದ 'ಭಂಗಿ'ಗಳ ಪ್ರತಿಭಟನೆಯ ಕಾವು ಮರೆಯಾಗಿಲ್ಲ, ಸಾರ್ವಜನಿಕ ಒತ್ತಡ ಹೆಚ್ಚಿದ ಬಳಿಕ ತಮ್ಮ ಸರ್ಕಾರದ ಪ್ರತಿಷ್ಠೆಗೆ ಇದು ಕುಂದು ತಂದೀತೆಂದು ಭರವಸೆಗಳ ಮಹಾಪೂರ ಹರಿಸಿದ್ದು ಇನ್ನೂ ಯಾರೂ ಮರೆತಿಲ್ಲ. ಆಗ ಸರ್ಕಾರ ಹೇಳಿದ್ದು '299 ಭಂಗಿ (ತಲೆಮೇಲೆ ಮಲ) ಹೊರುವ ಕುಟುಂಬಗಳಿದ್ದವು. ಅವರಿಗೆಲ್ಲಾ ಪುನರ್ ವಸತಿ ಕಲ್ಪಿಸಿಕೊಡಲಾಗಿದ್ದು, ಯಾರೂ ರಾಜ್ಯದಲ್ಲಿ ಇಲ್ಲವೆಂದೂ ಮಲ ಹೊರುವ ಪದ್ಧತಿಯೂ ಇಲ್ಲವೆಂದು ಈಹಿಂದೆ ಹೈಕೋರ್ಟ್‌ಗೆ ಸರ್ಕಾರ ಅಫಿಡವಿಟ್ ಸಲ್ಲಿಸಿತ್ತು. ಆದರೆ.. ಇದೀಗ.... ಚಿನ್ನದ ನಾಡು ಕೋಲಾರ ಜಿಲ್ಲೆಯಲ್ಲಿ ಒಂದು ಸಾವಿರಕ್ಕೂ ಅಧಿಕ 'ಭಂಗಿಗಳು' ಇದ್ದಾರೆ ಎಂಬ ಸಂಗತಿ ಮತ್ತು ಹಲವಾರು ರೋಗ, ರುಜಿನ, ಸಾಮಾಜಿಕ ಅಸ್ಪೃಶ್ಯತೆ, ಉದ್ಯೋಗಹೀನತೆ ಕನಿಷ್ಠ ನಾಗರಿಕ ಸೌಲಭ್ಯಗಳಿಲ್ಲದೇ ನರಳುತ್ತಿರುವ ಪ್ರಕರಣ ಹೊರಬಂದಿದೆ. ತಲೆ ಮೇಲೆ

ಪುಟ 4ಕ್ಕೆ



ಕೈಜೋಡಿಸಿ, ಚಂದಾದಾರರನ್ನಾಗಿಸಿ

ಜನಶಕ್ತಿ ಪ್ರಚಾರಾಂದೋಲನ– 2011 ಜೂನ್ 15 ರಿಂದ ಜುಲೈ 15, ಪತ್ರಿಕೆಯ ಪ್ರಸಾರ ಹೆಚ್ಚಿಸಲು ಚಂದಾ ಏಜೆನ್ಸಿ ಹೆಚ್ಚಿಸುವ ಮೂಲಕ ಕೈಜೋಡಿಸಿ. ಸ್ವಾತಂತ್ರ್ಯೋತ್ಸವ ಸಂಚಿಕೆಗೆ ಜಾಹೀರಾತು ಸಂಗ್ರಹಿಸಿ ನೀಡಿ.

–ಸಂ.

ಜನಶಕ್ತಿ ಕಾರ್ಯಾಗಾರ–ಜುಲೈ 2–3, 2011ರಂದು ಬೆಂಗಳೂರಿನಲ್ಲಿ ನಡೆಯಲಿದ್ದು, ಜನಶಕ್ತಿ ಬರಹಗಾರರು, ವರದಿಗಾರರಿಗೆ ಎರಡು ದಿನಗಳ ರಾಜ್ಯಮಟ್ಟದ ಕಾರ್ಯಾಗಾರವನ್ನು ಸಂಘಟಿಸಲಾಗುತ್ತಿದೆ. ಕಾರ್ಯಾಗಾರ ಜುಲೈ 2 ಮತ್ತು 3 ರಂದು ಬೆಂಗಳೂರಿನ ಇ.ಎಂ.ಎಸ್.ಭವನದಲ್ಲಿ ಬೆಳಿಗ್ಗೆ 10.30ಕ್ಕೆ ಆರಂಭಗೊಳ್ಳಲಿದೆ.

ಕಾರ್ಟೂನ್ ಕಾರ್ನರ್



ಭ್ರಷ್ಟಾಚಾರ ನಿರ್ಮೂಲನೆಗೆ ಬಹುಮುಖಿ ಕ್ರಮಗಳು ಅಗತ್ಯ

ಯುಪಿಎ-2 ಗೆ ಗೊತ್ತು ಗುರಿ ಇಲ್ಲ

ಹೈದರಾಬಾದ್ ಪತ್ರಿಕಾಗೋಷ್ಠಿಯಲ್ಲಿ ಸೀತಾರಾಂ ಯೆಚೂರಿ

ಯುಪಿಎ-2ಸರ್ಕಾರ ಗುರಿ ಇಲ್ಲದ್ದಾಗಿದೆ. ಈ ಸರ್ಕಾರ ಒಂದರ ನಂತರ ಮತ್ತೊಂದು ಭ್ರಷ್ಟಾಚಾರ ಹಗರಣಗಳಲ್ಲಿ ಸಿಲುಕಿದೆ. ಯುಪಿಎ-1 ಮತ್ತು ಯುಪಿಎ-2ರ ನಡುವೆ ಗುರುತರವಾದಂತಹ ವ್ಯತ್ಯಾಸಗಳಿವೆ. ಯುಪಿಎ-1ಗೆ ಎಡಪಕ್ಷಗಳು ಬಾಹ್ಯ ಬೆಂಬಲ ನೀಡಿದ್ದವು. ಮತ್ತು ಅದು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಆಡಳಿತ ನಡೆಯುತ್ತಿತ್ತು. ಇಂತಹ ಸಾಮಾನ್ಯ ಕನಿಷ್ಠ ಕಾರ್ಯಕ್ರಮವನ್ನು ಉಲ್ಲಂಘಿಸಿ ಯುಪಿಎ-1 ಅಮೆರಿಕದೊಂದಿಗಿನ ಅಣು ಒಪ್ಪಂದಕ್ಕೆ ಸಹಿ ಹಾಕಿದ್ದರಿಂದ ಎಡಪಕ್ಷಗಳು ಬೆಂಬಲ ಹಿಂಪಡೆದವು. ಎಡಪಕ್ಷಗಳ ಒತ್ತಡದಿಂದಾಗಿ ಯುಪಿಎ-1, ಎನ್‌ಆರ್‌ಇಜಿಎ, ಅರಣ್ಯ ಹಕ್ಕು ಕಾಯ್ದೆ ಸೇರಿದಂತೆ ಹಲವಾರು ಜನಪರ ಕಾರ್ಯಕ್ರಮಗಳನ್ನು ಕೈಗೊಂಡಿತು. ಆದರೆ ಯುಪಿಎ-2 ಅಪಾರ ಪ್ರಮಾಣದ ಭ್ರಷ್ಟಾಚಾರದಿಂದ ತುಂಬಿದೆ. ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು 2ಜಿ ಸ್ಪೆಕ್ಟ್ರಂ ಹಗರಣ, ಕಾಮನ್‌ವೆಲ್ತ್ ಕ್ರೀಡಾಕೂಟ ಹಗರಣ ಮತ್ತು ಆದರ್ಶ್ ಹೌಸಿಂಗ್ ಯೋಜನೆಯಂತಹ ಹಗರಣಗಳಲ್ಲಿ ಸಿಲುಕಿವೆ.



ಸುಧಾರಣೆ ಅಗತ್ಯ

ಪ್ರಧಾನ ಮಂತ್ರಿಗಳು ಲೋಕ್‌ಪಾಲ್ ಮಸೂದೆ ವ್ಯಾಪ್ತಿಗೆ ಒಳಪಡುವುದು ಸೇರಿದಂತೆ ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡಲು ಬಹುಮುಖೀಯ ಕ್ರಮಗಳು ಅಗತ್ಯ. ಉದ್ಯಮಗಳು ರಾಜಕೀಯ ಪಕ್ಷಗಳಿಗೆ ಹಣಕಾಸಿನ ನೆರವು ಒದಗಿಸುವುದನ್ನು ನಿಷೇಧಿಸುವುದು ಸೇರಿದಂತೆ, ನ್ಯಾಯಾಂಗ ವ್ಯವಸ್ಥೆ ಮತ್ತು ಚುನಾವಣಾ ವ್ಯವಸ್ಥೆಯಲ್ಲಿ ಭಾರಿ ಸುಧಾರಣೆಗಳನ್ನು ಮಾಡಬೇಕಾಗಿದೆ. ಕಾರ್ಪೊರೇಟ್ ಕಂಪನಿಗಳು ಭಾರಿ ಪ್ರಮಾಣದ ತೆರಿಗೆ ವಿನಾಯಿತಿಗಳನ್ನು ಪಡೆಯುವುದರಿಂದ ರಾಜಕೀಯ ಪಕ್ಷಗಳಿಗೆ ಹಣ ನೀಡುತ್ತವೆ. ಇಂತಹ ವ್ಯವಸ್ಥೆಯನ್ನು ನಿಷೇಧಿಸಬೇಕು. ಇದಕ್ಕೆ ಬದಲಾಗಿ ಹಣವನ್ನು ಚುನಾವಣಾ ಆಯೋಗಕ್ಕೆ ಅಥವಾ ಇನ್ನಿತರೆ ಸರ್ಕಾರಿ ಸಂಸ್ಥೆಗೆ ನೀಡುವಂತಹ ವ್ಯವಸ್ಥೆ ಜಾರಿಗೆ ತರಬೇಕು. ಇಂತಹ ಹಣದಿಂದ ಸಂಚಿತ ನಿಧಿ ರೂಪಿಸಬೇಕು. ಈ ಹಣ ರಾಜಕೀಯ ಪಕ್ಷಗಳಿಗೆ ನಗದು ಹಣಕ್ಕೆ ಬದಲಾಗಿ ಸೇವೆಗಳ ರೂಪದಲ್ಲಿ ನೀಡುವಂತಾಗಬೇಕು. ಹಣವನ್ನು ಹಂಚಿ ಚುನಾವಣೆ ನಡೆಸುವ ಮೂಲಕ ಅಕ್ರಮಗಳನ್ನು ಎಸಗುವ ಪಕ್ಷಗಳ ವಿರುದ್ಧ ಕಠಿಣ ಕ್ರಮಗಳನ್ನು ಜರುಗಿಸಬೇಕು.

ದಾಳಿಗಳು

ಕಳೆದ ಲೋಕಸಭೆ ಚುನಾವಣೆ ನಂತರದಲ್ಲಿ ಪಶ್ಚಿಮ ಬಂಗಾಳದಲ್ಲಿ ಟಿಎಂಸಿ-ಕಾಂಗ್ರೆಸ್ ಗೂಂಡಾಗಳು 400ಕ್ಕೂ ಹೆಚ್ಚು ಎಡಪಕ್ಷಗಳ ಕಾರ್ಯಕರ್ತರನ್ನು ಕೊಂದಿದ್ದಾರೆ. ಇತ್ತೀಚೆಗೆ ಮುಗಿದ ವಿಧಾನಸಭೆ ಚುನಾವಣೆಗಳ ನಂತರ ಇನ್ನೂ 14 ಮಂದಿಯನ್ನು ಕೊಂದಿದ್ದಾರೆ. ಈಗ ಪಶ್ಚಿಮ ಬಂಗಾಳದಲ್ಲಿ ವರ್ಗ ಸಂಘರ್ಷ ಮುಂದುವರೆದಿದೆ. ಬಡ ವರ್ಗಗಳು ಸಾಧಿಸಿದ ಎಲ್ಲ ಸಾಧನೆಗಳನ್ನು, ಟಿಎಂಸಿ ಮತ್ತು ಕಾಂಗ್ರೆಸ್ ಹಿಂದೆ ಅಣಿನೆರೆದಿರುವ ಆಳುವ ವರ್ಗಗಳು ನಾಶ ಮಾಡಲು ಪ್ರಯತ್ನಿಸುತ್ತಿವೆ. ದಾಖಲೆ 34 ವರ್ಷಗಳ ಆಡಳಿತದ ನಂತರ ಪಶ್ಚಿಮ ಬಂಗಾಳದಲ್ಲಿ ಅಧಿಕಾರ ಕಳೆದುಕೊಳ್ಳುವಲ್ಲಿ ಆಗಿರುವ ತಪ್ಪುಗಳನ್ನು ಕೇಂದ್ರ ಸಮಿತಿ ಗುರುತಿಸಿದೆ. ಈ ವಿಷಯ ಕುರಿತಂತೆ ವಿವರಿಸಿದ ಯೆಚೂರಿ, ಕೃಷಿ ಭೂಮಿ ಸ್ವಾಧೀನವನ್ನು ತಪ್ಪಿಸಲು ಸಾಧ್ಯವಿಲ್ಲ. ಆದರೆ ಎಲ್ಲ ರೈತರು, ಸ್ಥಳೀಯ ರಾಜಕೀಯ ಮುಖಂಡರು, ಕಾರ್ಯಕರ್ತರ ಸಭೆಗಳನ್ನು ಏರ್ಪಡಿಸಬೇಕು. ನಂತರವಷ್ಟೆ ಭೂಸ್ವಾಧೀನ ನಿರ್ಣಯ ಕೈಗೊಳ್ಳಬೇಕು. ಆದರೆ ಸಿಂಗೂರಿನಲ್ಲಿ ಈ ಕೆಲಸವನ್ನು ಮಾಡಲಿಲ್ಲ. ಕೈಗಾರಿಕೀಕರಣದ ಘೋಷಣೆ ಅಡಿಯಲ್ಲಿ 2006ರ ವಿಧಾನಸಭೆ ಚುನಾವಣೆಯನ್ನು ಎದುರಿಸಿದ ಎಡರಂಗ ಸರ್ಕಾರ ಮೂರನೆ ಎರಡರಷ್ಟು ಬಹುಮತ ಗಳಿಸಿತು. ಈ ಹಿನ್ನೆಲೆಯಲ್ಲಿ ಎಲ್ಲ ಜನ ಕೈಗಾರಿಕೀರಣದ ವಿಷಯದಲ್ಲಿ ಪೂರ್ಣವಾಗಿ ತಮ್ಮ ಜೊತೆ ಇದ್ದಾರೆ ಎಂಬ ತಪ್ಪು ತೀರ್ಮಾನಕ್ಕೆ ಬರಲಾಯಿತು. ಭೂಸ್ವಾಧೀನಕ್ಕೆ ಕೈಗೊಳ್ಳಬೇಕಾಗಿದ್ದ ಪೂರ್ವ ಸಿದ್ಧತೆಗಳನ್ನೂ ಕೈಗೊಳ್ಳಲಿಲ್ಲ. ಇಂತಹ ಕೆಲವು ತಪ್ಪುಗಳು ನಡೆದಿದ್ದು, ಅವುಗಳನ್ನು ಗುರುತಿಸಲಾಗಿದೆ. ಪಕ್ಷದಿಂದ ದೂರವಾಗಿರುವ ಜನರ ವಿಶ್ವಾಸವನ್ನು ಮತ್ತೆ ಗಳಿಸಲು ಕೈಗೊಳ್ಳಬೇಕಾದ ಕ್ರಮಗಳನ್ನು ಕೇಂದ್ರ ಸಮಿತಿ ರೂಪಿಸಿದೆ.

ಐಕ್ಯ ಹೋರಾಟಗಳು ಮೊದಲು

ಇದೇ ಸಂದರ್ಭದಲ್ಲಿ ಎಡಪಕ್ಷಗಳ ವಿಲೀನತೆ (ಸಿಪಿಐ(ಎಂ) ಮತ್ತು ಸಿಪಿಐಗಳು ಒಂದಾಗಬೇಕೆಂಬ ಪ್ರಶ್ನೆ) ಪ್ರಸ್ತಾಪದ ಕುರಿತು ಪ್ರಶ್ನಿಸಿದಾಗ ಯೆಚೂರಿಯವರು ಪ್ರತಿಯೊಬ್ಬ ಪ್ರಗತಿಪರ ವ್ಯಕ್ತಿಯೂ ಎಡಪಕ್ಷಗಳು ಒಂದಾಗಬೇಕೆಂಬ ಹೆಬ್ಬಯಕೆಯನ್ನು ಹೊಂದಿದ್ದಾರೆ. ಆದರೆ ಇದನ್ನು ಸಾಧಿಸಲು ಎರಡು ಹಾದಿಗಳಿವೆ. ಒಂದನೆಯದು, ಉನ್ನತ ಮಟ್ಟದಲ್ಲಿ ನಾಯಕರು ಕೈಜೋಡಿಸುವುದು ಮತ್ತು ಒಂದಾಗಿರುವುದನ್ನು ಘೋಷಿಸುವುದು. ಎರಡನೆಯದು, ಸ್ಥಳೀಯ ಮಟ್ಟದಲ್ಲಿ ಕಾರ್ಯಕರ್ತರು ಐಕ್ಯತೆಯ ಭಾವನೆಯೊಂದಿಗೆ ಒಂದಾಗುವುದು. ದೀರ್ಘಕಾಲೀನ ಗುರಿಗಳನ್ನು ಸಾಧಿಸಬೇಕಾದರೆ ಎರಡನೇ ಪದ್ಧತಿ ಒಳಿತು ಎಂಬುದು ನಮ್ಮ ನಂಬಿಕೆಯಾಗಿದೆ. ಈ ನಿಟ್ಟಿನಲ್ಲಿ ಪ್ರಯತ್ನಗಳು ಸಾಗಿವೆ. ಹಲವಾರು ವಿಷಯಗಳಿಗೆ ಸಂಬಂಧಿಸಿದಂತೆ ಸಾಮೂಹಿಕ ಸಂಘಟನೆಗಳು ಒಗ್ಗಟ್ಟಾಗಿ ಹೋರಾಟಗಳನ್ನು ನಡೆಸುತ್ತಿವೆ. ಆದರೆ ವಿಲೀನ ಪ್ರಶ್ನೆ ಸದ್ಯದ ಅಜೆಂಡಾದಲ್ಲಿ ಇಲ್ಲ. ಇವೆಲ್ಲಕ್ಕಿಂತಲೂ ಮೊದಲು, 1964ರಲ್ಲಿ ಪಕ್ಷ ವಿಭಜನೆಗೆ ಕಾರಣವಾದ ಎಲ್ಲ ಭಿನ್ನಾಭಿಪ್ರಾಯಗಳು ನಿವಾರಣೆಯಾದರೆ ಮಾತ್ರ ವಿಲೀನ ವಿಷಯ ಬರಲಿದೆ.

ಮಲ ಹೊರುವ ಕೈಗಳು

ಪುಟ 3 ರಿಂದ

ಮಲ ಹೊರುವ ಪದ್ಧತಿಯೇ ರಾಜ್ಯದಲ್ಲಿ ಇಲ್ಲವೆಂದೇ ಮತ್ತೆ ಮತ್ತೆ ಪ್ರತಿಪಾದಿಸುತ್ತಿದ್ದ ಸರ್ಕಾರದ ವಂಚನೆ, ಪುನರ್ವಸತಿ ಕಲ್ಪಿಸಲಾಗಿದೆಯೆಂಬ ಸೋಗಲಾಡಿತನ ಬಯಲಾಗಿದೆ. ಇಂತಹ, ಈ ಪ್ರಸಂಗಗಳು 'ನಾಗರೀಕ ಪ್ರಜ್ಞೆ'ಯನ್ನು ಕಲಕದಿದ್ದರೆ ಹೇಗೆ? ಈ 'ಸಿವಿಕ್‌ಸೆನ್ಸ್' ಪ್ರಜ್ಞೆಯೂ ಜಾತಿ ವ್ಯವಸ್ಥೆಯ ಶ್ರೇಣೀಕರಣ ಆಧರಿಸಿಯೇ ಇದೆಯೆಂದಲ್ಲವೇ?

ಈಗ ಅಲ್ಲಿಂದ ಸುದ್ದಿ ಹೊರಬಂದ ಮೇಲೆ ಜಿಲ್ಲಾ ಉಸ್ತುವಾರಿ ಸಚಿವ ಸುರೇಶ್‌ಕುಮಾರ್ ರವರು ಜಿಲ್ಲೆಗೆ ಧಾವಿಸಿ ಜಿಲ್ಲಾಧಿಕಾರಿಗೆ ಎಚ್ಚರಿಕೆಯೇನೋ ನೀಡಿದ್ದಾರೆ. ಆದರೆ ಇಂದು ಆಗಬೇಕಿರುವುದು ಅಂತಹ ಕೆಲಸದಿಂದಲೇ ಅವರಿಗೆ ಮುಕ್ತಿ, ಪುನರ್ವಸತಿ. ಗಟಾರ, ಪಾಯಿಖಾನೆ ಶುಚೀಕರಿಸಲು ಆಧುನಿಕ ಯಂತ್ರಗಳುಬೇಕು ನಿಜ! ಆದರೆ ಆ ಸಮುದಾಯವೇ ಅದನ್ನು ಮಾಡಬೇಕೆಂಬುದು ಎಷ್ಟು ಸರಿ? ಅದು ಆಧುನಿಕ 'ಭಂಗಿ'ಯಲ್ಲವೇ? ಬೇರೆ ಜಾತಿಗಳವರು ಮಾಡಬಾರದೆಂದಿದೆಯೇ? ಅಲ್ಲಿಂದ ಕೆಲಸ ಬಿಡಿಸಿದ ಬಳಿಕ ಆ ಜನತೆಗೆ ಪರ್ಯಾಯ ಉದ್ಯೋಗ ಕಲ್ಪಿಸಿಕೊಡುವುದು ಸರ್ಕಾರದ ಪ್ರಧಾನ ಹೊಣೆಯಾಗಿದೆ. ಇಲ್ಲವಾದಲ್ಲಿ ಜೀವನ ಸಾಗಿಸಲು, ಬದುಕುಳಿಯಲು ಅವರ 'ಕುಲ' ಕಸುಬನ್ನೇ ಆಧರಿಸಬೇಕಾಗುತ್ತದೆ. ಮಲ ಹೊರುವ ಪದ್ಧತಿ ನಿಲ್ಲಿಸಿಬಿಡಿ ಎಂದು ಜಿಲ್ಲಾಧಿಕಾರಿಗಳಿಗೆ ಆದೇಶ ಹೊರಡಿಸುವ ಸಚಿವರು, ಅಧಿಕಾರಿಗಳು ಇದರತ್ತ ಕ್ರಮ ವಹಿಸದಿದ್ದರೆ ಆ ಸ್ಥಿತಿಯೇ ಮುಂದುವರಿಯಲಿದೆ.

ತಲೆ ಮೇಲೆ ಮಲ ಹೊರುವ ಪದ್ಧತಿ ನಿಷೇಧಿಸಿ ಹಲವು ದಶಕಗಳೇ ಆದವು. ಆದರೂ ಇದು ಮುಂದುವರಿಯುತ್ತಿದೆಯೆಂದರೆ, ಸಾಮಾಜಿಕ ಸನ್ನಿವೇಶ ಬದಲಾಗಿಲ್ಲ. ಜಾತಿ ಪಳೆಯುಳಿಕೆ ನಾಶವಾಗಲಿಲ್ಲ. ಶಿಕ್ಷಣ, ಉದ್ಯೋಗಗಳು ಅವರಿಗೆ ಸೃಷ್ಟಿಯಾಗಲಿಲ್ಲ. ಪ್ರಧಾನ ಸಾಮಾಜಿಕ ಪ್ರವಾಹಕ್ಕೆ ತರಲಿಲ್ಲ. ಇದು ಬದಲಾಗಬೇಡವೇ? 'ಸಿವಿಕ್ ಸೆನ್ಸ್' ಇರುವ ಎಲ್ಲರೂ ಚಿಂತಿಸಬೇಕಾದ ಸಂಗತಿ, ಸ್ಥಿತಿ..... ಬದಲಾಯಿಸಬೇಕಾದ ಸಂಗತಿ.

ಜುಲೈ 1-7 ಪಶ್ಚಿಮ ಬಂಗಾಳದ ಎಡರಂಗ ಸಂಗಾತಿಗಳ ಮೇಲಿನ ದಾಳಿ ವಿರುದ್ಧ ಪ್ರಚಾರಾಂದೋಲನ ಹಾಗೂ ಸಹಾಯ ನಿಧಿ ಸಂಗ್ರಹ



ಜೂನ್ 21-22 ರಂದು ನಡೆದ ಸಿಪಿಐ(ಎಂ)ರಾಜ್ಯ ಸಮಿತಿ ಸಭೆಯಲ್ಲಿ ಪಶ್ಚಿಮ ಬಂಗಾಳದ ಹುತಾತ್ಮ ಹಾಗೂ ನೊಂದ ಸಂಗಾತಿಗಳ ಕುಟುಂಬಕ್ಕೆ ರಾಜ್ಯ ಸಮಿತಿ ಸದಸ್ಯರಿಂದ ಸಂಗ್ರಹಿಸಲಾದ ಸಹಾಯ ನಿಧಿ 3,240 ರೂ.ಗಳನ್ನು ಕೆ.ವರದರಾಜನ್ ರವರಿಗೆ ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ. ನೀಡುತ್ತಿರುವುದು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಆಣೆ ಪ್ರಮಾಣ ಎಂಬ ವಂಚಕ ರಾಜಕೀಯ

ತಮ್ಮ ವಿರುದ್ಧ ಭ್ರಷ್ಟಾಚಾರದ ಆರೋಪ ಮಾಡದೆ ಸುಮ್ಮನಾಗಲು ಕೋರಿ 'ರಾಜಿ' ಮಾಡಿಕೊಳ್ಳಲು ಯಡಿಯೂರಪ್ಪ ತಮ್ಮ ಆಪ್ತರ ಮೂಲಕ ಆಹ್ವಾನ ನೀಡಿದರಂತೆ. ಕುಮಾರಸ್ವಾಮಿ ಅದನ್ನು ತಿರಸ್ಕರಿಸಿದರಂತೆ. ಈ ವಿಷಯವನ್ನು ಕುಮಾರಸ್ವಾಮಿಯವರು ಬಹಿರಂಗವಾಗಿ ಹೇಳಿದಾಗ ಇದ್ದ ಮಾರ್ಗ ಏನು? ಒಂದು ಸಮರ್ಥವಾದ ತನಿಖೆಯ ಆದೇಶ. ಅದನ್ನು ಬಿಟ್ಟು ಯಡಿಯೂರಪ್ಪ ಆಣೆ ಪ್ರಮಾಣದ ಮಾರ್ಗಕ್ಕೆ ಯಾಕೆ ಹೋಗಬಯಸುತ್ತಾರೆ.

ಜಿ.ವಿ.ಶ್ರೀರಾಮರೆಡ್ಡಿ



ಕೃಪೆ: ಪ್ರಜಾವಾಣಿ

ನನ್ನ ಹಿಂದಿನ ಲೇಖನದಲ್ಲಿ ಬಿ.ಜೆ.ಪಿ.ಯೆಂಬ ಅನಾಗರೀಕ ಪಕ್ಷವು ಈ ರಾಜ್ಯವನ್ನು ಯಾವ ರೀತಿ ಅಧಃಪತನಕ್ಕೆ ಕೊಂಡೊಯ್ಯುತ್ತಿದೆ ಎಂದು ಹೇಳಿದ್ದೆ. ಈ ಅಧಃಪತನವು ಎಷ್ಟು ಆಳಕ್ಕೆ ಹೋಗಿದೆಯೆಂದು ಈಗ ರಾಜ್ಯದ ಜನತೆ ನೋಡಬೇಕಾಗಿದೆ. ಬಿ.ಜೆ.ಪಿ.ಎಂಬ ಅನಾಗರೀಕ ಪಕ್ಷವು ತನ್ನ ಅನಾಗರೀಕತೆಯ ಜೊತೆಗೆ ಜನರ ಮನಸ್ಸಿನಲ್ಲಿ ಮೌಢ್ಯವನ್ನು ತುಂಬಿ ವಂಚಿಸುವ ಪ್ರಯತ್ನ ಮಾಡುತ್ತಿದೆ. ಈ ಅನಾಗರೀಕ ಪಕ್ಷದ ಸರ್ಕಾರದ ಮುಖ್ಯ ಮಂತ್ರಿಯು ತನ್ನ ಸುಳ್ಳನ್ನು ಮತ್ತು ತಪ್ಪನ್ನು ಮುಚ್ಚಿಹಾಕಲು ದೇವರ ಮೇಲೆ ಆಣೆ ಮಾಡುತ್ತೇನೆಂದು ತಾರೀಕನ್ನು ನಿಗದಿಪಡಿಸಿದರು. ಇದಕ್ಕೆ ಇನ್ನೊಬ್ಬ ಮಾಜಿ ಮುಖ್ಯಮಂತ್ರಿ ಇವರ ಆಹ್ವಾನವನ್ನು ಸ್ವೀಕಾರ ಮಾಡಿ ನಾನು ಧರ್ಮಸ್ಥಳದ ಮಂಜುನಾಥನ ಮುಂದೆ ಹಾಜರಾಗುತ್ತೇನೆಂದರು. ಒಬ್ಬರು ಹಾಲಿ ಮುಖ್ಯಮಂತ್ರಿ ಮತ್ತು ಇನ್ನೊಬ್ಬರು ಮಾಜಿ ಮುಖ್ಯಮಂತ್ರಿ. ಭ್ರಷ್ಟಾಚಾರ ಅಪವಾದ ಮತ್ತು ಸುಳ್ಳನ್ನು ಸಾಬೀತು ಮಾಡಲು ಮಂಜುನಾಥನ ಹತ್ತಿರ ಹೋಗುವುದಾದರೆ ಈ ದೇಶದಲ್ಲಿ ಸಂವಿಧಾನ ಯಾಕೆ, ನ್ಯಾಯಾಂಗ ಯಾಕೆ ಮತ್ತು ಕಾನೂನಿನ ಆಡಳಿತ ಯಾಕೆ? ಇವರಿಬ್ಬರು ಸಂವಿಧಾನದ ಮೇಲೆ ಪ್ರಮಾಣ ಮಾಡಿ ಅಧಿಕಾರ ಸ್ವೀಕಾರ ಮಾಡಿ. ಈ ದೇಶದ ಸಂವಿಧಾನವನ್ನು ಎತ್ತಿ ಹಿಡಿಯುತ್ತೇನೆಂದು, 'ನಾನು ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ಕೆಲಸ ನಿರ್ವಹಿಸುತ್ತೇನೆಂದು ಈ ನೆಲದ ಕಾನೂನಿನ ಅಡಿಯಲ್ಲಿ ಕೆಲಸ ಮಾಡುತ್ತೇನೆಂದು ಪ್ರಮಾಣ ಮಾಡಿ, ಈಗ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಆಣೆ ಮಾಡುವುದಾಗಿ ಮತ್ತು ಹೇಳಿದ್ದಾರೆ. ಅಂದರೆ ಹಾಲಿ ಮತ್ತು ಮಾಜಿ ಮುಖ್ಯಮಂತ್ರಿಗಳು ಸಂವಿಧಾನವನ್ನೇ ಅವಹೇಳನ ಮಾಡುತ್ತಿದ್ದಾರೆ. ಈ ಆಣೆ-ಪ್ರಮಾಣದ ನಂಬಿಕೆ ವಿಷಯದಲ್ಲಿ ಹೆಚ್.ಡಿ.ಕೆ. ಹೊರತೇನಲ್ಲ. ಯಡ್ಯೂರಪ್ಪ ಸವಾಲು ಹಾಕಿದಾಗ ಸಂವಿಧಾನ, ಕಾನೂನಿನಂತೆ ಕ್ರಮ ಕೈಗೊಳ್ಳಿ ಎಂದು ಮರು ಸವಾಲು ಹಾಕಬಹುದಿತ್ತು.

ಧರ್ಮ ನಿರಪೇಕ್ಷತೆ ಮತ್ತು ಜ್ಯಾತ್ಯಾತೀತ ತತ್ವಗಳೇ ಸಂವಿಧಾನದ ಆಶಯ. ಈ ಸಂವಿಧಾನದ ಆಧಾರದಲ್ಲೇ ನ್ಯಾಯಾಂಗ, ಕಾರ್ಯಾಂಗ ರೂಪಿತವಾಗಿರುವುದು. ಇದರ ಭಾಗವೇ ಆದ ಈ ನೆಲದ ಕಾನೂನು ಎಲ್ಲವನ್ನೂ ಗಾಳಿ ತೂರಿ ಸಂವಿಧಾನ ವಿರೋಧಿಕೃತ್ಯದಲ್ಲಿ ತೊಡಗಿ, ಭ್ರಷ್ಟಾಚಾರ ನಡೆಸಿ ಮತ್ತು ಸುಳ್ಳುಗಳನ್ನು ಹೇಳಿದವರ ಮೇಲೆ ಮತ್ತು ಮಾಡಿದವರ ಮೇಲೆ ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಈ ದೇಶದಲ್ಲಿದೆ. ಸುಳ್ಳನ್ನು ಪತ್ತೆ ಹಚ್ಚಲು ಈ ಆಧುನಿಕ ಯಂತ್ರಗಳೂ ಇವೆ.

ಆದರೆ ಮಂಜುನಾಥನ ಮುಂದೆ ಹೋಗುವ ಎಂದರೆ? ನ್ಯಾಯಾಂಗ ಮತ್ತು ಸಂವಿಧಾನವನ್ನು ಉಲ್ಲಂಘಿಸಿದ ವ್ಯಕ್ತಿ ಮುಖ್ಯಮಂತ್ರಿಯಾಗಿರಲು ಸಾಧ್ಯವಿಲ್ಲ ಧಾರ್ಮಿಕ ನಂಬಿಕೆಗಳು ಅವರ ಖಾಸಗಿ ವಿಚಾರಗಳು. ಆದರೆ ಆ ನಂಬಿಕೆಗಳನ್ನು ರಾಜಕೀಯದಲ್ಲಿ ಮತ್ತು ಸಾರ್ವಜನಿಕ ಜೀವನದಲ್ಲಿ ಬೆರೆಸಬಾರದು. ಹಾಗೂ ಅವು ಸಂವಿಧಾನವನ್ನು ಉಲ್ಲಂಘಿಸಕೂಡದು, ನ್ಯಾಯಾಂಗವನ್ನು ಧಿಕ್ಕರಿಸಬಾರದು. ಈ ನೆಲದ ಕಾನೂನನ್ನು ಮುರಿಯಬಾರದು. ಇದು ಈ ದೇಶದ ಎಲ್ಲ ನಾಗರೀಕರಿಗೂ ಅನ್ವಯಿಸುತ್ತದೆ. ಅಂತಹದ್ದರಲ್ಲಿ ಈ ಸಂವಿಧಾನವನ್ನು ರಕ್ಷಿಸುವ ಜವಾಬ್ದಾರಿಯನ್ನು ಹೊರುತ್ತೇನೆಂದು, ಪ್ರಮಾಣ ಮಾಡಿ ಅಧಿಕಾರ ಸ್ವೀಕಾರ ಮಾಡಿ ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತಿರುವ ಒಬ್ಬ ವ್ಯಕ್ತಿ ಸಂವಿಧಾನವನ್ನೇ ಉಲ್ಲಂಘಿಸಿದ್ದಾರೆ. ಈ ರಾಜ್ಯದ ಜನತೆ ಮತ್ತು ಈ ನೆಲದ ಕಾನೂನು ಸುಮ್ಮನಿರಬೇಕೇ?

ಬಸವಣ್ಣನ ವಾರಸುದಾರರು ಎಂದು ಹೇಳಿಕೊಳ್ಳುವವರೂ ಯೋಚಿಸಬೇಕು. ಬಸವಣ್ಣನವರು ಮೌಢ್ಯತೆಯ ವಿರುದ್ಧ 12ನೆಯ ಶತಮಾನದಲ್ಲಿ ಸಿಡಿದೆದ್ದಿದ್ದರು. ಅವರ ವಾರಸುದಾರರೆಂಬ ಮಠಾಧೀಶರಿಗೆ, ಸ್ವಾಮಿಗಳಿಗೆ ಇದು ತಿಳಿಯದೇ? ಐದು ವರ್ಷ ಪೂರ್ತಿ ಆಡಳಿತ ಮಾಡಿ ಎಂದು ಬೀದಿಗಿಳಿಯುವ ಎಚ್ಚರಿಕೆ ನೀಡಿದ ನೀವು ಈಗೇನು ಮಾಡುವಿರಿ? ರಾಜೀನಾಮೆ ಕೊಡಿಸುವಿರಾ? ಈ ವಿವಾದಕ್ಕೆ ಕಾರಣವಾದರೂ ಏನು?

'ನಿಮ್ಮ ಭ್ರಷ್ಟಾಚಾರಗಳನ್ನು ದಾಖಲೆಗಳ ಸಮೇತ ಬಹಿರಂಗಪಡಿಸುತ್ತೇನೆ' ಎಂದು ಮಾಜಿ ಮುಖ್ಯಮಂತ್ರಿಯವರು ಹೇಳಿದರೆ, ಅದು ಸುಳ್ಳು ಆರೋಪ ಆಗಿದ್ದರೆ ಅದನ್ನು ತನಿಖೆಗೆ ಒಳಪಡಿಸಬೇಕಿತ್ತು. ಅಥವಾ ಅವರ ವಿರುದ್ಧ ಮಾನನಷ್ಟ ಮೊಕದ್ದಮೆಯನ್ನು ಹೂಡಬಹುದಿತ್ತು. ಆದರೆ ಒಂದು ಕಾನೂನಿನ ಬಗ್ಗೆ ಗೌರವವಿಲ್ಲ ಅಥವಾ ಅದರ ಬಗ್ಗೆ ಭಯ. ಯಾಕೆಂದರೆ ಕಾನೂನಿನ ಪ್ರಕಾರ ಹೋದರೆ ತನ್ನ ಭ್ರಷ್ಟಾಚಾರ ಎಲ್ಲಿ ಬಯಲಿಗೆ ಬರುತ್ತೋ ಎಂಬ ಭಯ ಮತ್ತು ಸತ್ಯವನ್ನು ಮುಚ್ಚಿಡುವ ಹುನ್ನಾರ.

ಮಂಜುನಾಥನ ಮುಂದೆ ನಾನು ಪ್ರಮಾಣ ಮಾಡುತ್ತೇನೆಂದು ಹೇಳುತ್ತಿರುವುದರ ಹಿಂದೆ ಇರುವ ಉದ್ದೇಶ ಸಿಕ್ಕಿ ಬೀಳುವುದರಿಂದ ತಪ್ಪಿಸಿಕೊಳ್ಳುವುದು.

ಇಂತಹ ಮುಖ್ಯಮಂತ್ರಿ ರಾಜೀನಾಮೆ ಕೊಟ್ಟು ತೊಲಗಲಷ್ಟೇ ಯೋಗ್ಯರು. ಬ್ರಹ್ಮಾಂಡ ಭ್ರಷ್ಟಾಚಾರ, ಅಧಿಕಾರ ದುರುಪಯೋಗ ಮಾಡಿದ ನೀವು ತೊಲಗದಿದ್ದರೆ ಜನರೇ ಶಿಕ್ಷಿಸಬೇಕೆ? ಭ್ರಷ್ಟಾಚಾರ ಮುಚ್ಚಿಹಾಕಿಕೊಳ್ಳಲು ಮಂಜುನಾಥನ ಮೇಲೆ ಹೋಗಿರುವುದೇ ಲಜ್ಜೆಗೇಡಿತನವಾಗಿದೆ.

ಮುಖ್ಯಮಂತ್ರಿಯಾಗಿ ಕೈಯಲ್ಲಿ ಪರಮಾಧಿಕಾರವಿದೆ ಅನೇಕ ತನಿಖಾ ಸಂಸ್ಥೆಗಳು ಅವರ ಕೈಯಲ್ಲಿವೆ. ಹಾಗಿದ್ದರೂ ಯಾಕೆ ತನಿಖೆ ಮಾಡಿಸಲಿಲ್ಲ. ಏಕೆಂದರೆ ಕುಮಾರಸ್ವಾಮಿ ಜೊತೆಗೆ ರಾಜಿ ಮಾಡಿಕೊಳ್ಳಲು ಹೋಗಿರುವುದು ನಿಜ. ಮುಖ್ಯಮಂತ್ರಿಗಳು ಭ್ರಷ್ಟಾಚಾರದಲ್ಲಿ ಮುಳುಗಿರುವುದು ನಿಜ. ಈ ಸತ್ಯವನ್ನು ಮುಚ್ಚಿಹಾಕಲು ಮೌಢ್ಯತೆ ಮತ್ತು ಮೂರ್ಖತನವನ್ನು ಪ್ರಚಾರ ಮಾಡಲು ಸಾರ್ವಜನಿಕ ಹಣವನ್ನು ಉಪಯೋಗಿಸಿ ಜಾಹೀರಾತುಗಳನ್ನು ಕೊಡಲು ಇವರಿಗೆ ಅಧಿಕಾರ ಕೊಟ್ಟವರ್ಯಾರು? ಈ ಬಗ್ಗೆ ಈ ರಾಜ್ಯದ ಪ್ರಜ್ಞಾವಂತ ಜನರು ಗಂಭೀರವಾಗಿ ಚಿಂತಿಸಬೇಕಿದೆ ಮತ್ತು ಇಂತಹ ಅನೈತಿಕ, ಅಜ್ಞಾನದ ಮೌಢ್ಯತೆ ಯನ್ನು ತುಂಬಲು ಪ್ರಯತ್ನ ಗಳಿಂದ ಈ ರಾಜ್ಯವನ್ನು ರಕ್ಷಿಸಬೇಕಾಗಿದೆ. ●

ಜುಲೈ 15-21 ಭ್ರಷ್ಟಾಚಾರದ ವಿರುದ್ಧ ಎಡಪಕ್ಷಗಳ ಆಂದೋಲನ

ಯುಪಿಎ-2 ಸರಕಾರದ ಅಡಿಯಲ್ಲಿ ಹಾಗೂ ದೇಶಾದ್ಯಂತ ನಡೆದಿರುವ ಭ್ರಷ್ಟಾಚಾರವನ್ನು ವಿರೋಧಿಸಿ ಹಾಗೂ ಸಾರ್ವಜನಿಕ ಜೀವನದ ಎಲ್ಲ ರಂಗಗಳಲ್ಲಿ ಭ್ರಷ್ಟಾಚಾರವನ್ನು ತಡೆಯಲು ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆಗ್ರಹಿಸಿ ಜುಲೈ 15 ರಿಂದ 21 ರವರೆಗೆ ದೇಶವ್ಯಾಪಿ ಆಂದೋಲನ ನಡೆಸಲು ಸಿಪಿಐ(ಎಂ) ಸೇರಿದಂತೆ ನಾಲ್ಕು ಎಡಪಕ್ಷಗಳು ನಿರ್ಧರಿಸಿವೆ. ಈ ಆಂದೋಲನ ಈ ಕೆಳಗಿನ ಬೇಡಿಕೆಗಳನ್ನು ಆಧರಿಸಿರುತ್ತದೆ.

1. ಒಂದು ಪರಿಣಾಮಕಾರಿ ಲೋಕಪಾಲ ಕಾನೂನಿನ ಅಂಗೀಕಾರ
2. ಉನ್ನತ ನ್ಯಾಯಾಂಗದಲ್ಲಿ ಭ್ರಷ್ಟಾಚಾರವನ್ನು ತಡೆಯಲು ಒಂದು ರಾಷ್ಟ್ರೀಯ ನ್ಯಾಯಾಂಗ ಆಯೋಗ
3. 2ಜಿ ತರಂಗಾಂತರದಂತಹ ಹಗರಣಗಳಿಗೆ ಕಾರಣವಾದ ಉದ್ಯಮಿ-ರಾಜಕಾರಣಿ-ಅಧಿಕಾರಶಾಹಿ ದುಷ್ಟಕೂಟ ಪೋಷಿಸುವ ವ್ಯಾಪಕ ಭ್ರಷ್ಟಾಚಾರದ ವಿರುದ್ಧ ಕಠಿಣ ಕ್ರಮಗಳು
4. ಚುನಾವಣೆಗಳಲ್ಲಿ ಭ್ರಷ್ಟ ಆಚರಣೆಗಳನ್ನು ತಡೆಯಲು ಆನುಪಾತಿಕ ಪ್ರಾತಿನಿಧ್ಯ ಸೇರಿದಂತೆ, ಚುನಾವಣಾ ಸುಧಾರಣೆಗಳು
5. ಕಪ್ಪುಹಣವನ್ನು ಹೊರತೆಗೆಯಲು ಮತ್ತು ವಿದೇಶಗಳಲ್ಲಿ ಪೇರಿಸಿಟ್ಟಿರುವ ಕಾನೂನು ಬಾಹಿರ ಹಣವನ್ನು ದೇಶಕ್ಕೆ ವಾಪಾಸು ತರಲು ಕ್ರಮಗಳು.

ಈ ಒಂದು ವಾರದಲ್ಲಿ ಎಡಪಕ್ಷಗಳು ಸರಕಾರಿ ಕಚೇರಿಗಳ ಪಿಕೆಟಿಂಗ್, ಮತ ಪ್ರದರ್ಶನ ಗಳು, ರ್‍ಯಾಲಿಗಳು, ಧರಣಿಗಳ ಮೂಲಕ ಈ ಚಳುವಳಿಯನ್ನು ನಡೆಸುತ್ತವೆ. ಮಳೆಗಾಲದ ಅಧಿವೇಶನ ಜುಲೈನಲ್ಲಿ ಆರಂಭವಾಗಬೇಕಿದ್ದು(ಈಗ ಅದನ್ನು ಆಗಸ್ಟ 1 ಕ್ಕೆ ಮುಂದೂಡಲಾಗಿದೆ)ಆ ವೇಳೆಯಲ್ಲಿ ಸಂಸತ್ತಿನ ಎದುರು ಒಂದು ಮತಪ್ರದರ್ಶನ ನಡೆಸುವ ಯೋಜನೆಯನ್ನೂ ಹಾಕಿಕೊಳ್ಳಲಾಗಿತ್ತು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಪಾಲಿಕೆ 'ಟೈಗರ್'ನ್ನು ತಡೆದು ನಿಲ್ಲಿಸಿದ ಧೀರರು

ಮಂಗಳೂರಿನಲ್ಲಿ ಬೀದಿಬದಿ ವ್ಯಾಪಾರಿಗಳಿಂದ ಮುಂದುವರಿದ ಪ್ರತಿಭಟನೆ

ಜೂನ್ 15ರಿಂದ ಮರುದಿನ ಬೆಳಗಿನವರೆಗೆ ಮಂಗಳೂರು ಮಹಾನಗರ ಪಾಲಿಕೆಯ ಕಛೇರಿ ಮುಂದೆ 24 ಗಂಟೆಗಳ ಧರಣಿ ಸತ್ಯಾಗ್ರಹವನ್ನು ಹೋರಾಟ ಸಮಿತಿ, 700 ಮೀರಿದ ಬೆಂಬಲಿಗರೊಂದಿಗೆ ಧಾರಾಕಾರ ಮಳೆಯ ಮಧ್ಯೆ ನಡೆಸಿತ್ತಾದರೂ, ಪಾಲಿಕೆಯ ಆಡಳಿತದ ವತಿಯಿಂದ ಯಾರೊಬ್ಬರೂ ಧರಣಿ ನಿರತರನ್ನು ಮಾತನಾಡಲು ಮುಂದಾಗಲಿಲ್ಲ. ಇದರಿಂದ ಹೋರಾಟ ಸಮಿತಿಯಲ್ಲಿ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಬೇಕೆಂಬ ಸಲಹೆಗಳು ಮೂಡಿಬಂದಿವೆ. ಇದರ ಭಾಗವಾಗಿ ಪಾಲಿಕೆಯ ಬಿಜೆಪಿ ಕಾರ್ಪೋರೇಟರ್‌ಗಳಲ್ಲಿ ಸಚೇತಕ ರಾಗಿರುವ ಸುಧೀರ್ ಶೆಟ್ಟಿ ಇವರ ಪಾಲಿಕೆ ವಾರ್ಡ್ ಕಣ್ಣೂರಿನಲ್ಲಿ... ಜೂನ್ 20ರಂದು ಪ್ರತಿಭಟನಾ ಪ್ರದರ್ಶನ ಕೈಗೊಳ್ಳುವುದೆಂದು ನಿರ್ಣಯಿಸಲಾಯಿತು.

ಕಣ್ಣೂರಿನ ಚೆಕ್‌ಪೋಸ್ಟ್ ಬಳಿಯಿಂದ ಮೆರವಣಿಗೆಯಲ್ಲಿ ಹೊರಟ ಇನ್ನೂರರಷ್ಟು ಪ್ರತಿಭಟನಾಕಾರರು ಕಣ್ಣೂರಿನ ರಾಜೇಶ್ ಮೈದಾನದಲ್ಲಿ ಜಮಾವಣೆಗೊಂಡರು. ವಿವಿಧ ಪಕ್ಷಗಳ ಹಾಗೂ ಸಂಘಟನೆಗಳ ಕಾರ್ಯಕರ್ತರೊಂದಿಗೆ ಸ್ಥಳೀಯ ನಾಗರೀಕರು ಭಾಗವಹಿಸಿದ್ದರು. ಮಂಗಳೂರು ನಗರದಲ್ಲಿ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸದೆ ಬೀದಿ ಬದಿ ವ್ಯಾಪಾರಸ್ಥರನ್ನು ಎತ್ತಂಗಡಿ ಮಾಡಬಾರದು, ಟೈಗರ್ ಲಾರಿ ಕಾರ್ಯಾಚರಣೆಯನ್ನು ನಿಲ್ಲಿಸಬೇಕು ಎಂಬುದಾಗಿ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಎಲ್ಲರೂ ಆಗ್ರಹಿಸಿದರು.

ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಜೆ.ಬಾಲಕೃಷ್ಣಶೆಟ್ಟಿ ಮಾತನಾಡಿ, ಪಾಲಿಕೆಯಲ್ಲಿ ಅಧಿಕಾರದಲ್ಲಿರುವ ಬಿಜೆಪಿ ನೀರಿನ ಖಾಸಗೀಕರಣ, ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿ, ಟೈಗರ್ ಕಾರ್ಯಾಚರಣೆ ಮುಂತಾದ ಕರಾಳ ನೀತಿಗಳನ್ನು ಜಾರಿಗೊಳಿಸುತ್ತಿದ್ದು, ಅದರ ವಿರುದ್ಧ ಬೃಹತ್ ಜನಾಂದೋಲನ ರೂಪಿಸಬೇಕಿದೆ" ಎಂದರು. ಎಐಸಿಸಿ ಸದಸ್ಯ ಹಾಗೂ ಹೋರಾಟಗಾರ ಪಿ.ವಿ.ಮೋಹನ್, ಜಾತ್ಯಾತೀತ ಜನತಾದಳದ ಮುಖಂಡರಾದ ಎಂ.ಜಿ.ಹೆಗಡೆ, ಸುಕುಮಾರ್‌ರಾವ್, ಅಜೀಜ್ ಕುದ್ರೋಳಿ, ಜೆ.ಮಹಮ್ಮದ್, ಶಶಿರಾಜ್ ಶೆಟ್ಟಿ, ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ, ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ.ಯಾದವಶೆಟ್ಟಿ, ರಿಕ್ಷಾಚಾಲಕರ ಸಂಘಟನೆಯ ಎಲ್.ಟಿ.ಸುವರ್ಣ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು



ಬೀದಿಬದಿ ವ್ಯಾಪಾರಿಗಳ ಸಂಘದ ಗೌರವಾಧ್ಯಕ್ಷರಾದ ಸುನೀಲ್‌ಕುಮಾರ್ ಬಜಾಲ್, ಬಿ.ಎಂ.ಹಸನ್, ಸಂತೋಷ್, ಮುಸ್ತಾಫಾ, ಬಷೀರ್, ಶೋಭಾ, ಮೇರಿ ಡಿಸೋಜಾ ಹಾಗೂ ಡಿವೈಎಫ್‌ಐನ ಸಂತೋಷ್ ಬಜಾಲ್, ಯೋಗೇಶ್ ಜಪ್ಪಿನ ಮೊಗ್ರು ಮೊದಲಾದವರು ವಹಿಸಿದ್ದರು.

★

ಕಮೀಷನರುಗಳಿಗೆ ವಕೀಲಿ ನೋಟೀಸು

ಈ ಮಧ್ಯೆ ಹೋರಾಟ ಸಮಿತಿಯ ತೀರ್ಮಾನದಂತೆ, ಸುಪ್ರೀಂಕೋರ್ಟ್ ತೀರ್ಪುಗಳು ಹಾಗೂ ಬೀದಿಬದಿ ವ್ಯಾಪಾರದ ಬಗ್ಗೆ ಸರ್ಕಾರದ ರಾಷ್ಟ್ರೀಯ ನೀತಿಗೆ ವಿರುದ್ಧವಾಗಿ ಬೀದಿಬದಿ ವ್ಯಾಪಾರಸ್ಥರನ್ನು ಟೈಗರ್ ಕಾರ್ಯಾಚರಣೆ ಮೂಲಕ ಎತ್ತಂಗಡಿ ಮಾಡುತ್ತಿರುವ ಮಹಾನಗರ ಪಾಲಿಕೆಯ ಕಾನೂನು ಬಾಹಿರ ಕಾರ್ಯಾಚರಣೆಗೆ ಅವಕಾಶ ನೀಡುತ್ತಿರುವ ಅಧಿಕಾರಿ ಗಳಿಗೆ ನ್ಯಾಯಾಂಗ ನಿಂದನೆಗಾಗಿ ಯಾಕೆ ಕಾನೂನುಕ್ರಮ ಕೈಗೊಳ್ಳ ಬಾರದು ಎಂಬುದಾಗಿ ವಿವರಣೆ ಕೋರಿ ಮಂಗಳೂರು ಮಹಾನಗರ ಪಾಲಿಕೆ ಕಮೀಷನರ್‌ರಿಗೂ, ದ.ಕ.ಜಿಲ್ಲಾ ಪೋಲೀಸ್ ಕಮೀಷನರಿಗೂ ವಕೀಲಿ ನೋಟೀಸನ್ನು ಬೀದಿಬದಿ ವ್ಯಾಪಾರಿಗಳ ಸಂಘದ ವತಿಯಿಂದ ನೀಡಲಾಗಿದೆ.





ವಾಸುದೇವ ಉಚ್ಚಿಲ

ಆಮೇಲಿನ ಬೆಳವಣಿಗೆ ಯೊಂದರಲ್ಲಿ ಜೂನ್ 20ರ ಸಾಯಂಕಾಲ ಹೋರಾಟ ಸಮಿತಿ ಸದಸ್ಯರು ದ.ಕ. ಜಿಲ್ಲಾಧಿಕಾರಿ ಯವರನ್ನು ಅವರ ಕಛೇರಿ ಯಲ್ಲಿ ಕಂಡು ಸಮಸ್ಯೆಯನ್ನು ಕುರಿತು ಚರ್ಚಿಸಲು ಸಾಧ್ಯವಾಯಿತು. ತತ್‌ಕ್ಷಣದಲ್ಲಿ ಟೈಗರ್ ಕಾರ್ಯಾಚರಣೆಯನ್ನು ನಿಲ್ಲಿಸಲು ಸಾಧ್ಯವಿಲ್ಲವೆಂದು ಜಿಲ್ಲಾಧಿಕಾರಿಗಳು ತಿಳಿಸಿದರೂ, ನಗರ ಪಾಲಿಕೆ ಕಮೀಷನರ್‌ರನ್ನು ವಾರದೊಳಗೆ ಭೇಟಿಯಾಗಿ ಚರ್ಚಿಸಿ ನಿರ್ಧಾರಕ್ಕೆ ಬರುವುದಾಗಿ ತಿಳಿಸಿದರು.

★

ಮತ್ತೊಬ್ಬ ಕಾರ್ಪೋರೇಟರ್ ವಾರ್ಡಿನಲ್ಲಿ ಪ್ರತಿಭಟನೆ

ಮಂಗಳೂರು ನಗರ ಕೇಂದ್ರಕ್ಕೆ ಅತಿ ಸಮೀಪದ ಪಾಂಡೇಶ್ವರ ವಾರ್ಡನ್ನು ಬಿಜೆಪಿ ಕಾರ್ಪೋರೇಟರ್ ದಿವಾಕರ್ ಪ್ರತಿನಿಧಿ ಸುತ್ತಿದ್ದಾರೆ. ಬಿಜೆಪಿ ಕಾರ್ಪೋರೇಟರ್‌ಗಳ ಪ್ರತಿ ಕ್ಷೇತ್ರದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳುವುದರ ಭಾಗವಾಗಿ, ಜೂನ್ 22ರಂದು ಬೆಳಗ್ಗೆ ಬೀದಿಬದಿ ವ್ಯಾಪಾರಸ್ಥರು ನಗರ ಕೇಂದ್ರದ ನೆಹರೂ ಮೈದಾನದ ಬಳಿಯಿಂದ ಪಾಂಡೇಶ್ವರ ದವರೆಗೆ ಮೆರವಣಿಗೆಯಲ್ಲಿ ಪಾಲಿಕೆ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಸಾಗಿ ಪಾಂಡೇಶ್ವರ ಕಟ್ಟೆ ಬಳಿ ಪ್ರದರ್ಶನ ನಡೆಸಿದರು.

ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ, ಹೋರಾಟ ಸಮಿತಿಯ ಸಂಚಾಲಕ ಸುನೀಲ್‌ಕುಮಾರ್ ಬಜಾಲ್, ಜೆಡಿ(ಎಸ್) ಜಿಲ್ಲಾ ನಾಯಕರಾದ ಶಶಿರಾಜ್ ಶೆಟ್ಟಿ, ಜೆಡಿ(ಎಸ್) ಕಾರ್ಪರೇಟರ್ ಅಜೀಜ್ ಕುದ್ರೋಳಿ, ವ್ಯಾಪಾರಸ್ಥರ ಸಂಘದ ಬಿ.ಎಂ.ಹಸನ್, ಮುಸ್ತಾಫಾ ಪ್ರತಿಭಟನಾಕಾರರ ನ್ನುದ್ದೇಶಿ ಮಾತನಾಡಿದರು. ಹೋರಾಟದ ನೇತೃತ್ವವನ್ನು ಬೀದಿ ವ್ಯಾಪಾರಸ್ಥರ ಸಂಘದ ಸಮಿತಿ ಸದಸ್ಯರೇ ವಹಿಸಿದ್ದರು.

★

ಸರಕು ಸಂಗ್ರಹ ಹೊತ್ತೊಯ್ಯುತ್ತಿದ್ದ 'ಟೈಗರ್'ಗೆ ಬೀದಿ ವ್ಯಾಪಾರಿಗಳ ತಡೆ:

ಒಂದೆಡೆ ಪಾಂಡೇಶ್ವರ ಬೀದಿಬದಿ ವ್ಯಾಪಾರಿಗಳ ಪ್ರತಿಭಟನಾ ಪ್ರದರ್ಶನ ನಡೆಸುತ್ತಿದ್ದರೆ, ಅದೇ ವೇಳೆಗೆ ಇನ್ನೊಂದೆಡೆ ನಗರ ಕೇಂದ್ರವಾದ ಸ್ಟೇಟ್ ಬ್ಯಾಂಕ್ ಬಳಿ ಬೀದಿಬದಿ ವ್ಯಾಪಾರಿಗಳು ಹಗಲು ವೇಳೆ ಸ್ಟೇಟ್ ಬ್ಯಾಂಕ್, ಲೇಡಿಗೋಶನ್ ಪರಿಸರದಲ್ಲಿ ವ್ಯಾಪಾರ ಮಾಡುತ್ತಿದ್ದಾಗ, ರಾತ್ರಿ ವೇಳೆ ಸರಕುಗಳನ್ನು ಒಂದೆಡೆ ಸಂಗ್ರಹಿಸಿರುವ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಈ ಹಿಂದಿನ 'ಟೈಗರ್' ಕಾರ್ಯಾಚರಣೆಯಲ್ಲಿ ಕಳೆದುಕೊಂಡಿದ್ದ ಸರಕುಗಳನ್ನು ಹೊರತುಪಡಿಸಿ ಉಳಿದವನ್ನು ನಾಲ್ಕೈದು ವ್ಯಾಪಾರಸ್ಥರು ಒಂದೆಡೆ ಸಂಗ್ರಹಿಸಿಟ್ಟಿದ್ದರು. ಪಾಂಡೇಶ್ವರದಲ್ಲಿ ಪ್ರತಿಭಟನೆ ನಡೆಯುತ್ತಿದ್ದ ವೇಳೆ ಪಾಲಿಕೆಯ 'ಟೈಗರ್' ಕಾರ್ಯಪಡೆ ಧಾಳಿ ಮಾಡಿ ಆ ಸಾಮಗ್ರಿಗಳನ್ನು 'ಟೈಗರ್' ವಾಹನಕ್ಕೆ ತುಂಬಿಸಿತು.

ಈ ವಿಚಾರ ತಿಳಿಯುತ್ತಿದ್ದಂತೆಯೇ ಪಾಂಡೇಶ್ವರದಲ್ಲಿ ಪ್ರತಿಭಟನೆ ನಡೆಸುತ್ತಿದ್ದ ವಿವಿಧ ಸಂಘಟನೆಗಳ ನೂರಕ್ಕೂ ಅಧಿಕ ಕಾರ್ಯಕರ್ತರು ಮತ್ತು ಬೀದಿಬದಿ ವ್ಯಾಪಾರಿಗಳು ಕೂಡಲೇ ಸ್ಥಳಕ್ಕೆ ಧಾವಿಸಿ, 'ಟೈಗರ್' ಲಾರಿಯನ್ನು ಅಡ್ಡಗಟ್ಟಿ ಸಾಮಗ್ರಿಗಳನ್ನು ತಮ್ಮ ವಶಕ್ಕೆ ಪಡೆದುಕೊಂಡರು. ಅಲ್ಲಿ ಹಾಜರಿದ್ದ ಪಾಂಡೇಶ್ವರ ಪೋಲೀಸರು ಪ್ರತಿಭಟನಾಕಾರರ ಮನಒಲಿಸಲು ಪ್ರಯತ್ನಿಸಿದರು. ಪೋಲಿಸರು ಮತ್ತು ಪ್ರತಿಭಟನಾಕಾರರ ನಡುವೆ ಮಾತಿನ ಚಕಮಕಿ ನಡೆಯಿತು. ಬಳಿಕ 'ಟೈಗರ್' ವಾಹನ ಬರಿಗೈಲಿ ತೆರಳಲು ಅವಕಾಶ ಮಾಡಿಕೊಡಲಾಯಿತು.



ಈ ವೇಳೆ ಮಾತನಾಡಿದ ಹೋರಾಟ ಸಮಿತಿ ಸಂಚಾಲಕ ಸುನೀಲ್‌ಕುಮಾರ್ ಬಜಾಲ್ ಪ್ರತಿಭಟನೆಯನ್ನು ಇನ್ನಷ್ಟು ತೀವ್ರಗೊಳಿಸ ಲಾಗುವುದೆಂದೂ, ಶಾಸಕರಾಗಿರುವ ವಿಧಾನ ಸಭಾ ಉಪಾಧ್ಯಕ್ಷ ಯೋಗೀಶ್ ಭಟ್ ಮನೆ ಮುಂದೆ ಪ್ರತಿಭಟನೆ ನಡೆಸಲಾಗುವುದೆಂದೂ,

ಪುಟ 15ಕ್ಕೆ

ಸಂಸತ್ತಿನ ಮುಂಗಾರು ಅಧಿವೇಶನವನ್ನು ವಿಳಂಬಗೊಳಿಸಲು ನಿರ್ಧರಿಸುವ ಮೂಲಕ ಯುಪಿಎ-2 ಸರಕಾರ ಸಂಸದೀಯ ಪ್ರಜಾಪ್ರಭುತ್ವಕ್ಕೆ 'ನಾಗರಿಕ ಸಮಾಜ'ದ ಕೆಲವು ವಿಭಾಗಗಳು ತೋರಿಸುತ್ತಿರುವ ತುಚ್ಛೀಕಾರವನ್ನು ಇನ್ನಷ್ಟು ಹೆಚ್ಚಿಸಿದೆ, ಈ ಜನಗಳ ಪ್ರಜಾಪ್ರಭುತ್ವ-ವಿರೋಧಿ ನಿಲುವುಗಳಿಗೆ ಗ್ರಾಸ ಒದಗಿಸಿ ಕೊಟ್ಟಿದೆ. ಬಹುಶಃ ಅದು ಶಾಸಕಾಂಗಕ್ಕೆ ಜವಾಬುದಾರನಾಗಿರಬೇಕಾದ ತನ್ನ ಕರ್ತವ್ಯದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಸ್ವತಃ ಇದು ಕೂಡ ನಮ್ಮ ಸಂವಿಧಾನಿಕ ವಿಧಿ-ವಿಧಾನಗಳನ್ನು ಇನ್ನಷ್ಟು ಬುಡಮೇಲು ಮಾಡುವಂತದ್ದು. ಈ ಮೂಲಕ ಸರಕಾರ ಸಮಸ್ಯೆಯನ್ನು ದೀರ್ಘಕ್ಕೆ ಎಳೆದು, ಅದರ ಪರಿಹಾರವನ್ನು ತಡೆಯುತ್ತದಷ್ಟೇ. ಇದು ಅಕ್ಷಮ್ಯ.

ನಮ್ಮ ಸಂಸದೀಯ ಪ್ರಜಾಪ್ರಭುತ್ವಕ್ಕೆ ತೋರಿಸುತ್ತಿರುವ ತುಚ್ಛೀಕಾರವಷ್ಟೇ ಅಲ್ಲ, ಅದನ್ನು ಬುಡಮೇಲು ಮಾಡುವ ಪ್ರಯತ್ನ ಕೂಡ.

ಜನತೆಯ ಸಾರ್ವಭೌಮತೆ

ನಮ್ಮ ಸಂವಿಧಾನಿಕ ವಿಧಿ-ವಿಧಾನಗಳಲ್ಲಿ ಜನತೆಯ ಸಾರ್ವಭೌಮತೆ ರಾಜ್ಯ ಶಾಸಕಾಂಗಗಳಿಗೆ ಮತ್ತು ಸಂಸತ್ತಿಗೆ ಚುನಾಯಿಸಲ್ಪಟ್ಟ ಅವರ ಪ್ರತಿನಿಧಿಗಳ ಮೂಲಕ ಚಾಲನೆ ಪಡೆಯುತ್ತದೆ. ಕಾರ್ಯಾಂಗ(ಅಂದರೆ ಸರಕಾರ) ಶಾಸಕಾಂಗಕ್ಕೆ, ಆಮೂಲಕ ಜನತೆಗೆ ಜವಾಬ್ದಾರನೂ ಆಗಿರುತ್ತದೆ, ಹೊಣೆಗಾರನೂ ಆಗಿರುತ್ತದೆ. ಜನತೆಯನ್ನು ಪ್ರತಿನಿಧಿಸುವ ಚುನಾಯಿತ ಪ್ರತಿನಿಧಿಗಳ ಹಕ್ಕನ್ನು

ಸಂಸತ್ತು ಕನಿಷ್ಟ ನೂರು ದಿನಗಳ ಕಾಲ ಸಭೆ ಸೇರಲೇಬೇಕು

ಸಂಸತ್ತು ವರ್ಷದಲ್ಲಿ ಕನಿಷ್ಟ ನೂರು ದಿನ ಸಭೆ ಸೇರಬೇಕು ಎಂದು ಎಡಪಕ್ಷಗಳು ಸದಾ ಆಗ್ರಹಿಸುತ್ತಾ ಬಂದಿವೆ. ಇತ್ತೀಚಿನ ದಶಕಗಳಲ್ಲಿ ಇದು ಎಂದೂ ಈಡೇರಿಲ್ಲ. ಒಂದು ಶಾಸನವನ್ನು ಸಂಸತ್ತು ಮಾತ್ರವೇ ಮಾಡಬಲ್ಲುದು. ಆದರೆ ಇದಷ್ಟೇ ಸಂಸತ್ತಿನ ಕೆಲಸವಲ್ಲ. ಸರಕಾರ ಜವಾಬುದಾರಿಕೆ ವಹಿಸುವಂತೆ ಮಾಡುವುದು ಮತ್ತು ಸಾರ್ವಜನಿಕ ಮಹತ್ವದ ವಿಷಯಗಳತ್ತ ಸರಕಾರದ ಗಮನ ಸೆಳೆಯುವುದು ಕೂಡ ಅದರ ಕೆಲಸ. ಸಂಸತ್ತಿನ ಅವಧಿಯನ್ನು ಕಡಿತಗೊಳಿಸುವುದೆಂದರೆ, ಸರಕಾರ ತನ್ನ ಜವಾಬುದಾರಿಕೆಯಿಂದ ತಪ್ಪಿಸಿಕೊಳ್ಳುತ್ತದೆ. ಅತ್ತ ಜನತೆಯ ಮೇಲೆ ಹೊರೆ ಹೇರಿರುವಂತಹ ಬೆಲೆಯೇರಿಕೆಯಂತಹ ತುರ್ತಿನ ಪ್ರಶ್ನೆಗಳತ್ತ ಗಮನ ಕೊಡಲಾಗುವುದಿಲ್ಲ. ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸಂಸತ್ತು ಕನಿಷ್ಟ ನೂರು ದಿನಗಳ ಕಾಲ ಸಭೆ ಸೇರಲೇಬೇಕೆಂದು, ಅಗತ್ಯವೆನಿಸಿದರೆ, ಒಂದು ಸಂವಿಧಾನ ತಿದ್ದುಪಡಿಯ ಮೂಲಕ, ವಿಧಿಸಬೇಕು.

ಮತ್ತೆ ಸಂವಿಧಾನಿಕ ವ್ಯವಸ್ಥೆಯನ್ನು ಬುಡಮೇಲು ಮಾಡುವ ಹುನ್ನಾರ

ರಂಗಾಲಾಗುವುದು, ಗಾಬರಿಯಿಂದ ಪ್ರತಿಕ್ರಿಯಿಸುವುದು ಈ ಯುಪಿಎ-2 ಸರಕಾರದ ಚಿರಪರಿಚಿತ ಲಕ್ಷಣವಾಗಿ ಬಿಟ್ಟಿದೆ. ಅದೀಗ ಸಂಸತ್ತಿನ ಮುಂಗಾರು ಅಧಿವೇಶನ ಕರೆಯುವುದನ್ನೇ ಮುಂದೂಡಿದೆ. ಸಾಮಾನ್ಯವಾಗಿ ಈ ಅಧಿವೇಶನ ಜುಲೈ ಮಧ್ಯದಲ್ಲಿ ಆರಂಭವಾಗಬೇಕು. ಈಗ ಅದನ್ನು ಆಗಸ್ಟ್ ಆರಂಭದ ವರೆಗೆ ಮುಂದೂಡಲಾಗಿದೆ. ಮೇಲ್ನೋಟಕ್ಕೆ ಇದು ಲೋಕಪಾಲ ಶಾಸನದ ಮೇಲೆ 'ನಾಗರಿಕ ಸಮಾಜ' ಎಂದೆನಿಸಿಕೊಂಡವರ ಕೆಲವು ವಿಭಾಗಗಳೊಡನೆ ಮಾತುಕತೆಗೆ ಸಮಯ ಗಳಿಸಲಿಕ್ಕಾಗಿ ಸರಕಾರಕ್ಕೆ ಅವಕಾಶ ಮಾಡಿಕೊಡಲು.

ಈ ಸಮಸ್ತ ವಿಷಯವನ್ನು ಸರಕಾರ ನಿರ್ವಹಿಸಿದ ವಿಲಕ್ಷಣ ರೀತಿ, ರಾಂದೇವ್‌ಗೆ ಸಂಬಂಧಪಟ್ಟಂತೆ ಮಾಡಿಕೊಂಡ ಅಧ್ವಾನ, ಆಡಳಿತ ನಡೆಸುವ ಅದರ ಸಾಮರ್ಥ್ಯದ ಮೇಲೆ ಕರಿನೆರಳು ಬೀರಿದೆ. ಆದರೆ, ವಾಸ್ತವವಾಗಿ ಈ ಮುಂದೂಡಿಕೆ ಹೊಸ-ಹೊಸ ಭ್ರಷ್ಟಾಚಾರದ ಹಗರಣಗಳು, ಈಗ ಅನಿಲ ವಲಯದ ಹಗರಣದಂತೆ, ಎದ್ದು ಬರುತ್ತಿರುವಾಗ ಪ್ರತಿಪಕ್ಷಗಳ ಬೇಡಿಕೆಗಳನ್ನು ಎದುರಿಸಲು, ಅವಕ್ಕೆ ಸ್ಪಂದಿಸಲು ಒಂದು ಕಾರ್ಯತಂತ್ರ ರೂಪಿಸಲಿಕ್ಕಾಗಿ ಸಮಯ ಗಿಟ್ಟಿಸಲಿಕ್ಕಾಗಿರಬಹುದು ಎಂದನಿಸುತ್ತದೆ.

ಆದರೆ, ಈ ಪ್ರಕ್ರಿಯೆಯಲ್ಲಿ, ಸರಕಾರದ ಈ ನಿರ್ಣಯ ಸಂಸದೀಯ ಪ್ರಜಾಪ್ರಭುತ್ವಕ್ಕೆ 'ನಾಗರಿಕ ಸಮಾಜ'ದ ಕೆಲವು ವಿಭಾಗಗಳು ತೋರಿಸುವ ತುಚ್ಛೀಕಾರವನ್ನು ಇನ್ನಷ್ಟು ಹೆಚ್ಚಿಸಿದೆ. 'ನಾಗರಿಕ ಸಮಾಜ'ದ ಕೆಲವು ಮುಖಂಡರು ಇಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ಕೋಟಿಗಟ್ಟಲೆ ಜನಗಳನ್ನು ಪ್ರತಿನಿಧಿಸುವ ಶಾಸಕರ, ಸಂಸತ್ ಸದಸ್ಯರ ಹಕ್ಕುಗಳನ್ನು ಪ್ರಶ್ನಿಸುತ್ತಿರುವುದನ್ನೂ ನಾವು ಕೇಳುತ್ತಿದ್ದೇವೆ. ಇದು ಪ್ರಶ್ನಿಸುವ ಈ 'ನಾಗರಿಕ ಸಮಾಜ' ಎಂಬುದು ಈ ವಿಧಿ-ವಿಧಾನಗಳನ್ನೇ ಬುಡಮೇಲು ಮಾಡುತ್ತಿದೆ.

ಸ್ವಾತಂತ್ರ್ಯದ ವೇಳೆಗೆ ನಾವು ನಮ್ಮ ಗಣತಂತ್ರ



ಕೃಪೆ : ದಿ ಹಿಂದೂ

ಸಂವಿಧಾನವನ್ನು ಅಂಗೀಕರಿಸಿದಾಗ, ಭಾರತ ಸಾರ್ವತ್ರಿಕ ವಯಸ್ಕ ಮತದಾನವನ್ನು ನೀಡುವ ಎದೆಗಾರಿಕೆಯ ಮತ್ತು ಧೈರ್ಯದ ಕ್ರಮವನ್ನು ಕೈಗೊಂಡಿತು. ಹಲವು ಮುಂದುವರೆದ ಪ್ರಜಾಪ್ರಭುತ್ವಗಳು ತಮ್ಮ ಜನರಿಗೆ ಈ ಹಕ್ಕು ನೀಡಲು ಶತಮಾನಗಳನ್ನಲ್ಲದಿದ್ದರೂ, ದಶಕಗಳನ್ನೇ ತೆಗೆದುಕೊಂಡವು. ಭಾರತದ ಸ್ವಾತಂತ್ರ್ಯ ಆಂದೋಲನದ ಶಕ್ತಿ ಎಂತಹುದೆಂದರೆ, ಇಂತಹ ಸಮಾನತೆಯನ್ನು ಸ್ವತಃ ಈ ನೀತಿಯ ಮೇಲೆ ಆಧರಿಸಿರದ ಒಂದು ಸಂವಿಧಾನದ ಸಭೆಯ ಮೂಲಕ ಸಾಧ್ಯವಾಗಿಸಿತು; ಆ ಸಂವಿಧಾನ ಸಭೆ ಆಸ್ತಿ ಒಡೆತನ ಇತ್ಯಾದಿ ಮಾನದಂಡಗಳ ಮೂಲಕ ಆರಿಸಲ್ಪಟ್ಟಿತ್ತು. ನಮ್ಮ ಗಣತಂತ್ರ ಸಂವಿಧಾನದಲ್ಲಿ ಈ 'ಒಬ್ಬ ವ್ಯಕ್ತಿ-ಒಂದು ಮತ-ಒಂದು ಮೌಲ್ಯ' ಎಂಬ ನೀತಿಯ ಮೂಲಕ ಜನತೆಯ ಸಾರ್ವಭೌಮತೆಯ ಪ್ರಾಧಾನ್ಯತೆ ಸಾಧ್ಯವಾಯಿತು. ಈ ಅನನ್ಯ ಮತ್ತು ಅತ್ಯಂತ ಪ್ರಜಾಸತ್ತಾತ್ಮಕ ಸ್ವರೂಪವನ್ನೇ ನಾಗರಿಕ ಸಮಾಜವೆಂಬುದರ ಈ ವಿಭಾಗಗಳು ಬುಡಮೇಲು ಮಾಡುವ ಪ್ರಯತ್ನದಲ್ಲಿರುವುದು. 'ನಾಗರಿಕ ಸಮಾಜ'ದ ಮುಖಂಡರು ಜನತೆಯ ಬಗ್ಗೆ, ಮತದಾರರ ಬಗ್ಗೆ ಮತ್ತು ಚುನಾವಣಾ ವ್ಯವಸ್ಥೆಯ ಬಗ್ಗೆ ಹೊಂದಿರುವ ಈ ತುಚ್ಛೀಕಾರವನ್ನು ತಿರಸ್ಕರಿಸಬೇಕು. 1977ರಲ್ಲಿ ಭಾರತೀಯ ಪ್ರಜಾಪ್ರಭುತ್ವದಲ್ಲಿನ ಸರ್ವಾಧಿಕಾರಶಾಹಿ ಎಳೆಯನ್ನು ತಮ್ಮ ಚುನಾವಣಾ ತೀರ್ಪುಗಳ ಮೂಲಕ ಸೋಲಿಸಿದ್ದು ಈ ಸಾಮಾನ್ಯ ಮತದಾರರೇ ಎಂಬುದನ್ನು ನೆನಪಿಸಿಕೊಳ್ಳುವುದು ಒಳ್ಳೆಯದು. ಅಂತಿಮವಾಗಿ ನೋಡುವಾಗ, 'ನಾಗರಿಕ ಸಮಾಜ' ಎಂದನಿಸಿಕೊಳ್ಳುವ ಈ ಮುಖಂಡರ 'ಮೊಂಬತ್ತಿ ಮೆರವಣಿಗೆ'ಗಳಿಗೆ, 'ಉಪವಾಸ ಮುಷ್ಕರ'ಗಳಿಗೆ ಅನುಕೂಲವಾದ ಪರಿಸ್ಥಿತಿಗಳನ್ನು ನಿರ್ಮಿಸಿರುವುದು ಈ ಸಾಮಾನ್ಯ ಮತದಾರರೇ.

ಪುಟ 15 ಕ್ಕೆ

'ಒಬ್ಬ ವ್ಯಕ್ತಿ-ಒಂದು ಮತ-ಒಂದು ಮೌಲ್ಯ'

ನಮ್ಮ ಗಣತಂತ್ರ ಸಂವಿಧಾನದಲ್ಲಿ 'ಒಬ್ಬ ವ್ಯಕ್ತಿ-ಒಂದು ಮತ-ಒಂದು ಮೌಲ್ಯ' ಎಂಬ ನೀತಿಯ ಮೂಲಕ ಜನತೆಯ ಸಾರ್ವಭೌಮತೆಗೆ ಪ್ರಾಧಾನ್ಯತೆ ದೊರೆತಿದೆ. ಈ ಅನನ್ಯ ಮತ್ತು ಅತ್ಯಂತ ಪ್ರಜಾಸತ್ತಾತ್ಮಕ ಸ್ವರೂಪವನ್ನೇ 'ನಾಗರಿಕ ಸಮಾಜ'(ಸಿವಿಲ್ ಸೊಸೈಟಿ)ವೆಂಬುದರ ಕೆಲವು ವಿಭಾಗಗಳು ಬುಡಮೇಲು ಮಾಡುವ ಪ್ರಯತ್ನದಲ್ಲಿರುವುದು. 'ನಾಗರಿಕ ಸಮಾಜ'ದ ಈ ಮುಖಂಡರು ಜನತೆಯ ಬಗ್ಗೆ, ಮತದಾರರ ಬಗ್ಗೆ ಮತ್ತು ಚುನಾವಣಾ ವ್ಯವಸ್ಥೆಯ ಬಗ್ಗೆ ಹೊಂದಿರುವ ಈ ತುಚ್ಛೀಕಾರವನ್ನು ತಿರಸ್ಕರಿಸಬೇಕು. 1977ರಲ್ಲಿ ಭಾರತೀಯ ಪ್ರಜಾಪ್ರಭುತ್ವದಲ್ಲಿನ ಸರ್ವಾಧಿಕಾರಶಾಹಿ ಎಳೆಯನ್ನು ತಮ್ಮ ಚುನಾವಣಾ ತೀರ್ಪುಗಳ ಮೂಲಕ ಸೋಲಿಸಿದ್ದು ಈ ಸಾಮಾನ್ಯ ಮತದಾರರೇ ಎಂಬುದನ್ನು ನೆನಪಿಸಿಕೊಳ್ಳುವುದು ಒಳ್ಳೆಯದು. 'ನಾಗರಿಕ ಸಮಾಜ' ಎಂದನಿಸಿಕೊಳ್ಳುವ ಈ ಮುಖಂಡರ 'ಮೊಂಬತ್ತಿ ಮೆರವಣಿಗೆ'ಗಳಿಗೆ, 'ಉಪವಾಸ ಮುಷ್ಕರ'ಗಳಿಗೆ ಅನುಕೂಲವಾದ ಪರಿಸ್ಥಿತಿಗಳನ್ನು ನಿರ್ಮಿಸಿರುವುದು ಈ ಸಾಮಾನ್ಯ ಮತದಾರರೇ.

ಜೋಯಿಡಾಕ್ಕೆ ಕನಿಷ್ಠ ನಾಗರೀಕ ಸೌಲಭ್ಯಗಳನ್ನಾದರೂ ಕೊಡಿ ಎಂದು ಇಲ್ಲಿನ ಜನತೆ ಹೋರಾಟ ಮಾಡುತ್ತಾ ಬಂದಿರುವುದು ನಮಗೆ ಗೊತ್ತೇ ಇದೆ. ಈಗ ಹೊಸ ಬೇಡಿಕೆ – ನಮ್ಮನ್ನು ಕಾಡಿನಿಂದ ಆಚೆ ದೂಡಬೇಡಿ ಅಂತ. ಹುಲಿ ಸಂರಕ್ಷಣೆ, ಅರಣ್ಯ ಸಂರಕ್ಷಣೆ ಖಂಡಿತ ಆಗಬೇಕು. ಅದರ ಜೊತೆ ಜನರ ರಕ್ಷಣೆಯೂ ಆಗಬೇಕಲ್ಲವೇ? ಈಗ ಈ ಜನತೆ ನಮ್ಮನ್ನು ಒಕ್ಕಲೆಬ್ಬಿಸಿ ದಿಕ್ಕಾಪಾಲು ಮಾಡಬೇಡಿ ಎಂದು ಹೋರಾಟ ನಡೆಸಬೇಕಾಗಿದೆ.

'ಕಪ್ಪು ಸುಂದರಿ' ಜೋಯಿಡಾ

ಜನರಿಗೀಗ ಒಕ್ಕಲೇಳುವ 'ಭಾಗ್ಯ'

ಯಮುನಾ ಗಾಂವ್ಕರ, ಕಾರವಾರ

ಸರ್ವ ಸಂಪನ್ನ ಜೋಯಿಡಾ ತಾಲೂಕು ಇದೀಗ ತನ್ನ ಒಡಲಿನಿಂದ ಕೆಲವು ಭಾಗದ ಮನುಷ್ಯರನ್ನು ಹೊರಹಾಕಲಿದೆಯಂತೆ; ಹಾಕಿಸುತ್ತಿದ್ದಾರಂತೆ! ಮುಕ್ಕಾಲು ಭಾಗ ಜೋಯಿಡಾ ವನ್ಯ ಧಾಮಕ್ಕೆ, ಅದರಲ್ಲೂ ವಿಶೇಷವಾಗಿ ಹುಲಿ ಯೋಜನೆ, ಆನೆ ಯೋಜನೆ, ಪಕ್ಷಿ ಯೋಜನೆಗಳಿಗೆ. ಅರಣ್ಯೀಕರಣದ ಹೆಸರಲ್ಲಿ ಮನುಷ್ಯ ಮಾತ್ರ ದಿಕ್ಕಾಪಾಲು! ಇಷ್ಟು ದಿನ ಮನುಷ್ಯ ಮತ್ತು ಪ್ರಾಣಿಗಳ ಸಂಬಂಧ ಚೆನ್ನಾಗಿಯೇ ಇದ್ದವಲ್ಲ!! ಅರಣ್ಯವೂ ಚೆನ್ನಾಗಿಯೇ ಇತ್ತು. ಜೊಯಿಡಾದ ಮೂಲ ನಿವಾಸಿಗಳಿಂದ ಕಾಡಿಗೆ-ಕಾಡು ಪ್ರಾಣಿಗಳಿಗೆ ಧಕ್ಕೆ ಬಂದಿರಲಿಲ್ಲ. ಆದರೆ, ಅರಣ್ಯ ರಕ್ಷಿಸುವ ಹೊಣೆ ಹೊತ್ತೂ ಅದರ ಭಕ್ಷಣೆ ಕಾಯಕದಲ್ಲೇ ಇದ್ದ ಕೆಲವು ಅಧಿಕಾರಶಾಹಿಗೆ, ಶ್ರೀಮಂತರ, ರಾಜಕಾರಣದ ತೆವಲಿಗೆ, ಗುತ್ತಿಗೆದಾರರ ಹಪಾಹಪಿತನಕ್ಕೆ ಜೋಯಿಡಾ ಬಲಿಯಾಯಿತು. ಇಂದು ಅದಕ್ಕೆ ನಿಜವಾದ ಧ್ವನಿ ನೀಡಬೇಕಿದೆ.

ರಾಜಸ್ತಾನದ ಸಾರಿಸ್ಕಾ ಅರಣ್ಯ ಪ್ರದೇಶವನ್ನು ಅರಣ್ಯ ಇಲಾಖೆಯ ತಾಬಾ ತೆಗೆದುಕೊಂಡರೂ ಅಲ್ಲಿ ಒಂದೇ ಒಂದು ಪ್ರಾಣಿಯೂ(ಹುಲಿ) ಇಲ್ಲದಂತಾಯಿತು. ಈ ಬಗ್ಗೆ ಪರ್ತಕರ್ತ ಮುಜುಂದಾರ್ ಸುದ್ದಿ ಮಾಡಿದ್ದರು. ಆದರೆ ಜೋಯಿಡಾ ಹಾಗೆ ಮಾಡಿಲ್ಲ. ಇನ್ನು ಸ್ಥಳೀಯರ ವಾಸವಿಲ್ಲದೆ ಅಂದರೆ ಮನುಷ್ಯಪ್ರಾಣಿಯ ಇರುವಿಕೆ ನಿಷೇಧಿಸಿದರೆ ಜೋಯಿಡಾದ ವನ್ಯ ಸಂಪತ್ತು ಹಾಗೂ ಪ್ರಾಣಿ ಸಂಕುಲ ಖಂಡಿತ ಹೆಚ್ಚು ದಿನ ಉಳಿಯಲಾರದು. ಅವೈಜ್ಞಾನಿಕ ಪ್ರವಾಸೋದ್ಯಮದ ಸೋಗಲಾಡಿತನಕ್ಕೆ, ಮನುಷ್ಯ ಕೇಂದ್ರಿತವಲ್ಲದ ಅಭಿವೃದ್ಧಿ ಪ್ರಣಾಳಿಕೆಗೆ ಇದೀಗ ಜೋಯಿಡಾದ ಜನ ಬಲಿಯಾಗುತ್ತಿದ್ದಾರೆ. ದೇಶದಲ್ಲಿಯೇ 4000ಕ್ಕೂ ಅಧಿಕ ಕುಟುಂಬಗಳು ವನ್ಯಧಾಮ ಮತ್ತು ವಿಶೇಷವಾಗಿ ಹುಲಿ ಯೋಜನೆಗೆ ಮನೆ-ಭೂಮಿ ಕಳಕೊಳ್ಳಲಿರುವವರಲ್ಲಿ ಜೋಯಿಡಾ ಮೊದಲ ಸಾಲಿನಲ್ಲಿದೆ.

ಹಿಂದೆ ಪೇಪರ್ ಮಿಲ್‌ಗೆ, ಸಾಮಿಲ್‌ಗೆ, ನಂತರ ಗಣಿಗಾರಿಕೆಯ ನೆಪದಲ್ಲಿ ಬಂದವರು ಸೂರ್ಯ ಕಿರಣ ಹೊಕ್ಕದ ಕಾಡನ್ನು ಹೊಕ್ಕೇ ಬಿಟ್ಟರು; ಲೂಟಿ ಮಾಡೇ ಬಿಟ್ಟರು. ಆದರೆ ಆದಿವಾಸಿಗಳು, ರೈತರು ದೈನಂದಿನ ಜೀವನಕ್ಕೆ ಕಾಡನ್ನು ಕಡಿಯದೇ ಕಾಡನ್ನೇ ದೇವರೆಂದು ಆಶ್ರಯಿಸಿದ್ದವರು, ಬಿದ್ದ ಒಣ ಉರುವಲು ಕಟ್ಟಿಗೆ ತಂದರೂ ಶಿಕ್ಷೆಗೊಳಗಾಗುವ ಪ್ರಸಂಗ ಬಂತು. ಹಾಗೆ ಕಾಳಿ ಜಲ ವಿದ್ಯುತ್ ಯೋಜನೆಗೆ ಭೂಮಿ ಕಳಕೊಂಡವರು ಇಂದು ಭೂಹೀನರಾಗಿದ್ದಾರೆ. ಇದೂವರೆಗೂ ಪರಿಹಾರ-ಪುನರ್ವಸತಿ ಕೆಲಸ ನಿಜವಾಗಿ ಪೂರ್ತಿಗೊಂಡಿಲ್ಲ.

ನಿಜವಾಗಿಯೂ ಆದಿವಾಸಿಗಳಾದ ಇಲ್ಲಿಯ ಕುಣಬಿ ಜನರನ್ನು ಪರಿಶಿಷ್ಟ ಪಂಗಡಕ್ಕೆ ಇನ್ನೂತನಕ ಸೇರಿಸದೇ ಸ್ವತಂತ್ರ ಭಾರತದಲ್ಲಿ ಅನ್ಯಾಯವೆಸಗಲಾಗಿದೆ. (ಸ್ವಲ್ಪ ಗೌಳಿ, ಸಿದ್ದಿ ಜನರೂ ಇದ್ದಾರೆ.) ಇವರಿಗೆ ಅತ್ತ ಅರಣ್ಯ ನಂಬಿ ಬದುಕಲಾರದ ಸ್ಥಿತಿ, ಇತ್ತ ಸಾಗುವಳಿ ಭೂಮಿಗೆ ಸೂಕ್ತ ದಾಖಲೆಗಳಿಲ್ಲದ ಪರದಾಟ. ಯಾರು ಇವರ ಗೋಳು ಕೇಳುವವರು?

ಜನರ ಸೇತುವೆ



ಜೋಯಿಡಾ ವಿಸ್ತೀರ್ಣದಲ್ಲಿ 1910.44 ಚ.ಕಿ.ಮಿ ಇದೆ. 3 ಹೋಬಳಿಗಳನ್ನು ಒಳಗೊಂಡಿದೆ. 15 ಗ್ರಾಮ ಪಂಚಾಯ್ತಿಗಳನ್ನು, 101 ಉಪ ಗ್ರಾಮಗಳನ್ನು, 114 ಜನ ವಸತಿ ಪ್ರದೇಶವನ್ನೂ 6 ಜನ ವಸತಿ ಇಲ್ಲದ ಪ್ರದೇಶಗಳನ್ನೂ ಹೊಂದಿದೆ.



ಕಾಡಿನ ಜನರ ಹಾಡು ಪಾಡು

ಕೆಲವರನ್ನಂತೂ ಎಲ್ಲಾ ದಾಖಲೆಗಳಿಂದಲೂ ವಂಚಿಸಲಾಗಿದೆ. ಇಲ್ಲಿ ಒಟ್ಟಾರೆ 48,914 ಜನ ವಾಸಿಸುತ್ತಿದ್ದಾರೆ. ಜೋಯಿಡಾದ ಅರಣ್ಯದಿಂದ ರಾಜ್ಯದ ಬೊಕ್ಕಸಕ್ಕೆ ಸಾವಿರಾರು ಕೋಟಿ ರೂಪಾಯಿ ಆದಾಯ ಸಂದಾಯವಾಗುತ್ತಿದೆ. ಅದರಲ್ಲಿ ಕಿಂಚಿತ್ ಪಾಲು ಜೋಯಿಡಾದ ಮೂಲಸೌಕರ್ಯ ಅಭಿವೃದ್ಧಿಗೆ ಮೀಸಲಾಗಿಲ್ಲ. ರಾಜ್ಯದ ಮುಂದುವರಿದ ಜಿಲ್ಲೆಗಳಲ್ಲೊಂದಾದ ಉತ್ತರ ಕನ್ನಡದ ಜೋಯಿಡಾದ್ದು ಮಾತ್ರ -10 ರ ಋಣಾತ್ಮಕ ಅಭಿವೃದ್ಧಿ!

160 ಕಿ.ಮಿ ಹರಿಯುವ ಕಾಳಿಯ ಮೂಲ ಜೋಯಿಡಾ. **ಪರವೂರುಗಳಿಗೆಲ್ಲ ಬೆಳಕು ಕೊಡುವ ಜೋಯಿಡಾ ತಾನು ಮಾತ್ರ ಕತ್ತಲೆಯಲ್ಲಿ!** ಯಾಕೆ ಈ ಮಾತು?

ಅರಣ್ಯ ಇಲಾಖೆಯದು ಖಂಡಿತ ಮನುಷ್ಯ ಕೇಂದ್ರಿತ ಕೆಲಸವಲ್ಲ ಎಂಬುದು ಸಾಬೀತು. ಅಂಥ ಯೋಜನೆಗಳೇ ಇಲ್ಲದ್ದರಿಂದ ಶ್ರೀಮಂತರ ಹಾಗೂ ಶ್ರೀಮಂತ ದೇಶಗಳ ಮರ್ಜಿ ಕಾಯುವ ನೀತಿಗಳು ಇಲ್ಲಿ ಬೇಕಾದಷ್ಟಿವೆ. ಇದರ ಹಿಂದೆ ಅಂತಾರಾಷ್ಟ್ರೀಯ ಹುನ್ನಾರವೂ ಇಲ್ಲದಿಲ್ಲ. ಮುಂದುವರಿದ ದೇಶಗಳು ಅಭಿವೃದ್ಧಿಗೆ ತೊಡಕಾಗುವ ಅನೇಕ ಯೋಜನೆಗಳನ್ನು ಮೂರನೇ ಜಗತ್ತಿನ ರಾಷ್ಟ್ರಗಳಿಗೆ ವರ್ಗಾಯಿಸುವ ಕ್ರಿಯೆ ಇಂದು ನಿನ್ನೆಯದಲ್ಲ. ಅಣುಸ್ಥಾವರ, ಹಸಿರು ಮನೆ ಯೋಜನೆ, ಪ್ರವಾಸೋದ್ಯಮ (ಲೈಂಗಿಕ ಪ್ರವಾಸೋದ್ಯಮದ ಉತ್ತೇಜನಕ್ಕೆ ಪೂರಕ) ಹಾಗೆಯೇ ರಾಷ್ಟ್ರೀಯ ಉದ್ಯಾನವನ, ಅಭಯಾರಣ್ಯ, ಹುಲಿಧಾಮ,ಆನೆ,ಸಿಂಹಧಾಮ,ಪಕ್ಷಿಧಾಮ ಇತ್ಯಾದಿ ಯೋಜನೆಗಳ ಹೆಸರಲ್ಲಿ ಜನತಾ ಯೋಜನೆ ನಾಪತ್ತೆ! ಜನರ ಕಥೆ ಏನು? ಇದರ ಅರ್ಥ ವನ್ಯಜೀವಿಗಳು ಹಾಗೂ ಕಾಡು ಉಳಿಯಬಾರದೆಂದೇನೂ ನಾನು ಹೇಳುತ್ತಿಲ್ಲ. ಆದರೆ ಇವುಗಳ ನಾಶದ ಹಿಂದಿನ ಕಾರಣ-ಕೈವಾಡಗಳನ್ನು ಶೋಧಿಸಬೇಕಾಗಿದೆ.

ಕರ್ನಾಟಕದ ಶೇ.20 ಅರಣ್ಯ ಭೂಮಿಯಲ್ಲಿ ಶೇ. 3 ಸಂರಕ್ಷಿತ ಅರಣ್ಯ ಪ್ರದೇಶ. ಇದರಲ್ಲಿ ಶೇ. ಒಂದಕ್ಕಿಂತ ಸ್ವಲ್ಪ ಕಡಿಮೆ ಭಾಗ ಹುಲಿ ಸಂರಕ್ಷಣೆಗೆ ನೀಡಲಾಗಿದೆ. ಅದರಲ್ಲಿ ನಮ್ಮ ಜೊಯಿಡಾದ ಕೆಲವು ಭಾಗವೂ ಸೇರಿದೆ. 28-12-2007 ರಂದು ನೋಟಿಫಿಕೇಶನ್ ಕೂಡ ಆಗಿದೆ.

ಇಲ್ಲಿ ಮೂಲಭೂತವಾದ ಸಮಸ್ಯೆ ಏನೆಂದರೆ, ಇಂಥ ಯೋಜನೆ ಬರುವ ಪೂರ್ವ ಅದರ ಸಾಧ್ಯಾಸಾಧ್ಯತೆಗಳ ಕುರಿತು ಅನಕ್ಷರಸ್ಥರೇ ಹೆಚ್ಚಿನ ಸಂಖ್ಯೆಯಲ್ಲಿರುವ ಈ ಜನರೊಂದಿಗೆ ಆಳವಾಗಿ ಚರ್ಚಿಸಿಲ್ಲ. ಹೆಚ್ಚು ಪ್ರಚಾರವನ್ನೂ ಕೊಟ್ಟಿಲ್ಲ. ಯೋಜನೆ ಘೋಷಣೆಯಾದ ನಂತರ ತುರುಸಿನಿಂದ ಪ್ರಚಾರ ನಡೆಯುತ್ತಿದೆ. ಅರಣ್ಯೋತ್ಪನ್ನಗಳನ್ನು ಅವಲಂಬಿಸಿದ ವನವಾಸಿ, ಆದಿವಾಸಿ, ಇತರೇ ಅರಣ್ಯವಾಸಿಗಳ ಹಕ್ಕು ಚ್ಯುತಿಯಾಗಿದೆ. ಅರಣ್ಯೋತ್ಪನ್ನಗಳನ್ನು ಸಂಗ್ರಹಿಸಿದರೆ ಅರಣ್ಯ ಕಾಯ್ದೆ ಪ್ರಕಾರ ಕೇಸು ದಾಖಲೆ ಖಂಡಿತ. ಕಾಡಿನಿಂದ ಒಣ

ಕಟ್ಟಿಗೆಯನ್ನೂ ತರುವಂತಿಲ್ಲ. ಜನ-ಜಾನುವಾರು ನಿರ್ಭೀತಿಯಿಂದ ಓಡಾಡುವಂತಿಲ್ಲ. ಹಗಲು ರಾತ್ರಿ ಯಾವುದೇ ಇರಲಿ, ಮುಖ್ಯ ರಸ್ತೆಯಿಂದಾಚೆ ಅರಣ್ಯದೊಳಗಿನ ತಮ್ಮ ಮನೆಗಳಿಗೆ ಹೋಗುವುದಿದ್ದಲ್ಲಿ ಅರಣ್ಯ ಪ್ರದೇಶವನ್ನು ಪ್ರವೇಶಿಸುವ ಗೇಟ್ ಬಂದ್.

26-6-2011ರಂದು ಕರಡು ಕಾಯ್ದೆ ಮಾಡಲಿಕ್ಕೆ ಸರ್ಕಾರ ತರಾತುರಿಯಲ್ಲಿ ತಯಾರಿಯನ್ನೂ ನಡೆಸಿದೆ. ಹುಲಿ ಯೋಜನೆಯಿಂದ ಜನರನ್ನು ಹೇಗೆ ಎತ್ತಂಗಡಿ ಮಾಡುವುದು ಅಥವಾ ನಿರಂತರ ಕಿರುಕುಳದಿಂದ ಜನರೇ ಬೇರೆ ಕಡೆಗೆ ಹೋಗುವಂತೆ ಹೇಗೆ ಮಾಡುವುದು ಎಂಬ ಹುನ್ನಾರವೇ ಈ ಕಾಯ್ದೆ. ಯಾಕೆಂದರೆ ಪ್ರಾಣಿಗಳಿಂದ ಸ್ವಯಂ ರಕ್ಷಣೆಗೆ ಮನುಷ್ಯನಿಗೆ ಅವಕಾಶಗಳಿಲ್ಲ. ಆನೆ, ಹುಲಿ, ಕರಡಿ ಏನೇ ಧಾಳಿ ಇಟ್ಟರೂ, ಮನುಷ್ಯ ಸತ್ತರೂ, ಕೃಷಿ ನಾಶವಾದರೂ ಸರ್ಕಾರಕ್ಕೆ ಚಿಂತೆಯಿಲ್ಲ. ಮೂಲಸೌಕರ್ಯದಿಂದ ವಂಚಿಸಿದರೆ ಜನರೇ ಬೇಸತ್ತು ತಮ್ಮ ಜಾನುವಾರು ಸಮೇತ ಓಡಿಹೋಗುತ್ತಾರೆ. ಆಗ ಪರಿಹಾರನೂ ಕೊಡಬೇಕೆಂದಿಲ್ಲ ಅಲ್ಲವೇ? ಒಳ್ಳೇ ಉಪಾಯ. ಆದರೆ ಈ ಉಪಾಯ ಮಾಡಿದ ಸರ್ಕಾರ 'ಉಪಾಯಂ ಚಿಂತಯೇತ್ ಪ್ರಾಜ್ಞಃ ತಥಾಪಾಯಂಚ ಚಿಂತಯೇತ್' ಎನ್ನುವ ಹಾಗೆ ಭವಿಷ್ಯದ ಪ್ರಾಣಿ-ಪಕ್ಷಿ ಕುರಿತು ಯೋಚಿಸುವಾಗಲೇ ಮನುಷ್ಯ ಸಂತತಿ ಕುರಿತೂ ಯೋಚಿಸಲಿ.

ಕರ್ನಾಟಕದ ನಾಗರ ಹೊಳೆ, ಭದ್ರಾ, ಕುದುರೆಮುಖ, ಬಿಳಿಗಿರಿ ರಂಗನಬೆಟ್ಟ, ಬಂಡೀಪುರ, ಅಲ್ಲದೇ ಹೊರ ರಾಜ್ಯಗಳಾದ ಗೋವಾ, ಆಂಧ್ರ, ತಮಿಳುನಾಡು, ಓರಿಸ್ಸಾ, ಮಧ್ಯಪ್ರದೇಶ, ಮಹಾರಾಷ್ಟ್ರ, ರಾಜಸ್ತಾನ, ಸಿಕ್ಕಿಂ, ಉತ್ತರಾಖಂಡ, ಬಂಗಾಳ, ಗುಜರಾತ್, ಹರ್ಯಾಣಾ, ಕೇರಳಗಳಲ್ಲಿ ಸೆಂಚುರಿಗಳಾದಾಗ, ವನ್ಯಪ್ರಾಣಿ ಪ್ರೊಜೆಕ್ಟಗಳಾದಾಗ (ಗೋವಾದ ಮಹಾವೀರ ಸೆಂಚುರಿ, ಆಂಧ್ರದ ಶ್ರೀಶೈಲಂ, ಮಂಜಿರಾ, ನಾಗಾರ್ಜುನ ಸಾಗರ ಸೆಂಚುರಿ, ರಾಜಸ್ತಾನದ ಸಾರಿಸ್ಕಾ, ಭರತ್ ಪುರ, ಕುರುಂಬಿನ್, ಮಹಾರಾಷ್ಟ್ರದ ಸಂಜಯಗಾಂಧಿ ವನ್ಯ ಜೀವಿಧಾಮ, ದಾಜಿಪುರ, ತಮಿಳುನಾಡಿನ ಹಸ್ತಿನಾಪುರ,



ಮಧುಮಲೈ, ಸಿಕ್ಕಿಂನ ಕ್ಯಾಂಗ್ನೋಸ್ಲಾ, ಸಿಂಗ್ಬಾ, ಬರ್ಸೈ, ಓರಿಸ್ಸಾದ ಚಿಲ್ಕಾ, ಬಿಟರ್ಕ್ಯಾನಿಕಾ, ಉತ್ತರ ಪ್ರದೇಶದ ಕಿಶನಪುರ, ಹಸ್ತಿನಾಪುರ ಹೀಗೆಲ್ಲ ಕಡೆಗಳಲ್ಲಿ) ಏನಾಗಿದೆ ಎಂಬುದು ಕೆಲವರಿಗಾದರೂ ಗೊತ್ತಿದೆ. ಪುನರ್ವಸತಿ-ಪರಿಹಾರ ನೀಡುವಲ್ಲಿ ಸರ್ಕಾರದ ಈವರೆಗಿನ ಕಾಳಜಿ ಏನೂ ಸಾಲದ್ದರಿಂದಲೇ ಹೋರಾಟದ ಹಲವು ಮಾರ್ಗ ಕಂಡುಕೊಂಡಿದ್ದಾರೆ. ಬೋಳು



ಗುಡ್ಡದಲ್ಲಿ ಭೂ ಆಧಾರಿತ ಸೌಲಭ್ಯ ಅಥವಾ 10 ಲಕ್ಷ ಪರಿಹಾರ.

ಹಾಗಾದರೆ ಒಳಗೇನಿದೆ? ಗ್ರಾಮ ಪಂಚಾಯಿತಿ ವ್ಯಾಪ್ತಿಗಳಾದ ಅಣಶಿ, ಉಳವಿ, ನಂದಿಗದ್ದೆ (ಗುಂದ), ಕಾಟೇಲಿ (ಕುಂಬಾರವಾಡಾ) ಪ್ರಧಾನಿಯ ಫಣಸೋಲಿ-ವಿರ್ನೋಲಿಯ ಭಾಗ ಕೋರ್ ಏರಿಯಾವನ್ನಾಗಿ, ಡಿಗ್ಗಿ ಹಾಗೂ ಕಾರವಾರದ ಕದ್ರಾದ ಸುತ್ತ-ಮುತ್ತ ಕೆಲವು ಭಾಗಗಳನ್ನು ಪೆರಿಪೇರಿಯಲ್ ಏರಿಯಾವನ್ನಾಗಿಯೂ ಗುರುತಿಸಿಕೊಳ್ಳಲಾಗಿದೆ. ಪಾಪ! ಬಹುತೇಕ ಜನಕ್ಕೆ ಇದಿನ್ನೂ ಗೊತ್ತೇ ಇಲ್ಲ. ಹಾಗೆಯೇ ಹಾರ್ನ ಬಿಲ್ ಪ್ರೊಜೆಕ್ಟ ಕೂಡ ಬಹುತೇಕ ಜಾರಿಯಾದಂತೆಯೇ.

ಒಂದು ಕುಟುಂಬಕ್ಕೆ 10 ಲಕ್ಷ ರೂ ಆಮಿಷ ತೋರಿಸಿ ಕೆಲವರನ್ನು ಒಪ್ಪಿಸಲಾಗಿದೆಯಂತೆ. ಇತ್ತೀಚಿನ ವರದಿ ಪ್ರಕಾರ ಪರಿಹಾರದ ಪ್ಯಾಕೇಜ್‌ನಲ್ಲಿ ಕುಟುಂಬದ ಪರಿಕಲ್ಪನೆ ಅವೈಜ್ಞಾನಿಕವಾಗಿದೆ. 18 ವರ್ಷ ಮೇಲ್ಪಟ್ಟ ಹುಡುಗನನ್ನು ಒಂದು ಕುಟುಂಬವೆನ್ನುವುದಾದರೆ ಹುಡುಗಿಯರೇಕೆ ಸೇರಿಲ್ಲ? ಹೋರಾಟದ ಕಾವು ಕಡಿಮೆ ಮಾಡಲಿಕ್ಕೇ?

1972 ರ ವನ್ಯ ಜೀವಿ ಸಂರಕ್ಷಣಾ ಕಾಯಿದೆ ಸೆಕ್ಷನ್ 38 ರ ಉಪ ಕಲಂ ಪ್ರಕಾರ ಹುಲಿ ಯೋಜನೆ ಘೋಷಿಸಿದೊಡನೆ ಅರಣ್ಯವಾಸಿಗಳನ್ನು ಸ್ಥಳಾಂತರಿಸಬಾರದೆಂದಿದೆ. ಜೀವಿಸುವ ಹಕ್ಕು ಇದೆ ಎನ್ನುತ್ತದೆ. ಆದರೆ ಜೀವನೋಪಾಯದ ಕೆಲವು ಮಾರ್ಗಗಳನ್ನು ಕಸಿದುಕೊಂಡಿದೆ. ಹಾಗೆಯೇ, 2006 ರ ಅರಣ್ಯ ಹಕ್ಕು ಕಾಯ್ದೆಯ ಕಾಲಂ 4 ಪ್ರಕಾರ ಸಂರಕ್ಷಿತಾರಣ್ಯ ಪ್ರದೇಶದಲ್ಲಿ ಜನಕ್ಕೆ ಅರಣ್ಯ ಹಕ್ಕಿಲ್ಲ. ಹಾಗಾಗಿ ಪರಿಹಾರ ಕೊಡಲಿಕ್ಕೆ ಹತ್ತು ಲಕ್ಷ ಸಾಕೇ? ಬೇರೆ ಯಾವ ಉದ್ಯೋಗದ ತರಬೇತಿಯಿಲ್ಲದ ಈ ಜನ ಸರ್ಕಾರ ನೀಡುವ ಕವಡೆ ಕಿಮ್ಮತ್ತನ್ನು ಪಡೆದು, ದೇಶಕ್ಕಾಗಿ ತ್ಯಾಗಮಾಡಿದ್ದಾರೆಂಬ ಹೊಗಳಿಕೆ ಮಾತು ಹೇಳಿಸಿಕೊಂಡೊಂಡಿರಲಿಕ್ಕೆ ಮಾತ್ರ ಸಾಕು. ಜೋಯಿಡಾದ ಈ ಪ್ರದೇಶದಲ್ಲಿ ವಾಸಿಸುವ ಕೆಲವರಿಗೆ ಭೂಮಿ ಪಟ್ಟಾ ಇನ್ನೂ ಸಿಕ್ಕಿಲ್ಲ, ವನವಾಸಿ, ಆದಿವಾಸಿ ಕುಣುಬಿಗಳನ್ನು ಪರಿಶಿಷ್ಟ ಪಂಗಡ(ಬುಡಕಟ್ಟು) ಎಂದು ಇನ್ನೂ ಘೋಷಿಸಿಲ್ಲ, ಕಾರಣ ಬೇರೆಡೆಗೆ ಬದುಕಲಿಕ್ಕಾಗದ ವಾತಾವರಣ ಇಂದು ಸೃಷ್ಟಿಯಾಗಿದೆ.

ಕಾಡಿನೊಂದಿಗಿನ ಭಾವನಾತ್ಮಕ, ಸಾಂಸ್ಕೃತಿಕ ಸಂಬಂಧ ಅತ್ಯಂತ ಪುರಾತನವಾದುದು. ಎಲ್ಲರನ್ನೂ ಸಂತ್ರಸ್ತರನ್ನಾಗಿ ಮಾಡಿ, ಅವರಿಗೆ ಯಃಕ್ಕಶ್ಚಿತ್ ಹಣ-ಬರಡು ಭೂಮಿ ಎದುರಿಗಿಟ್ಟರೆ ನಾಗರಿಕತೆ ಮುಂದೋಡುತ್ತದೆಯೇ? ಸಾಮಾಜಿಕ, ಆರ್ಥಿಕ ಭದ್ರತೆಯಿಲ್ಲದೇ ; ಒತ್ತಡದ ಬದುಕಿನ ಮಧ್ಯೆ ಬೀದಿಪಾಲಾಗುತ್ತಾರೆ ಅಷ್ಟೇ. ಇದೆಲ್ಲ ನಮ್ಮ ಎಂಪಿ, ಶಾಸಕರುಗಳಿಗೆ ಗೊತ್ತಿಲ್ಲವೆಂದಲ್ಲ. ಪ್ರಧಾನಮಂತ್ರಿಗಳ ಸಮ್ಮುಖದಲ್ಲಿ ನಮ್ಮ ಅಳಲನ್ನು ತೋಡಿಕೊಳ್ಳುವುದಕ್ಕೆ ಸೇತುವೆಯಾಗಿರುವ ಎಂಪಿಗಳು ಕೇಂದ್ರದಲ್ಲಿ ಈ ನೀತಿಗೆ ಪೂರಕವಾಗಿ ಕೆಲಸ ಮಾಡಿದರು,ಆದರೆ ಇಲ್ಲಿ ಬಂದು ವಿರೋಧಿಸುವ ನಾಟಕ ಆಡಿದರೇ? ಇಲ್ಲದಿದ್ದರೆ ಈ ಸ್ಥಿತಿ ಬರುತ್ತಿತ್ತೇ?

ಜೋಯಿಡಾದ ಜನ ಪ್ರಾರಂಭದಿಂದಲೂ ಒಂದಲ್ಲ ಒಂದು ಆಘಾತಕ್ಕೆ ಒಳಗಾಗುತ್ತಲೇ ಬಂದಿದ್ದಾರೆ. ಕಾಳಿಯ ಪಕ್ಕದಲ್ಲೇ ಇದ್ದರೂ ಅವರು ಕಾಳಿಯ ಆವೇಶವನ್ನು ತಾಳಿಲ್ಲ ಅಷ್ಟೆ. ಜೋಯಿಡಾದ ಸಂರಕ್ಷಿತ ಪ್ರದೇಶದಲ್ಲಿ ಮನುಷ್ಯ ಮತ್ತು ಕಾಡು ಪ್ರಾಣಿಗಳು ಏಕಕಾಲದಲ್ಲಿ ವಾಸಿಸುವಷ್ಟು ಜಾಗ ಖಂಡಿತ ಇದೆ ಮತ್ತು ಈವರೆಗೆ ಸಹಜೀವನ ನಡೆಸಿದ್ದಾರೆ. ಆದರೆ ಜನ ಪ್ರತಿನಿಧಿಗಳು ಮತ್ತು ಅಧಿಕಾರಿಗಳಿಗೆ ಜನಪರ ಇಚ್ಛಾಶಕ್ತಿ ಇರಬೇಕು. ಇಲ್ಲದಿದ್ದರೆ ಜನ ಅದನ್ನು ಅವರಿಗೆ ಕಲಿಸಿಕೊಡಲು ಮುಂದಾಗುವುದು ಅನಿವಾರ್ಯವಾಗುತ್ತದೆ.

ಅರಣ್ಯ ಹಕ್ಕು ಖಾತ್ರಿ: ಕರ್ನಾಟಕ ತೀರಾ ಹಿಂದೆ

ಆದಿವಾಸಿಗಳು ಮತ್ತು ಇತರ ಅರಣ್ಯ ವಾಸಿಗಳ ಹಕ್ಕುಗಳ ಸಂರಕ್ಷಣೆಗಾಗಿ ನಡೆದ ಹೋರಾಟ, ಅದರಲ್ಲಿ ಎಡಪಕ್ಷಗಳ ಪಾತ್ರ, ಅದನ್ನು ಜಾರಿಮಾಡುವಲ್ಲಿ ರಾಜ್ಯ ಬಿಜೆಪಿ ಸರ್ಕಾರದ ದಿವ್ಯ ತಾತ್ಸರ, ಮತ್ತು ಜನವಿರೋಧಿ ಧೋರಣೆ ಈಗಾಗಲೇ ಸಾಕಷ್ಟು ಜನಜನಿತವಾದ ವಿಚಾರ. ಇದಕ್ಕೆ ಇನ್ನಷ್ಟು ಸಾಕ್ಷಿ ಪುರಾವೆಗಳು ಲಭಿಸುತ್ತಿವೆ.

ಅರಣ್ಯ ಹಕ್ಕು ಕಾಯ್ದೆ-2006:

ಜಾರಿಗೆ ಬಂದಮೇಲೆ ಅರಣ್ಯ ಭೂಮಿಯ ಹಕ್ಕಿಗಾಗಿ ಯಾವ ರಾಜ್ಯಗಳು ಯಾವ ಕ್ರಮ ವಹಿಸಿವೆಯೆಂಬ ಅಧ್ಯಯನದ ಇತ್ತೀಚಿನ ವರದಿಗಳು ಲಭ್ಯವಾಗುತ್ತಿವೆ. ರಾಜ್ಯದಲ್ಲಿ ಈ ನಿಟ್ಟಿನಲ್ಲಿ 1,63,090 ಅರ್ಜಿಗಳು ಸಲ್ಲಿಕೆಯಾಗಿದ್ದರೆ 1,43,825 ಅರ್ಜಿಗಳು ತಿರಸ್ಕತವಾಗಿವೆ. ಅರಣ್ಯ ಭೂಮಿ ಹಕ್ಕು ನೀಡಿಕೆಯಲ್ಲಿ ರಾಜ್ಯಕ್ಕೆ ಸಿಕ್ಕಿರುವುದು ಕೆಳಗಿನಿಂದ 4ನೇ ಸ್ಥಾನ. ಅಂದರೆ ತಳದ ಬಿಹಾರ.. ಹಿಮಾಚಲ ಪ್ರದೇಶ, ಮತ್ತೊಂದು ರಾಜ್ಯದ ನಂತರದ ಸ್ಥಾನ. ರಾಜ್ಯದಲ್ಲಿ ಇಲ್ಲಿಯವರೆಗೆ 8,500 ಎಕರೆ ಅರಣ್ಯ ಭೂಮಿ ಮಾತ್ರ ಅದರ ಹಕ್ಕುದಾರರಿಗೆ ದಕ್ಕಿದೆ. ಅರ್ಜಿದಾರರಲ್ಲಿ ಇದು ಶೇ.3.99 ಮಾತ್ರ. (ಅದರಲ್ಲಿ ನಿಜಕ್ಕೂ ಆದಿವಾಸಿ, ಅಥವಾ ಬಡ ರೈತರಷ್ಟು ಎಂಬುದಕ್ಕೆ ಪ್ರಶ್ನೆ ಬೇರೆ ಇದೆ) ಇದು ರಾಜ್ಯದ ಒಟ್ಟು ಅರಣ್ಯ ಭೂಮಿಯ 0.07 ಶೇ.ಭೂಮಿ ಮಾತ್ರ.

ಸಿಪಿಐ(ಎಂ) ನೇತೃತ್ವದ ಎಡರಂಗ ಸರ್ಕಾರ ಅಧಿಕಾರದಲ್ಲಿರುವ ತ್ರಿಪುರಾ ರಾಜ್ಯ ಈ ವಿಷಯದಲ್ಲಿ ಪ್ರಥಮ ಸ್ಥಾನದಲ್ಲಿದೆ. ತ್ರಿಪುರಾದಲ್ಲಿ ಶೇ.67.64ರಷ್ಟು ಅರ್ಜಿಗಳಿಗೆ ಮಾನ್ಯತೆ ನೀಡಿ ಭೂಮಿಯ ಹಕ್ಕು ನೀಡಲಾಗಿದೆ. ಕೇವಲ ಶೇ.12.87 ಅರ್ಜಿಗಳಿಗೆ ಅಂಗೀಕಾರ ನೀಡಿ ನೀಡಿರುವ ಉತ್ತರ ಪ್ರದೇಶ, ಕೇವಲ 13.41 ಅರ್ಜಿಗಳನ್ನು ಮನ್ನಿಸಿರುವ ಗುಜರಾತ್ ರಾಜ್ಯಕ್ಕಿಂತಲೂ ಕರ್ನಾಟಕ ತುಂಬಾ ಹಿಂದೆ ಬಿದ್ದಿದೆ. ಆಣೆ- ಪ್ರಮಾಣ ಮಾಡುತ್ತೇನೆಂದು ಹುಸಿ ವೀರಾವೇಶದ ಪ್ರದರ್ಶನ ಮಾಡುವ ಭ್ರಷ್ಟ, ವಂಚಕ ರಾಜಕಾರಣದ ಕಸರತ್ತುಗಳ ನಡುವೆ ನಿಜವಾಗಿಯೂ ಯಾರು ಅರಣ್ಯ ವಾಸಿಗಳು ಯಾರು ಬುಡಕಟ್ಟು ಜನರು, ಯಾರು ಬಡರೈತರೆಂದು ಗುರುತಿಸಿ ಭೂಮಿ ಹಕ್ಕು ನೀಡುವ ಕೆಲಸ ಯಾರಿಗೆ ಬೇಕಾಗಿದೆ. ಅಲ್ಲವೇ?

ಬಿಜಾಪುರ: ಗುಡಿಸಲು ವಾಸಿಗಳ ನಿವೇಶನ ಹಕ್ಕಿಗಾಗಿ ಸಾಮೂಹಿಕ ಧರಣೆ



ಪ್ರತಿಭಟನಾಕಾರರನ್ನುದ್ದೇಶಿಸಿ ಜಿಲ್ಲಾಧಿಕಾರಿಗಳು ಮಾತನಾಡುತ್ತಿರುವುದು

ಸರ್ಕಾರದ ಗೈರಾಣಿ ಜಮೀನು ಸರ್ವೆ ನಂ.838ರಲ್ಲಿ ವಾಸಿಸುವ 160 ಕುಟುಂಬಗಳ ವಾಸದ ಮನೆಗಳಿಗೆ ಹಕ್ಕು ಪತ್ರ ಕೊಡಬೇಕು. ಗುಂಟಾವಾರು ಖರೀದಿ ಮಾಡಿದವರಿಗೆ ಮೋಸ ಆಗದಂತೆ ದಾಖಲು ಮಾಡಿಕೊಂಡು ಸದರಿಯವರಿಗೆ ಉತಾರೆಯನ್ನು ಪೂರೈಸಬೇಕು. ಲಾರಿ ಹಮಾಲರಿಗೆ 15 ಎಕರೆ ಜಮೀನನ್ನು ಮನೆ ನಿವೇಶನಕ್ಕಾಗಿ ಸ.ನಂ.53/ಅ ಒದಗಿಸ ಬೇಕು. ವಯೋವೃದ್ಧರಿಗೆ, ಅಂಗವಿಕಲರಿಗೆ, ವಿಧವೆಯರಿಗೆ ಪಿಂಚಣಿಯ ಅರ್ಜಿಗಳ ಸ್ವೀಕಾರವನ್ನು ತಾತ್ಕಾಲಿಕವಾಗಿ ನಿಲ್ಲಿಸಲಾಗಿದ್ದು, ಸದರಿ ಅಂತಹವರ ಅರ್ಜಿಗಳನ್ನು ಸ್ವೀಕರಿಸಬೇಕು, ಅಲ್ಲದೆ ಅವರಿಗೆ ಈಗಿನ 400 ಗಳಿಂದ ರೂ.1000/-ಗಳಿಗೆ ಪಿಂಚಣಿಯನ್ನು ಹೆಚ್ಚಿಸಬೇಕು. ಸಾರ್ವತ್ರಿಕ ಪಡಿತರ ವ್ಯವಸ್ಥೆಯನ್ನು ಜಾರಿ ತರಬೇಕು. ನಗಸಭೆಯಲ್ಲಿ ಕೆಲಸ ಮಾಡುವ ಗುತ್ತಿಗೆ ಪೌರ ಕಾರ್ಮಿಕರಿಗೆ ಸರ್ಕಾರಿ ನೌಕರರಿಗೆ ಸಿಗುವ ಎಲ್ಲಾ ಸೌಲಭ್ಯಗಳು ಸಿಗಬೇಕು ಹಾಗೂ ಅವರ ಸೇವೆಯನ್ನು ಖಾಯಂಗೊಳಿಸಬೇಕು.

ಈ ಮೇಲ್ಕಂಡ ಬೇಡಿಕೆಗಳಿಗಾಗಿ ಒತ್ತಾಯಿಸಿ, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್(ಸಿಐಟಿಯು), ಜನವಾದಿ ಮಹಿಳಾ ಸಂಘ, ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ ಹಾಗೂ ಇತರ ಸಂಘಟನೆಗಳು ಬಿಜಾಪುರ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಸುಮಾರು ಒಂದು ವಾರಕ್ಕೂ ಹೆಚ್ಚು ಕಾಲ ಧರಣಿ ನಡೆಸಿದವು.

ಈ ಸಂದರ್ಭದಲ್ಲಿ ಬಿಜಾಪುರ ಜಿಲ್ಲೆಯ ಹಿರಿಯ ಹೋರಾಟಗಾರರು, ರೈತ ಮುಖಂಡರು ಆದ ಭೀಮಶಿ ಕಲಾದಗಿ ವೃದ್ಧರು, ಅಂಗವಿಕಲರು ಹಾಗೂ ವಿಧವೆಯರಿಗೆ ಮಾಶಾಸನ ನೀಡುವ ಅರ್ಜಿ ಸ್ವೀಕರಿಸುವುದನ್ನು ನಿಲ್ಲಿಸಲಾಗಿದೆ. ಅದನ್ನು ತಕ್ಷಣವೇ ಪ್ರಾರಂಭಿಸಬೇಕು. ನಗರದ ಸ್ಲಂಗಳ ನಿವಾಸಿಗಳನ್ನು ತೆರವುಗೊಳಿಸಲು ನಗರಸಭೆ ಮುಂದಾಗಿದ್ದು, ಅವರಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಕಂಜರಬಾಟ ಕಾಲೋನಿ, ವಜ್ರ ಹನುಮಾನ ನಗರ, ಅಂಬೇಡ್ಕರ್ ಕಾಲೋನಿಗಳ ಸ್ಲಂಗಳಲ್ಲಿ ವಾಸಿಸುತ್ತಿರುವವರಿಗೆ ಹಕ್ಕು ಪತ್ರ ವಿತರಿಸಿ ಅವರಿಗೆ ಮೂಲ ಸೌಲಭ್ಯ ಕಲ್ಪಿಸಬೇಕು. ಗುಂಟಾ ಫ್ಲಾಟ್ ನೋಂದಣಿ ಆರಂಭಿಸಬೇಕು ಎಂದು ಮನ್ನುಸಾಬ ಕಲಾದಗಿ ಆಗ್ರಹಿಸಿದರು.

ಮಾಸಾಶನದಲ್ಲಿ ಅಕ್ರಮವೆಸಗಿದ್ದರೆ ಅವರಿಗೆ ಶಿಕ್ಷೆ ನೀಡಿ. ಆದರೆ, ನಿಜವಾದ ಅರ್ಹರಿಗೆ ಮಾಶಾಸನ ನೀಡದೇ ಇರುವುದು ಸರಿಯಲ್ಲ ಎಂದು ಸುರೇಖಾ ರಜಪೂತ ಹೇಳಿದರು.

ಅಣ್ಣಾರಾಯ ಈಳಗೇರ, ವಿ.ಎಂ.ಸೊನ್ನದ ಮಾತನಾಡಿ, ಪಡಿತರ ವ್ಯವಸ್ಥೆ ಸರಿಪಡಿಸಬೇಕು. ನಗರಸಭೆಗಳಲ್ಲಿ ಕೆಲಸ ಮಾಡುತ್ತಿರುವ ಪೌರ ಕಾರ್ಮಿಕರಿಗೆ ಸರ್ಕಾರಿ ಆದೇಶದಂತೆ 4,600 ರೂಪಾಯಿ ನೀಡಬೇಕು ಎಂದು ಒತ್ತಾಯಿಸಿದರು.

ತಮ್ಮ ಬೇಡಿಕೆಗಳ ಬಗ್ಗೆ ಜಿಲ್ಲಾ ಆಡಳಿತ ಗಮನಹರಿಸಿ ತಕ್ಷಣ ಅಧಿಕಾರಿಗಳ ಸಭೆ ಕರೆಯಬೇಕು. ಈಗಾಗಲೇ ಹಲವಾರು ಬಾರಿ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಸಾರ್ವಜನಿಕರ ಅರ್ಜಿಗಳನ್ನು ಎಂಟು ದಿನಗಳಲ್ಲಿ ವಿಲೇವಾರಿ ಮಾಡಬೇಕು ಎಂದು ಮುಖ್ಯಮಂತ್ರಿಗಳು ಸೂಚಿಸಿದ್ದಾರೆ. ಆದರೆ ಇಲ್ಲಿ ನಡೆದಿರುವುದೇನು? ಬಹಳಷ್ಟು ದಿನಗಳಿಂದ ಬೇಡಿಕೆಗಳು ನೆನೆಗುದಿಗೆ ಬಿದ್ದಿದೆ ಎಂದು ಮುಖಂಡರು ತೀವ್ರವಾಗಿ ಆಕ್ಷೇಪಿಸಿದರು.

ಪ್ರಮುಖರಾದ ವಿ.ಹೆಚ್.ಹೊನ್ನುಟಗಿ, ಮಹಬೂಬ ನದಾಫ್, ಸಿದ್ರಾಮ, ರೇವಣಸಿದ್ಧ ಬಣಗಾರ, ಬಂಗಾರಿ ಧನಪಾಲ ಬಾಗಡೆ, ರಾಜೇಶ್ ಬಾಗಡೆ, ಶಾಂತಿ, ಮೀನಾ, ಸವಿತಾ, ಮುನ್ನಿಬಾಯಿ ನಿರ್ಮಲಾ, ಸುಶೀಲಾ ಜಯಸಿಂಗ್, ಸೋಮಪ್ಪ ಆಯಟ್ಟಿ ಇತರರು ಧರಣಿಯಲ್ಲಿ ಪಾಲ್ಗೊಂಡಿದ್ದರು. ಹೋರಾಟದ 8ನೇ ದಿನ ಜಿಲ್ಲಾಧಿಕಾರಿಗಳ ಆಗಮನ ಮತ್ತು ಅಗತ್ಯ ಕ್ರಮದ ಭರವಸೆ ಆಧಾರದಲ್ಲಿ ಧರಣಿ ಸತ್ಯಾಗ್ರಹವನ್ನು ತಾತ್ಕಾಲಿಕವಾಗಿ ಹಿಂದೆ ಪಡೆಯಲಾಗಿದೆ. ಮೇ 31ರಂದು ಆರಂಭವಾದ ಪ್ರತಿಭಟನಾ ಧರಣಿ ಜೂನ್ 7ರವರೆಗೆ ನಡೆಯಿತು.

ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಚಿಕ್ಕಬಳ್ಳಾಪುರ ಸಿ.ಐ.ಟಿ.ಯು. ರಸ್ತೆ ತಡೆ, ಪ್ರತಿಭಟನೆ

ಚಿಕ್ಕಬಳ್ಳಾಪುರ 23-06-2011 ರಂದು ಪೆಟ್ರೋಲ್ ಡೀಸಲ್ ಅದೇ ರೀತಿ ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಹಾಗೂ ಪಶ್ಚಿಮ ಬಂಗಾಳದಲ್ಲಿ ಎಡರಂಗದ ಕಾರ್ಯಕರ್ತರ ಮೇಲೆ ತೃಣಮೂಲ ಕಾಂಗ್ರೆಸ್ ಹಾಗೂ ಮಾವೋವಾದಿಗಳ ದೌರ್ಜನ್ಯ ಖಂಡಿಸಿ ಸಿ.ಐ.ಟಿ.ಯು.ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿ ವತಿಯಿಂದ ರಸ್ತೆ ತಡೆ ಚಳುವಳಿ ನಡೆಸಿ ನಂತರ ಉಪ ವಿಭಾಗಾಧಿಕಾರಿಗಳ ಕಛೇರಿ ಮುಂದೆ ಪ್ರತಿಭಟನೆ ನಡೆಸಲಾಯಿತು.

ಸಿ.ಐ.ಟಿ.ಯು.ವಿನ ಅಖಿಲಭಾರತ ಕರೆಯಂತೆ ದಿನಾಂಕ: 23-06-2011 ರಂದು ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲು ಕರೆ ನೀಡಿದ್ದು, ಅದರಂತೆ ಚಿಕ್ಕಬಳ್ಳಾಪುರ ಜಿಲ್ಲಾ ಸಮಿತಿ ವತಿಯಿಂದ ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರುದ್ಧ ಹಾಗೂ ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಹಾಗೂ ಮಾವೋವಾದಿಗಳಿಂದ ಕಾರ್ಮಿಕರ ಮೇಲಿನ ದೌರ್ಜನ್ಯ ಖಂಡಿಸಿ ಶಿಡ್ಲಘಟ್ಟ ವೃತ್ತದಲ್ಲಿ ರಸ್ತೆ ತಡೆ ಹಾಕಲಾಯಿತು ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುವುದನ್ನು ಗಮನಿಸಿ ನಂತರ ಉಪ ವಿಭಾಗಾಧಿಕಾರಿಗಳ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಲಾಯಿತು.

ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ಸಿ.ಐ.ಟಿ.ಯು. ಜಿಲ್ಲಾಧ್ಯಕ್ಷರಾದ ಸಿದ್ದಗಂಗಪ್ಪ ನವರು, ಡೀಸಲ್, ಪೆಟ್ರೋಲ್, ಸೇರಿದಂತೆ ದಿನನಿತ್ಯ ವಸ್ತುಗಳು ದಿನೇ ದಿನೇ ಬೆಲೆ ಏರಿಕೆಯಾಗುತ್ತಿದ್ದು ಜನ ಸಾಮನ್ಯರು ಜೀವನ ನಡೆಸಲು ಆಗುತ್ತಿಲ್ಲ, ಅಸಂಘಟಿತ ಕಾರ್ಮಿಕರಾದ ಗ್ರಾಮ ಪಂಚಾಯಿತಿ ನೌಕರರು, ಅಂಗನವಾಡಿ ಕಾರ್ಯಕರ್ತೆಯರು, ಅಕ್ಷರ ದಾಸೋಹ ನೌಕರರು, ಆಶಾ ಕಾರ್ಯಕರ್ತೆಯರಿಗೂ ಕನಿಷ್ಠ ಕೂಲಿಯೂ ಸಿಗದೇ ರೂ. 1,000 ರಿಂದ 2,500 ರೂ.ಮಾತ್ರ ಮಾಸಿಕ ಗೌರವಧನ ಸಿಗುತ್ತಿದ್ದು ಇಂತಹ ಅಸಂಘಟಿತ ಕಾರ್ಮಿಕರು ಕನಿಷ್ಠವಾದ ಜೀವನ ನಡೆಸಲು ಕಷ್ಟವಾಗಿದೆ. ಆದೇ ರೀತಿ ಪಶ್ಚಿಮ ಬಂಗಾಳದಲ್ಲಿ ಎಡರಂಗದ ಕಾರ್ಯಕರ್ತರ ಮೇಲೆ ತೃಣಮೂಲ ಕಾಂಗ್ರೆಸ್ ಹಾಗೂ ಮಾವೋವಾಧಿಗಳ ದೌರ್ಜನ್ಯ ನಿರಂತರವಾಗಿ ನಡೆಯುತ್ತಿದೆ ಇದನ್ನು ಸಿ.ಐ.ಟಿ.ಯು. ಖಂಡಿಸುತ್ತದೆ ಎಂದರು.





ನಂತರ ಮುನಿಕೃಷ್ಣಪ್ಪ ನವರು ಸಹ ಮಾತನಾಡಿದರು. ಉಪವಿಭಾಗಾಧಿಕಾರಿಗಳು ಕಛೇರಿಯಲ್ಲಿ ಇಲ್ಲದಿರುವುದರಿಂದ ಕಛೇರಿಯಲ್ಲಿದ್ದ ಅಧಿಕಾರಿ ಬಂದು ಮಾನವಿ ಯನ್ನು ಸ್ವೀಕರಿಸಿ ಉಪವಿಭಾಗಾಧಿ ಕಾರಿಗಳು ಉದ್ಯೋಗ ಮೇಳದಲ್ಲಿ ಪಾಲ್ಗೋಳಲು ಹೋಗಿರುವುದರಿಂದ ಅವರು ಪರವಾಗಿ ನಾನು ಬಂದಿದ್ದೇನೆ ಎಂದು ತಿಳಿಸಿ, ನಿಮ್ಮ ಈ ಬೇಡಿಕೆಗಳನ್ನು ಸರ್ಕಾರಕ್ಕೆ ಕಳುಹಿಸಿ ಕೊಡುತ್ತೇವೆ ಎಂದು ತಿಳಿಸಿದರು.

ನಂತರ ಪ್ರತಿಭಟನೆಯನ್ನು ವಾಪಸ್ಸು ಪಡೆಯಲಾಯಿತು ಈ ಪತ್ರಿಭಟನೆಯಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕಿನ ಗ್ರಾಮ ಪಂಚಾಯಿತಿ ನೌಕರರು, ಅಂಗನಾವಾಡಿ ಕಾರ್ಯಕರ್ತೆಯರು, ಅಕ್ಷಕರ ದಾಸೋಹ ನೌಕರರು, ಅಶಾ ಕಾರ್ಯಕರ್ತೆಯರು ಹಾಗೂ ಸಿ.ಐ.ಟಿ.ಯು.ನ ಮುಖಂಡರಾದ ಮುಸ್ತಾಫ, ವೆಂಕಟರಾಮ್ ಮುಂತಾದವರು ಪಾಲ್ಗೊಂಡಿದರು.

ವರದಿ : ಮುಸ್ತಾಫ ಬಾಗೇಪಲ್ಲಿ

ಭತ್ತ ಮಾರಾಟ ಆದ ಮೇಲೆ ಸರ್ಕಾರ ಖರೀದಿಗೆ ಆದೇಶಿಸಿದೆ

ಮಾರುತಿ ಮಾನ್ಪಡೆಯವರೊಂದಿಗೆ ಸಂದರ್ಶನ

ಸಂದರ್ಶಕರು: ಮಹೇಶ್ ಊಗಿನಹಳ್ಳಿ

ಭಾರತ ಮೂಲತಃ ವ್ಯವಸಾಯ ಆಧಾರಿತ ರಾಷ್ಟ್ರ. ಆದ್ದರಿಂದಲೇ ರೈತನನ್ನು ದೇಶದ ಬೆನ್ನೆಲುಬು ಎಂದು ಕರೆಯುವುದು. ಇದರ ಅರ್ಥ ರೈತನ ಸ್ಥಿತಿಗತಿಗಳು ಚೆನ್ನಾಗಿದ್ದಾರೆ ದೇಶವು ಸಮೃದ್ಧವಾಗಿ ಸಂಪತ್ಭರಿತವಾಗಿರುತ್ತದೆ. ಆದರೆ ಇಂದಿನ ದಿನಗಳಲ್ಲಿ ರೈತನ ಸ್ಥಿತಿ ಏನಾಗಿದೆ. ರೈತನ ಹೆಸರಿನಲ್ಲಿ ಅಧಿಕಾರ ಪಡೆದ ಸರ್ಕಾರಗಳು ರೈತನ ಸಂಕಷ್ಟಗಳಿಗೆ ಕಿವಿಕೊಡದೆ ರೈತ ವಿರೋಧಿ ಧೋರಣೆ ತಾಳುತ್ತಿವೆ. ರೈತನ ಬೆನ್ನುಮೂಳೆಯನ್ನು ಮುರಿದು ವಿದೇಶಿ ಬಂಡವಾಳಶಾಹಿ ಗಳೊಂದಿಗೆ ಕೈಜೋಡಿಸಿ ಹಿರಿಹಿರಿ ನಗುತ್ತಿವೆ.

ಭಾರತದ ಮೊದಲ ಪ್ರಧಾನಿ ನೆಹರೂರವರ ಆಶೋತ್ತರಗಳನ್ನೇ ಅವರದೇ ಪಕ್ಷದ ಕೇಂದ್ರದ ಘನ ಸರ್ಕಾರ ಗಾಳಿಗೆ ತೂರಿದೆ ಇದು ಒಂದು ಕಡೆ ಆದರೆ ಮತ್ತೊಂದು ಕಡೆ ನಮ್ಮ ಕರ್ನಾಟಕ ಸರ್ಕಾರ ರೈತರ ಬದುಕನ್ನು ಬಂಗಾರ ಮಾಡುತ್ತೀವಿ ಎಂದು ಬಡಾಯಿ ಕೊಚ್ಚಿಕೊಂಡು ಅಧಿಕಾರ ಗಿಟ್ಟಿಸಿಕೊಂಡು ಹಸಿರು ಶಾಲೊದ್ದು, ರೈತರ ತಲೆ ಮೇಲೆ ಕೈಯಿಟ್ಟು ಪ್ರಮಾಣ ವಚನ ಸ್ವೀಕರಿಸಿದ ಚಡ್ಡಿ ಪಡೆಯ ಯಡ್ಡಿ ಸರ್ಕಾರ ಕಣ್ಣು ಮುಚ್ಚಿಕೊಂಡು ಕೂತಿದೆ. ರಾಜ್ಯದಲ್ಲಿ ನಡೆಯುತ್ತಿರುವ ರೈತರ ಸರಣಿ ಆತ್ಮಹತ್ಯೆ ಪ್ರಕರಣಗಳಿಗೆ ಸೊಪ್ಪಾಕದೆ ಪಾಪದ ಹೆಣಗಳಿಗೆ ಚಟ್ಟಾಕಟ್ಟಲು ಮುಂದಾಗಿದೆ. ಹಾದಿ ಬೀದಿ ಯಾವುದೇ ಕಾರ್ಯಕ್ರಮದಲ್ಲಿ ರೈತ ಗೀತೆಯನ್ನು ಹಾಡುವುದು ಕಡ್ಡಾಯ ಮಾಡಿರುವುದು ಇದು ಬೂಟಾಟಿಕೆಯ ಪರಮಾವಧಿಯ ಸಂಕೇತ ವಾಗಿದೆ. ಭತ್ತ ಬೆಳೆಗಾರರ ಬೆಂಬಲ ಬೆಲೆ ನೀತಿಯ ಹೋರಾಟಗಳು ನಡೆಸಿದರು ಕಿಂಚಿತ್ತು ಸ್ಪಂದಿಸುತ್ತಿಲ್ಲ. ಇಂತಹ ಸಂದರ್ಭದಲ್ಲಿ ರೈತ ಗೀತೆಯನ್ನು ಕುವೆಂಪುರವರ ಕ್ಷಮೆ ಕೇಳಿ ಈಗೆ ಹೇಳಬಹುದಾಗಿದೆ. ಭತ್ತವ ಬೆಳೆದು ಬಾಯಿ ಬಾಯಿ ಬಡಿದುಕೊಂಡು ಅಳುವ ಯೋಗಿಯ ನೋಡಲ್ಲಿ? ಮಾಡಿದ ಸಾಲ ತೀರಿಸಲಾಗದೆ ಸಾಯುತ್ತಿರುವ ರೈತನ ನೋಡಲ್ಲಿ ಎಂದು ಹಾಡುವ ವಿಪರ್ಯಾಸ ಉಂಟಾಗಿದೆ.


ಈ ಹಿನ್ನೆಲೆಯಲ್ಲಿ ಭತ್ತಕ್ಕೆ ಬೆಂಬಲ ಬೆಲೆ ನೀಡಬೇಕೆಂದು ಆಗ್ರಹಿಸಿತ್ತಾ, ಸತತವಾಗಿ ಹಗಲಿರುಳು ಹೋರಾಟ ನಡೆಸಿಕೊಂಡು ಬರುತ್ತಿ ರುವ ಕರ್ನಾಟಕ ಪ್ರಾಂತ ರೈತ ಸಂಘಟನೆಯ ರಾಜ್ಯ ಅಧ್ಯಕ್ಷರಾದ ಕಾಂ: ಮಾರುತಿಮಾನ್ಪಡೆ ಯವರು ಜನಶಕ್ತಿ ಪತ್ರಿಕೆಯೊಂದಿಗೆ ಹಂಚಿ ಕೊಂಡ ವಿಚಾರಗಳ ಸಂದರ್ಶನ

ಜ: ಬೆಂಬಲ ಬೆಲೆ ಎಂದರೇನು?

ಮಾ: ಬೆಳೆ ಬೆಳೆದ ರೈತನಿಗೆ ತಗಲುವ ಉತ್ಪಾದನಾ ವೆಚ್ಚ ಹಾಗೂ ಜೀವನ ನಿರ್ವಹಣೆ ಯನ್ನು ಸರಿದೂಗಿಸಲು ಇಂದಿನ ಮುಕ್ತ ಮಾರುಕಟ್ಟೆಗೆ ಅನುಗುಣವಾಗಿ ಸರ್ಕಾರವು ನಿರ್ದಿಷ್ಟ ಬೆಲೆ ನಿಗದಿ ಮಾಡಿಕೊಂಡುಕೊಳ್ಳುವ ಚೈತನ್ಯವನ್ನು ಬೆಂಬಲ ಬೆಲೆ ಎಂದು ಕರೆಯಬಹುದು.

ಜ: ಭತ್ತದ ಬೆಂಬಲ ಬೆಲೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಧೋರಣೆಗಳೇನು?

ಮಾ: ಭತ್ತದಲ್ಲಿ ಎರಡು ರೀತಿಯ ವಿಭಾಗ ಮಾಡಲಾಗಿದೆ ಒಂದು ಎ ಗ್ರೇಡ್ ಭತ್ತ. ಇದಕ್ಕೆ ಪ್ರತಿ ಕ್ವಿಂಟಾಲಿಗೆ 1600ರೂ.ಗಳ ನಿಗದಿ ಮಾಡಬೇಕೆಂಬ ಹಾಗೂ ಬಿ ಗ್ರೇಡ್ ಭತ್ತದ ಪ್ರತಿ ಕ್ವಿಂಟಾಲಿಗೆ ರೂ.1500ಗಳನ್ನು ಮಾಡಬೇಕು ಎಂಬುದು ನಮ್ಮ ಪ್ರಮುಖವಾದ ಬೇಡಿಕೆ ಆಗಿದೆ. ಆದರೆ ಕೇಂದ್ರ ಸರ್ಕಾರ ಯಾವುದೇ ರೀತಿಯಲ್ಲಿ ಇತ್ತಕಡೆ ಸ್ಪಂದಿಸುತ್ತಿಲ್ಲ. ರೈತರನ್ನು ನಿರ್ಲಕ್ಷ್ಯ ಮಾಡುತ್ತಿದೆ. ದೇಶದ ಕೃಷಿ ಬೆಲೆ ಆಯೋಗ ಹಲ್ಲಿಲ್ಲದ ಹಾವಿನಂತೆ ಆಗಿದೆ. ಏನೂ ಪ್ರಯೋಜನವಾಗುತ್ತಿಲ್ಲ. ದೇಶದ ಎರಡನೇಯ ರೈತರ ಆಯೋಗದ ಅಧ್ಯಕ್ಷರಾಗಿದ್ದ ಎಂ.ಎಸ್.ಸ್ವಾಮಿನಾಥನ್ ರವರು ನೀಡಿರುವ ಶಿಫಾರಸ್ಸಿನ ವರದಿಯು ಆಧಾರವನ್ನೇ ತೆಗೆದುಕೊಂಡರೆ ಎ ಗ್ರೇಡ್‌ಗೆ 1030, ಬಿ ಗ್ರೇಡ್‌ಗೆ 1000 ನಿಗದಿ ಮಾಡಿರುವ ಇದರ ಆಧಾರದ ಮೇಲೆ ಶೇ.50% ಬೆಂಬಲ ಬೆಲೆ ನಿಗದಿ ಮಾಡಬೇಕು ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಈ ವರದಿಗೆ ಕವಡೆ ಕಾಸಿನ ಕಿಮ್ಮತ್ತು ಕೊಡದೆ ರೈತ ವಿರೋಧಿ ಧೋರಣೆ ತಾಳುತ್ತಿದೆ. ಎರಡನೇಯದು ಸಟ್ಟ ವ್ಯಾಪಾರ ಚಟುವಟಿಕೆ ಬಜೆಟ್‌ನಲ್ಲಿ ವಾಜಪೇಯಿ ಕಾಲದಲ್ಲಿ ಸೇರ್ಪಡೆಯಲ್ಲಿ ಆಗಿದೆ. ಇದರಿಂದ ದೇಶದ ಕಂಪನಿಗಳಿಗೆ ವಿದೇಶಿ ಕಂಪನಿಗಳಿಗೆ(ಅಕ್ಕಿ) ಮಾರುಕಟ್ಟೆ ಯಲ್ಲಿ ನೇರವಾಗಿ ಖರೀದಿ ಮಾಡಿ ಲಕ್ಷಾಂತರ ಟನ್ ಸ್ಟಾಕ್ ಇಟ್ಟುಕೊಳ್ಳಲು ನೇರವಾಗಿ ಅನುಕೂಲ ಮಾಡಿಕೊಟ್ಟಿದೆ. ಮತ್ತೊಂದೆಡೆ ಸರ್ಕಾರವೇ ಇವರುಗಳಿಂದ ಖರೀದಿಗೆ ಮುಂದಾಗುತ್ತಿವೆ. 2000–3500ವರೆಗೆ ಬೆಲೆ ಕೊಟ್ಟು ಕೊಂಡುಕೊಳ್ಳುವ ಈ ಹೀನಾಯ ವ್ಯವಸ್ಥೆಗೆ ಏನು ಹೇಳಬೇಕು. ರೈತರ ತುಳಿದು ಶ್ರೀಮಂತರ ವ್ಯಾಪಾರಿಗಳ ಬಂಡವಾಳಶಾಹಿಗಳ ಅರಮನೆ ನಿರ್ಮಿಸಲು ಹೊರಟಿದೆ.



ಜ: ದೇಶದಲ್ಲಿ ಭತ್ತದ ರಫ್ತು ವ್ಯಾಪಾರ ನೀತಿ ಹೇಗಿದೆ?

ಮಾ: ರಫ್ತು ವಿಚಾರಕ್ಕೆ ಬಂದರೆ, ಹೊರ ದೇಶಗಳಲ್ಲಿ ನಮ್ಮ ಭತ್ತಕ್ಕೆ ಬೆಲೆ ಕಡಿಮೆ ಇದೆ. ಏಕೆಂದರೆ ಬೇರೆ ದೇಶಗಳು ಆಯಾ ದೇಶದ ಭತ್ತ ಬೆಳೆಗಾರರಿಗೆ ಉತ್ತಮವಾದ ರೀತಿಯಲ್ಲಿ ಎಲ್ಲಾ ರೀತಿಯಲ್ಲಿ ಸಬ್ಸಿಡಿ ಕೊಡುತ್ತಾರೆ. ಹೀಗಾಗಿ ಅಲ್ಲಿಯ ರೈತರ ಉತ್ಪಾದನಾ ವೆಚ್ಚ ಕಡಿಮೆ ಇರೋದ್ರಿಂದ ಅವರು ಪೈಪೋಟಿ ನೀಡುತ್ತಾರೆ. ನಮಗೆ ಅವರ ಮಟ್ಟಕ್ಕೆ ವ್ಯಾಪಾರದ ಪೈಪೋಟಿಗೆ ಇಳಿಯಲು ನಮ್ಮ ಸರ್ಕಾರ ಯಾವುದೇ ರೀತಿಯ ಅನುಕೂಲಕರವಾದ ವ್ಯಾಪಾರಿ ಅಂಶಗಳನ್ನು ಜಾರಿಗೆ ಮಾಡುತ್ತಿಲ್ಲ. ಒಂದು ಲಕ್ಷ ಟನ್ ರಫ್ತು ಮಾಡಲು ಕೇಂದ್ರಸರ್ಕಾರ ಪರ್ಮಿಷನ್ ಕೊಟ್ಟಿದೆ. ಆದರೆ ವಿದೇಶಿ ಮಾರುಕಟ್ಟೆ ಯಲ್ಲಿ ನಮ್ಮ ಬೆಲೆ ಖರೀದಿ ಮಾಡಲು ಯಾರು ಮುಂದೆ ಬರುತ್ತಿಲ್ಲ. ಜನಸಂಖ್ಯೆಯಲ್ಲಿ ಭಾರತ 2ನೇ ಸ್ಥಾನದಲ್ಲಿದ್ದು, ಹಸಿವು ಪದ್ಧತಿಯಲ್ಲಿ 7ನೇ ಸ್ಥಾನದಲ್ಲಿದೆ. ಇಂತಹ ದೊಡ್ಡ ಪ್ರಮಾಣದ ಹಸಿವಿನ ಬವಣೆಯನ್ನು ಬಗೆಹರಿಸಲು ಅನ್ನ ಸಿಗುತ್ತಿಲ್ಲ ಎಂಬುದು ಗಮನಾರ್ಹ ಅಂಶ. ಮತ್ತೊಂದು ರೈತರ ಆತ್ಮಹತ್ಯೆ, ಇದನ್ನೆಲ್ಲಾ ತಪ್ಪಿಸಲು ಪರಿಹಾರವಾಗಿ ನಾವು ಹೇಳುತ್ತಿ ರುವುದು.ರೈತರಿಗೆ ಬೆಂಬಲ ಬೆಲೆ ಕೊಟ್ಟು ಕೊಂಡು ಅಗ್ಗದ(ಕನಿಷ್ಠ) ಬೆಲೆಗೆ [illegible]




ಜೂನ್ 187, 2011 ದಾವಣಗೆರೆಯ ಭತ್ತ ಖರೀದಿ ಕೇಂದ್ರ ಮುಚ್ಚಿರುವುದು

ಜ: ರಾಜ್ಯ ಸರ್ಕಾರದ ಬೆಂಬಲ ಬೆಲೆಯ ನೀತಿಗಳೇನು?

ಮಾ: [illegible] ಕೃಷಿ ಬಜೆಟ್ [illegible] ಕೊಳ್ಳುವ ಈ [illegible] ಆಗಬೇಕು. ಈ ಬಜೆಟ್‌ನಲ್ಲಿ ರೈತರಿಗೆ [illegible] ಏನಾದರೂ [illegible] ಏನು ಇಲ್ಲ. ರೈತರ ಸಂಕಷ್ಟಗಳನ್ನು, ರೈತ ನೋವುಗಳನ್ನು ಗಾಳಿಗೆ ತೂರಿದೆ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಈ ಸರ್ಕಾರ ವಿಫಲವಾಗಿದೆ. ಮುಖ್ಯವಾಗಿ ರಾಜ್ಯ ಸರ್ಕಾರ ಹಿಂದಿನ ಸರ್ಕಾರಗಳು ಕೃಷಿ ಬೆಂಬಲ ಬೆಲೆ ಆಯೋಗ ರಚನೆ ಮಾಡಿದ್ದರೂ ಇದನ್ನು ಬಿಜೆಪಿ ಸರ್ಕಾರ ಬಂದ ಮೇಲೆ ಡಾ॥ ಬಿಸಲೆ ನೇತೃತ್ವದಲ್ಲಿ ಇರುವಂತಹ ಕೃಷಿ ಬೆಂಬಲ ಬೆಲೆಗೆ ಆಯೋಗ ರದ್ದು ಮಾಡಿದೆ. ಇದೇ ಇವರ ದೊಡ್ಡ ಸಾಧನೆ ಎಂದು ಬಿಂಬಿಸುತ್ತಿದ್ದಾರೆ. ಇದರ ಪ್ರಭಾವದಿಂದ ರೈತರ ಸಮಸ್ಯೆ ಮತ್ತಷ್ಟು ಜಾಸ್ತಿಯಾಗಿ ರೈತ ಸಾಲಸೋಲ ಮಾಡಿ ಮತ್ತಷ್ಟು ಸಂಕಷ್ಟದ ಸುಳಿಗೆ ಸಿಕ್ಕಿಹಾಕಿಕೊಂಡಿದ್ದಾನೆ. ಈ ಕಾರಣದಿಂದಾಗಿ ಕಳೆದ 2009–10ಕ್ಕೆ 1365 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹೀಗೆ ಮುಂದುವರೆದು ರೈತರ ಆತ್ಮಹತ್ಯೆ ಪ್ರಕರಣದಲ್ಲಿ ದೇಶದಲ್ಲಿ ಕರ್ನಾಟಕ ಮೊದಲನೇ ಸ್ಥಾನದಲ್ಲಿ ಇದೆ ಎಂದು ವರದಿ ಹೇಳಿದೆ. ಇದು ಯಡಿಯೂರಪ್ಪ ನವರ ಕೀರ್ತಿ ಆಗಿದೆ.

ಇದೇ ಬಿಜೆಪಿ ಸಹಭಾಗಿನಾಗಿದ್ದ ಕುಮಾರಸ್ವಾಮಿ ಸರ್ಕಾರದಲ್ಲಿ ಎಂ.ಎಸ್.ಸ್ವಾಮಿನಾಥನ್ ರವರ ಶಿಫಾರಸ್ಸಿನ ವರದಿಯನ್ನು ಜಾರಿ ಮಾಡುವುದಾಗಿ ಒಪ್ಪಿಕೊಂಡಿದ್ದರು. ಆದರೆ ಇವರೇ ಈಗ ಸರ್ಕಾರ ನಡೆಸುತ್ತಿದ್ದಾರೆ. ಕೇಂದ್ರದ ಕಡೆ ಬೊಟ್ಟು ತೋರಿಸುತ್ತಿದ್ದಾರೆ. ಇದು ರೈತ ದ್ರೋಹಿ ಕೆಲಸವಲ್ಲವೇ? ಮತ್ತೊಂದೆಡೆ ಖರೀದಿ ಕೇಂದ್ರಗಳನ್ನು ತೆರೆಯಲು ಮುಂದಾಗಿಲ್ಲ. ಮುಂದಾದರೂ ಸರಿಯಾದ ಸಮಯದಲ್ಲಿ ಅಂದರೆ ಸುಗ್ಗಿಯ ಕಾಲ ಮುಗಿದ ಮೇಲೆ ತೀರ್ಮಾನ ಮಾಡಿವೆ. ಆಗ ಏನಾಯಿತು? ಅಕ್ಕಿ ಮಿಲ್ ಮಾಲೀಕರ ಜೇಬು ತುಂಬಲು ಕಾರಣ ವಾಯಿತು. 1ಲಕ್ಷ ಹೆಕ್ಟೇರ್‌ನಲ್ಲಿ ಭತ್ತ ಬೆಳೆಯನ್ನು ರಾಜ್ಯದಲ್ಲಿ ಬೆಳೆಯುತ್ತಿದ್ದಾರೆ. ಇಷ್ಟು ದೊಡ್ಡ ಪ್ರಮಾಣದ ಬೆಳೆಗೆ ನಮ್ಮ ರಾಜ್ಯದಲ್ಲಿ ಗೋಡನ್‌ಗಳೇ ಇಲ್ಲ. ಎಂಥನಾಚಿಕೆ ವಿಷಯ. ಕೆ.ಎಫ್.ಸಿ. ಕರ್ನಾಟಕ ಫುಡ್ ಕಾರ್ಪೋರೇಷನ್ ನಿಂದ ನಿರ್ಮಾಣವಾದ ಗೋಡನ್‌ಗಳು ಎಲ್ಲಿ ಇವೆ. ರೈತ ಭತ್ತ ಬೆಳೆದು ಚಳಿ, ಮಳೆ ಬಿಸಿಲಿನಿಂದ ಸಂರಕ್ಷಿಸಲು ಆತನು ಬೀದಿಯಲ್ಲಿ ತನ್ನ ಹೊಲಗದ್ದೆಯ ಕಾವಲು [illegible]

ಒಂದು ಪರಿಣಾಮಕಾರಿ ಲೋಕಪಾಲ ಮಸೂದೆಯನ್ನು ಸಂಸತ್ತಿನ ಮುಂದೆ ತರಲು ಯುಪಿಎ-2 ಸರಕಾರ ಇನ್ನೂ ಹಿಂದೇಟು ಹಾಕುತ್ತಿದೆ. ಅದಕ್ಕಾಗಿ ಸಂಸತ್ತಿನ ಅಧಿವೇಶನವನ್ನೂ ಎರಡು ವಾರ ಮುಂದೂಡಿದೆ. ಆದರೆ ಸಮಾಲೋಚನೆಯ ನಾಟಕವನ್ನು ಬಿಟ್ಟಿಲ್ಲ. ಸಿಬಿಐಯನ್ನು ಮಾಹಿತಿ ಹಕ್ಕು ಕಾನೂನಿನ ವ್ಯಾಪ್ತಿಯ ಹೊರಗಿಡುವ ಪ್ರಯತ್ನ ನಡೆಯುತ್ತಿದ್ದು, ಈಗ ಭ್ರಷ್ಟಾಚಾರದ ವಿರುದ್ಧ ದೇಶದಲ್ಲಿ ಮೂಡಿರುವ ವಾತಾವರಣದಲ್ಲಿ ಹೀಗೆ ಮಾಡುವುದು ವಿರುದ್ಧ ಪರಿಣಾಮವನ್ನೇ ಬೀರಬಹುದು ಎಂದು ಭಾರತದ ಮೊದಲ ಮುಖ್ಯ ಮಾಹಿತಿ ಆಯುಕ್ತ(ಸಿಐಸಿ- ಈಗ ನಿವೃತ್ತರು) ವಜಾಹತ್ ಹಬೀಬುಲ್ಲ ಹೇಳಿದ್ದಾರೆ. ಈ ನಡುವೆ ಭೂಸ್ವಾಧೀನದ ಬಗ್ಗೆ ಯುಪಿಎ ದ್ವಂದ್ವ ರಾಜಕೀಯ ಉತ್ತರ ಪ್ರದೇಶ, ಒಡಿಶಾ ಮತ್ತು ಪಶ್ಚಿಮ ಬಂಗಾಲದಲ್ಲಿ ಬಯಲಾಗುತ್ತಿದೆ.



ವೇದರಾಜ ಎನ್.ಕೆ.

ಲೋಕಪಾಲ ಕಾನೂನು-ಇನ್ನೂ ಮರೀಚಿಕೆ


ಲೋಕಪಾಲ ಮಸೂದೆ ಕರಡು ಸಿದ್ಧಪಡಿಸುತ್ತಿದ್ದ ಜಂಟಿ ಸಮಿತಿಯ ಕೆಲಸ ಮುಗಿದಿದೆ. ಆದರೆ ಸಂಸತ್ತಿನ ಮುಂದೆ ಮಂಡಿಸುವ ಒಮ್ಮತದ ಕರಡು ಬಂದಿಲ್ಲ. ಕೇಂದ್ರ ಸಂಪುಟದ ಮುಂದೆ ಎರಡು ಕರಡುಗಳು ಹೋಗುತ್ತವೆ, ಅದು ಅಂತಿಮ ನಿರ್ಣಯ ಕೈಗೊಳ್ಳುತ್ತದೆ ಎಂದು ಜಂಟಿ ಸಮಿತಿಯಲ್ಲಿನ ಸರಕಾರೀ ಪ್ರತಿನಿಧಿಗಳು ಹೇಳಿದ್ದಾರೆ. ಆದರೆ ಇದೊಂದು ತಮಾಷೆ, ವಂಚನೆ ಎಂದು ಅಣ್ಣಾ ಹಝಾರೆ ಹೇಳಿದ್ದಾರೆ. ಸರಕಾರ ಈ ಬಗ್ಗೆ ಸರ್ವಪಕ್ಷ ಸಭೆಯನ್ನು ಜುಲೈ 3 ರಂದು ಕರೆಯಲಿದೆಯಂತೆ, ಅದರ ಮೊದಲು ಎರಡೂ ಕರಡುಗಳನ್ನು ಎಲ್ಲ ರಾಜಕೀಯ ಪಕ್ಷಗಳಿಗೂ ತಲುಪಿಸಲಾಗುವುದಂತೆ. ಅತ್ತ ಅಣ್ಣಾ ಹಝಾರೆಯವರ ತಂಡ ಈ ಸಭೆಯ ಮೊದಲು ಎಲ್ಲ ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಡನೆ ಸಮಾಲೋಚನೆ ನಡೆಸುವುದಾಗಿ ಹೇಳಿದೆ.

ಈ ಹಿಂದೆ ಯುಪಿಎ-2 ಸರಕಾರದ ಹಿರಿಯ ಮಂತ್ರಿ ಪ್ರಣಬ್ ಮುಖರ್ಜಿಯವರು ಎಲ್ಲ ರಾಜಕೀಯ ಪಕ್ಷಗಳಿಗೆ ಪತ್ರ ಬರೆದು ಆರು ಪ್ರಶ್ನೆಗಳನ್ನು ಅವರ ಮುಂದಿಟ್ಟಿದ್ದರು. ಅದಕ್ಕೆ 'ಹೌದು'/'ಇಲ್ಲ' ಉತ್ತರಗಳನ್ನು ನಿರೀಕ್ಷಿಸಿದ್ದರು. ಆದರೆ ಭ್ರಷ್ಟಾಚಾರ ತಡೆಗೆ ಲೋಕಪಾಲ ವ್ಯವಸ್ಥೆಯ ರಚನೆಯ ವಿಷಯವನ್ನು ಈ ಆರು ಪ್ರಶ್ನೆಗಳಿಗೆ ಮಿತಿಗೊಳಿಸಲು ಸಾಧ್ಯವಿಲ್ಲ, ಒಂದು ಕರಡು ತಯಾರಿಸಿ, ಅದರ ಮೇಲೆ ಚರ್ಚೆ ಮಾಡೋಣ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಪ್ರತ್ಯುತ್ತರ ಬರೆದಿದ್ದರು.

ಈ ನಡುವೆ, ಈ ಮಸೂದೆಯಿಂದಾಗಿ ಸಂಸತ್ತಿನ ಮಳೆಗಾಲದ ಅಧಿವೇಶನವನ್ನು ಎರಡು ವಾರಗಳ ಕಾಲ ಮುಂದೂಡಲಾಗಿದೆ. ಒಂದು ಮಸೂದೆಯನ್ನು ಮಂಡಿಸಿ ಅದನ್ನು ಸ್ಥಾಯೀ ಸಮಿತಿಗೆ ಒಪ್ಪಿಸಿ ಸದ್ಯಕ್ಕೆ ಕೈತೊಳೆದುಕೊಳ್ಳುವ ಸಂಭವವೂ ಇದೆ ಎನ್ನಲಾಗುತ್ತಿದೆ. ಈ ಬಾರಿಯೂ ಪ್ರಧಾನ ಮಂತ್ರಿಗಳನ್ನು ಈ ಕಾನೂನಿನ ವ್ಯಾಪ್ತಿಗೆ ತರಲು ಆಳುವ ವರ್ಗಗಳ ನಿರಾಕರಣೆಯೇ ಒಂದು ಪ್ರಮುಖ ಅಡಚಣೆಯಾಗಿ ನಿಂತಿದೆ.

ಯುಪಿಎ-2 ಸರಕಾರದ ಹಿಂಜರಿಕೆಯ ಹಿನ್ನೆಲೆಯಲ್ಲಿ ಎಡಪಕ್ಷಗಳು ಒಂದು ಪರಿಣಾಮಕಾರಿ ಲೋಕಪಾಲ ಕಾನೂನು ರಚನೆ

ಭ್ರಷ್ಟಾಚಾರದ ವಿರುದ್ಧ
ಹೋರಾಟದ ವಿರುದ್ಧ ಸಮರ



ಕೃಪೆ: ದಿ ಹಿಂದೂ

ಸೇರಿದಂತೆ ಭ್ರಷ್ಟಾಚಾರದ ವಿರುದ್ಧ ಕಠಿಣ ಕ್ರಮಗಳನ್ನು ಆಗ್ರಹಿಸಿ ಜುಲೈ 15 ರಿಂದ 21 ರವರೆಗೆ ಚಳುವಳಿ ನಡೆಸಲು ನಿರ್ಧರಿಸಿವೆ(ಬಾಕ್ಸ್ ನೋಡಿ).

★

ಪೋಸ್ಕೋ ಹೋರಾಟ: ಯುಪಿಎ ದ್ವಂದ್ವ ರಾಜಕೀಯ

ಒಡಿಶಾ ರಾಜ್ಯದಲ್ಲಿ ವಿವಾದಾತ್ಮಕ ಪೋಸ್ಕೊ ವ್ಯವಹಾರದಲ್ಲಿ ಭೂಸ್ವಾಧೀನ ಪ್ರಯತ್ನವನ್ನು ಪ್ರತಿರೋಧಿಸಿ ಧಿಂಕಾ ಪಂಚಾಯತು ಪ್ರದೇಶದಲ್ಲಿ ಗ್ರಾಮಸ್ಥರು ರಚಿಸಿದ ಮಾನವ ಗೋಡೆ ಎಲ್ಲರ ಗಮನ ಸೆಳೆದಿದೆ. ಆದರೆ ಈ ಘಟನೆ ಯುಪಿಎ-2 ಸರಕಾರದ ದ್ವಂದ್ವ ನೀತಿಯನ್ನು ಕೂಡ ಬಯಲಿಗೆಳೆದಿದೆ. ವಾಸ್ತವವಾಗಿ ಯುಪಿಎ ಸರಕಾರದ ಪರಿಸರ ಇಲಾಖೆ ಬಹಳಷ್ಟು ಸದ್ದು ಮಾಡಿ ಕೊನೆಗೆ ಈ ಪ್ರಾಜೆಕ್ಟಿಗೆ ಮಂಜೂರಾತಿ ನೀಡಿಯೇ ಬಿಟ್ಟದ್ದು ಈಗಿನ ಘಟನೆಗಳಿಗೆ ಕಾರಣ. ಈ ರೀತಿ ಮಂಜೂರಾತಿ ನೀಡಿದ್ದೇ ಯುಪಿಎ-2ರ ಇಬ್ಬಂದಿತನವನ್ನು ತೋರಿದರೆ, ಈ ಹೋರಾಟದ ವೇಳೆಗೆ, ಯುಪಿಎ ಪರಿಸರ ಮಂತ್ರಿಗಳ 'ಅರಣ್ಯ ಮತ್ತು ಪರಿಸರ ಮಂಜೂರಾತಿ ಎಂದರೆ ಬಲವಂತದಿಂದ ಭೂಸ್ವಾಧೀನಕ್ಕೆ ಮಂಜೂರಾತಿಯಲ್ಲ' ಎಂಬ ಹೇಳಿಕೆ, ಮತ್ತು ಒಡಿಶಾ ಸರಕಾರ 'ಚರ್ಚೆ, ಸಂವಾದ ಮತ್ತು ಪ್ರಜಾಪ್ರಭುತ್ವ'ದ ನೀತಿಯನ್ನು ಎತ್ತಿ ಹಿಡಿಯಬೇಕು ಎಂಬ ಸಲಹೆ ಕೂಡ ಅದನ್ನೇ ತೋರಿದೆ.

ಗಂಭೀರ ಭಿನ್ನಾಭಿಪ್ರಾಯಗಳಿದ್ದರೂ ಕೂಡ ಪರಿಸರ ಮಂಜೂರಾತಿ ನೀಡಿರುವುದು ಯುಪಿಎ-2 ತನ್ನ ಸರಕಾರಕ್ಕೆ ಬಂಡವಾಳ ಮತ್ತು ಸಾಮಾಜಿಕ ಆಧಾರವನ್ನು ಒದಗಿಸಿರುವ ಕಾರ್ಪೊರೇಟ್ ಲಾಬ್ಬಿಯನ್ನು ಓಲೈಸುವ ಪ್ರಯತ್ನವಾದರೆ, ಭೂಸ್ವಾಧೀನಕ್ಕೆ ಸಂಬಂಧಪಟ್ಟಂತೆ ಮಂತ್ರಿಗಳ 'ಸಲಹೆ' ಕೇಂದ್ರದಲ್ಲಿ ಒಂದು ಕಾರ್ಪೊರೇಟ್-ಪರ ಭೂಸ್ವಾಧೀನ ಕಾನೂನಿಗೆ ಸಿದ್ಧತೆ ನಡೆಸುತ್ತಲೇ, ಕಾಂಗ್ರೆಸೇತರ ಆಳ್ವಿಕೆಯ ರಾಜ್ಯಗಳಲ್ಲಿ ಭೂಸ್ವಾಧೀನವನ್ನು ವಿರೋಧಿಸಿ ಅಗ್ಗದ ಜನಪ್ರಿಯತೆ ಗಳಿಸುವ ದ್ವಂದ್ವ ರಾಜಕೀಯದ ಪ್ರದರ್ಶನ ಎಂದು ವಿಶ್ಲೇಷಕರು ಅಭಿಪ್ರಾಯ ಪಟ್ಟಿದ್ದಾರೆನಿದನ್ನು ಉತ್ತರಪ್ರದೇಶ ಮತ್ತು ಒಡಿಶಾದಲ್ಲಿ ಈಗ ಕಾಣುತ್ತಿದ್ದೇವೆ.

★

ಪ.ಬಂಗಾಳ- ಪಾಂಡವೇಶ್ವರ: ಭೂಸ್ವಾಧೀನ ವಿರೋಧಿಸಿದ್ದಕ್ಕೆ ಲಾಟಿಯೇಟು

ಭೂಸ್ವಾಧೀನಕ್ಕೆ ಸಂಬಂಧಪಟ್ಟಂತೆ ಯುಪಿಎ ಗೋಸುಂಬೆತನ ಈಗ ಪಶ್ಚಿಮ ಬಂಗಾಲದ ರಾಣಿಗಂಜ್ ಕಲ್ಲಿದ್ದಲು ಪ್ರದೇಶದಲ್ಲಿ ಬಟ್ಟ ಬಯಲಾಗಿದೆ. ಈ ಪ್ರದೇಶದಲ್ಲಿರುವ ಪಾಂಡವೇಶ್ವರ ಎಂಬ ಗ್ರಾಮದಲ್ಲಿ ಕೇಂದ್ರ ಸರಕಾರೀ ಒಡೆತನದ ಈಸ್ಟರ್ನ್ ಕೋಲ್ ಫೀಲ್ಡ್ಸ್ ಲಿಮಿಟೆಡ್(ಇಐಎಲ್)ನ ಪಕ್ಕದಲ್ಲಿ ಸಾಗುವಳಿ ಮಾಡುತ್ತಿರುವ ಮತ್ತು ವಾಸವಾಗಿರುವ ಸುಮಾರು 30,000 ಬಡಮಂದಿಯನ್ನು ಜಾಗ ಖಾಲಿ ಮಾಡುವಂತೆ ನೋಟೀಸು ಕೊಟ್ಟಿದೆ. ಇದನ್ನು ಕಲ್ಲಿದ್ದಲು ಕಾರ್ಮಿಕರೂ ಸೇರಿದಂತೆ 15,000 ಗ್ರಾಮಸ್ಥರು ಶಾಂತಿಯುತವಾಗಿ ಧರಣಿ

ಪುಟ 15ಕ್ಕೆ

ಭತ್ತ ಮಾರಾಟ.....

ಪುಟ 11 ರಿಂದ

ಕಾಯುವ ಪರಿಸ್ಥಿತಿ ಇದೆಯಲ್ಲ. ಇದು ಸರ್ಕಾರಕ್ಕೆ ಅರ್ಥವಾಗುತ್ತಿಲ್ಲ ಏಕೆ? ಇವನ ಕಷ್ಟ ಕೇಳೋರು ಯಾರು? ಮೂಲಸೌಕರ್ಯದ ಬಗ್ಗೆ ಮಾತಾಡೋ ಇವರು ತಾಲ್ಲೂಕಿನ ಅಥವಾ ಜಿಲ್ಲೆಯ ಯಾವುದೋ ಒಂದು ಮೂಲೆಯಲ್ಲಿ ಉಗ್ರಾಣ ತೆರೆದಿರುತ್ತಾರೆ. ಅಲ್ಲಿಗೆ ರೈತರು ತೆಗೆದುಕೊಂಡು ಹೋಗಬೇಕು ಆತನ ಸಾರಿಗೆ ವೆಚ್ಚ ಏನು ಇತರೆ ಕೂಲಿಯ ವೆಚ್ಚಗಳೇನು? ಇವೆಲ್ಲವನ್ನೂ ಮೂಲಭೂತವಾಗಿ ಗಮನಹರಿಸಬೇಕಾಗಿದೆ.

ಜ: ರಾಜ್ಯ ಕೃಷಿ ಬಜೆಟ್‌ನಲ್ಲಿ ಏನೋ ಆವರ್ತನಿಧಿ ಅಂತಹ ಎಷ್ಟು ಕೋಟಿ ಇಟ್ಟಿದ್ದಾರಲ್ಲ ರೈತರಿಗೆ ಇದರ ಪ್ರಯೋಜನ ಏನು ಇಲ್ಲವೇ ?

ಮಾ: ಈ ಕೃಷಿ ಬಜೆಟ್ ಎಂಬುದೇನಿದೆ ಇದೇ ಒಂದು ಕನ್ನಡಿಒಳಗಿನ ಗಂಟು ನೋಡದಿಕ್ಕೆ ಮಾತ್ರ ಕಾಣುತ್ತದೆ ನಿಜವಾಗಿಯೂ ರೈತರ ಕೈಗೆ ಸಿಗೋದಿಲ್ಲ. ಸ್ವಹಿತಾಸಕ್ತಿಗಾಗಿ ಮಾಡಿಕೊಂಡಿರುವ ವ್ಯವಸ್ಥೆ,ಯಂತ್ರಗಳಿಗೆ ಸಬ್ಸಿಡಿ ಕೊಡಲು ಹೊರಟಿದ್ದಾರೆ. ದೊಡ್ಡ ಪ್ರಮಾಣದ ಜಮೀನ್ದಾರ್‌ರಿಗೆ ಕೃಷಿ ಸಾಲಕ್ಕೆ ಸಬ್ಸಿಡಿ ಕೊಡಲು ಮುಂದಾಗಿದ್ದಾರೆ. ಇದೆಲ್ಲಾ ಏನು ಕೂಲಿಕಾರರಿಗೆ, ಬಡರೈತರಿಗೆ ಇದರಿಂದ ಕಿಂಚಿತ್ತೂ ಉಪಯೋಗ ಇಲ್ಲ. ಮತ್ತಷ್ಟು ಶೋಷಣೆ ಮಾಡುವ ಒಂದು ಹೊಸ ನೀತಿಯಾಗಿದೆ. ಬೀಜಗಳ ಮೇಲೆ ರಸಗೊಬ್ಬರಗಳ ಮೇಲೆ ಕೀಟನಾಶಕಗಳ ಮೇಲೆ ರಿಯಾಯಿತಿ ಸಬ್ಸಿಡಿ ಎಂಬುದು ಬರಿ ದೊಡ್ಡ ಪ್ರಮಾಣದ ಜಮೀನ್ದಾರರನ್ನು ಭೂಮಾಲೀಕರನ್ನು, ಅಕ್ಕಿ ಗಿರಣಿ ಮಾಲೀಕರ ಹಿತ ಕಾಪಾಡಲು ಮುಂದಾಗುತ್ತಿದೆ. ನಿಜವಾಗಿಯೂ ರೈತರಿಗೆ ಉಪಯೋಗವಾಗಬೇಕು ಅಂದ್ರೆ, ಮೊದಲು ಭತ್ತಕ್ಕೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಬೇಕು. ಆಗ ಮಾತ್ರ ರೈತರ ಜೀವನ ಮಟ್ಟ ಸುಧಾರಿಸಲು ಸಾಧ್ಯ.

→




ಭೂ ಗಳ್ಳರ ದಂಧೆ ಮರೆಮಾಚಿ-1500 ಕೋಟಿ ನಷ್ಟ

ಬಿಜೆಪಿ ದರ್ಬಾರ್

■ ಆರ್.ರಾಮಕೃಷ್ಣ

ಬೆಂಗಳೂರು ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಭೂಮಿಯ ಬೆಲೆ ಮುಗಿಲು ಮುಟ್ಟಿದೆ. ಇಲ್ಲಿನ ಭೂಗಳ್ಳ ತಿಮಿಂಗಲಗಳ ಭೂಮಿ ನುಂಗುವ ದಂಧೆಯ ಭರಾಟೆ ಎಷ್ಟು ಬಿರುಸಾಗಿದೆ ಎನ್ನುವುದು ಇತ್ತೀಚಿನ ವರ್ಷಗಳಲ್ಲಿ ಬಯಲಾಗಿತ್ತು.

ಸಿಪಿಐ(ಎಂ) ಶಾಸಕ ಜಿ.ವಿ.ಶ್ರೀರಾಮರೆಡ್ಡಿ ಯವರು ರಾಜ್ಯದ ವಿಧಾನಸಭೆಯಲ್ಲಿ ವಿಷಯವನ್ನೆತ್ತಿ ಚರ್ಚೆಗೆ ತಂದ ಈ ಪ್ರಶ್ನೆಯಲ್ಲಿ



ಕೃಪೆ : ಪ್ರಜಾವಾಣಿ

ಎ.ಟಿ.ರಾಮಸ್ವಾಮಿ ನೇತೃತ್ವದ ಸಮಿತಿ ರಚನೆಯಾಗಿ ಅದು ತನಿಖೆ ನಡೆಸಿ ವರದಿ ನೀಡಿತು. ಬೆಂಗಳೂರಿನಲ್ಲಿ ಮಾತ್ರವೇ ಸು.41 ಸಾವಿರ ಎಕರೆಗೂ ಅಧಿಕ ಪ್ರಮಾಣದ ಸರ್ಕಾರಿ ಜಮೀನು ಭೂಗಳ್ಳರ ಪಾಲಾಗಿರುವುದು ವರದಿಯಿಂದ ಬಯಲಾಗಿತ್ತು. ಆ ನಂತರದ ಅವಧಿಯಲ್ಲಿ ಸರ್ಕಾರಿ ಜಮೀನನ್ನು ಮರು ವಶಕ್ಕೆ ತೆಗೆದುಕೊಳ್ಳುವ ಕೆಲಸ ಒಂದಿಷ್ಟು ಕಾಲ ರಭಸ ವಾಗಿ ನಡೆಯಿತು. ರಾಜ್ಯದಲ್ಲಿ ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದೇ ಬಂತು. ಭೂಮಿ ಮರುವಶದ ಕೆಲಸ ಬಿರುಕು ಕಳೆದುಕೊಂಡು 'ಠುಸ್' ಎಂದಿತು.

ಆಗೀಗ ತೋರಿಕೆಗೆ ಎನ್ನುವಂತೆ ಭೂಮಿ ಮರುವಶದ ಪ್ರಕರಣಗಳನ್ನು ಬಿಟ್ಟರೆ ಬಿಜೆಪಿ ದರ್ಬಾರ್‌ನಲ್ಲಿ ಭೂಗಳ್ಳ ಖದೀಮರಿಗೆ ಸುಗ್ಗಿಯೋ ಸುಗ್ಗಿ.

ಭೂಗಳ್ಳ ರಿಯಲ್ ಎಸ್ಟೇಟ್ ದಂಧಕೋರರು, ಲಂಚಕೋರ ಅಧಿಕಾರಿಗಳು, ಅಧಿಕಾರದ ಚುಕ್ಕಾಣಿ ಹಿಡಿದ ಭ್ರಷ್ಟ ಶಾಸಕ ಸಚಿವರುಗಳ ಕೈ ಜೋಡಿಸಿದರೆ 'ಹಬ್ಬದೂಟ' ಕೈ ಕೂತುಬಿಟ್ಟರೆ ಜನರ ಪರಿಸ್ಥಿತಿ ಏನು? ರಾಜ್ಯದಲ್ಲಿ ಈಗ ಅಕ್ಷರಶಃ ನಡೆದಿರುವುದು ಅದೇ.

ಈ ಮನುಷ್ಯನ ಹೆಸರು ರಾಮಾಂಜನೇಯ. 2009-10ರಲ್ಲಿ ಬೆಂಗಳೂರು ಜಿಲ್ಲೆಗೆ ವಿಶೇಷ ಜಿಲ್ಲಾಧಿಕಾರಿಯಾಗಿದ್ದರು. ಈ ಹಿಂದೆಯೇ ಲೋಕಾಯುಕ್ತರ ಬಲೆಗೆ ಸಿಕ್ಕಿ ಬಿದ್ದು 'ಅಪಾರ ಕೀರ್ತಿ' ಗಳಿಸಿರುವ ಪರಂಪರೆ ಇವರದು. ವಿಶೇಷ ಜಿಲ್ಲಾಧಿಕಾರಿಯಾಗಿ ಕಬಳಿಕೆ ಆಗಿರುವ ಸರ್ಕಾರಿ ಭೂಮಿಯನ್ನು ಮರುವಶಕ್ಕೆ ಪಡೆಯುವ ಬದಲು ಈ ಮನುಷ್ಯ ಮಾಡಿದ ಘನ ಕಾರ್ಯ ನೋಡಿ. 428 ಭೂ ಕಬಳಿಕೆ ಪ್ರಕರಣಗಳನ್ನು ತನಿಖೆಯನ್ನೇ ಮಾಡದೇ ಮುಚ್ಚಿಟ್ಟು, ಪ್ರಕರಣ ಇತ್ಯರ್ಥಪಡಿಸಿ ತಿಪ್ಪೆ ಸಾರಿಸಿದ್ದಾರೆ.

ಹೀಗೆ ಪ್ರಕರಣದ ತಿಪ್ಪೆ ಸಾರಿಸಿದ್ದರಿಂದ ಸರ್ಕಾರಕ್ಕೆ (ಅಂದರೆ ಜನಕ್ಕೆ) ಆಗಿರುವ ನಷ್ಟ 1500 ಕೋಟಿ ರೂಪಾಯಿ ಎಂದು ಅಂದಾಜು. ಇದು ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ತಾಲ್ಲೂಕು ಮತ್ತು ಆನೇಕಲ್ ತಾಲ್ಲೂಕುಗಳಲ್ಲಿ ಹರಡಿಕೊಂಡ ಒಟ್ಟು 1,042 ಎಕರೆ ಸರ್ಕಾರಿ ಜಮೀನಿನ ಪ್ರಶ್ನೆ. ಒಂದೇ ಸಾರಿಗೆ 'ಸಕ್ರಮ'. ತಲೆ ಮೇಲೆ ಕಿರೀಟ ಹೊತ್ತುಕೊಂಡು ಸಿಂಹಾಸನದ ಮೇಲೆ ಕುಳಿತು ದರ್ಬಾರ್ ನಡೆಸುವ ಮಹಾರಾಜರು, ಮಂತ್ರಿ, ಮಹಾ ಮಂತ್ರಿಗಳ ಆಶೀರ್ವಾದಗಳಿಲ್ಲದೇ ಕೋಶಾ ಧಿಕಾರಿ, ಜಿಲ್ಲಾಧಿಕಾರಿಗಳು, ಖಜಾಂಚಿಗಳು ರಾಜ್ಯದ ಖಜಾನೆಗೆ ಇಂಥ ಕನ್ನ ಕೊರೆಯಲು ಸಾಧ್ಯವೇ?

ಎಂಥಾ ಸನ್ನಿವೇಶ ತನಿಖೆ ಬಂದರೂ ನಿಬಾಯಿಸಿಕೊಂಡು ಹೋಗುವ ಬಲಿಷ್ಠ ಜಾಲವನ್ನು ಕಟ್ಟಿಕೊಳ್ಳದೇ ಹೀಗೆ ಹಾಡು ಹಗಲೇ ಖಜಾನೆಗೆ ತಳದಿಂದಲೇ ಬಾಯಿಕ್ಕುವ ಧೈರ್ಯ ಯಾರಿಗಾದರೂ ಹೇಗೆ ಬರಲು ಸಾಧ್ಯ. ರಾಮಾಂಜನೇಯ ನಂತರ ಆ ಜಾಗಕ್ಕೆ ಬಂದ ಭೂಪತಿ 'ಯಾವ ಕಾನೂನು, ಯಾವ ಕೋರ್ಟು ನಮಗೆ ಗೊತ್ತಿಲ್ಲದಿರುವುದು... ನಾವೇನು ಕಡಿಮೆಯಲ್ಲ ಅಧಿಕಾರಿ ವರ್ಗದ ನಾವೂ ಪರಾಕ್ರಮಿಗಳು ಎಂದು ಬಬ್ರುವಾಹನ ಶೈಲಿಯಲ್ಲಿ ಭುಜತಟ್ಟಿ ತಿಪ್ಪೆ ಸಾರಿಸಿದನ್ನು ಸಮರ್ಥಿಸಿ ಕೊಳ್ಳುತ್ತಾರೆಂದರೆ ಇದರಿಂದ ಕರ್ನಾಟಕ ಸರ್ಕಾರದ 'ಬಿಜೆಪಿ ದರ್ಬಾರ್' ಯಾವ ಪರಿಯಲ್ಲಿ ನಡೆಯುತ್ತಿದೆ ಎಂದು ಅಂದಾಜು ಸಿಗುತ್ತದೆ ನೋಡಿ.

ಪ್ರವಾಹ ಸಂತ್ರಸ್ಥರ ಪಾಡು

ಕರ್ನಾಟಕದ ಪ್ರವಾಹ ಸಂತ್ರಸ್ತರ ಮುಗಿಯದ ಬವಣೆಗಳ ಕುರಿತು ಈಗ ಮತ್ತೆ ಬರೆಯಲೇ ಬೇಕಾಗಿದೆ. ಏಕೆಂದರೆ ನಾವು ಪತ್ರಿಕೆಯಲ್ಲಿ ಬರೆದರು, ಬರೆಯದಿದ್ದರೂ ಮುಂಗಾರು ಮಳೆ ಪ್ರವಾಹ ಸಂತ್ರಸ್ಥರ ತಾತ್ಕಾಲಿಕ ತಗಡಿನ ಶೆಡ್ಡುಗಳ ಮೇಲೆ ಧೋ ಎಂದು ಸುರಿಯಲಿದೆ ಮತ್ತು ಆಷಾಢದ ಗಾಳಿ ಬೀಸಿ ಈಗಾಗಲೇ ಕಿತ್ತು ಬರುತ್ತಿರುವ ತಗಡು ಶೀಟುಗಳನ್ನು ಕೆಡವಿ ಬೀಳಿಸಲಿದೆ.

ಪ್ರವಾಹ ನುಗ್ಗಿಬಂದ 21 ತಿಂಗಳ ನಂತರ ಅಂದರೆ ಸುಮಾರು ಒಂದೂ ಮುಕ್ಕಾಲು ವರ್ಷದ ನಂತರ ಈಗಲೂ ಕೂಡ ಸರ್ಕಾರ ಭರವಸೆ ನೀಡಿದ್ದಲ್ಲಿ ಅರ್ಧ ಕೂಡ ಮನೆಗಳು ಸಂತ್ರಸ್ತರಿಗೆ ದಕ್ಕಿಲ್ಲ.



ಕುಡ್ಲೂರಿನ ಜನ ತಾವೇ ಮನೆಗೆ ನುಗ್ಗಿದರು

ಸರ್ಕಾರ ಭರವಸೆ ನೀಡಿದ್ದು 58,679 ಮನೆಗಳು. ಇದೀಗ ಕಾಮಗಾರಿ ಮುಗಿದಿರುವ ಮನೆಗಳ ಪ್ರಮಾಣ 31,698 (ಸಂತ್ರಸ್ತರಿಗೆ ಹಸ್ತಾಂತರ ಆಗಿರುವುದಲ್ಲ). ಇನ್ನುಳಿದರಲ್ಲಿ 7098 ಮನೆಗಳು ಇನ್ನೂ ಪಾಯದ ಮಟ್ಟದಲ್ಲೇ ಇವೆ. 5071 ಮನೆಗಳ ಮನುಷ್ಯನ ತಲೆ ಮಟ್ಟದವರೆಗೆ ಏರಿದೆ. 7,972 ಮನೆಗಳ ಮಾಡಿನ ಮಟ್ಟಕ್ಕೆ ಏರಿವೆ. ಅಂದರೆ ಇನ್ನೂ 6,833 ಮನೆಗಳ ನಿರ್ಮಾಣ ಕಾರ್ಯ ಆರಂಭವೇ ಆಗಿಲ್ಲ.

ಜನರೇ ನುಗ್ಗಿದರು : ಪ್ರವಾಹ ಸಂತ್ರಸ್ತರ ಪಾಡು ಇಲ್ಲಿಗೆ ಮುಗಿಯಲಿಲ್ಲ. ಬಳ್ಳಾರಿಯ ಜಿಲ್ಲೆಯ ಮಾತೂರ್, ಟಿ.ಎಸ್. ಕುಡ್ಲೂರ್ ಮುಂತಾದ ಕಡೆ ಮನೆ ಕಟ್ಟಿ ಮುಗಿದಿದ್ದರೂ ಸಂತ್ರಸ್ತರಿಗೆ ಕೊಡಲಿಲ್ಲ. ವಿಳಂಬ... ವಿಳಂಬ. ಮುಖ್ಯಮಂತ್ರಿಗಳೇ ಎಲ್ಲಾ ಕಡೆ ಬಂದು ಮನೆ ಕೊಡಬೇಕೆಂದರೆ ಹೇಗೆ? ಮುಖ್ಯಮಂತಿಗಳಿಗೆ ಪಾಪ ಭ್ರಷ್ಟಾಚಾರದ ಆರೋಪಗಳಿಗೆ ಉತ್ತರ ಕೊಡುವುದೇ ಆಗಿದೆ. ಜನ ನೋಡುವವರೆಗೆ ನೋಡಿ ತಾವೆ ಹೊಸ ಮನೆಗೆ ಹೋಗಿ ಸೇರಿಕೊಂಡಿದ್ದಾರೆ.

ನೀರಿಲ್ಲ-ರಸ್ತೆ ಇಲ್ಲ: ಧಾರವಾಡದಲ್ಲಿ ಒಂದೆಡೆ ಕಟ್ಟಲಾಗಿರುವ 100 ಮನೆಗಳಲ್ಲಿ ಸುಮಾರು 40 ಮನೆಗಳಲ್ಲಷ್ಟೆ ಜನವಾಸ ಇದ್ದಾರೆ. ಉಳಿದವು ಖಾಲಿ ಬಿದ್ದಿವೆ. ಯಾಕೆ? ಯಾಕೆಂದರೆ ಕುಡಿಯುವ ನೀರಿಲ್ಲದೆ ಜನ ಅಲ್ಲಿ ಬದುಕುವುದು ಹೇಗೆ. ವ್ಯವಸ್ಥೆ ಇಲ್ಲ. ಎಷ್ಟೋ ಕಡೆ. ಒಳಚರಂಡಿ. ರಸ್ತೆ, ವಿದ್ಯುತ್, ಮುಂತಾದ ಮೂಲಭೂತ ಅಗತ್ಯಗಳ ಕೊರತೆ ಕಾಡುತ್ತಿರುವುದೂ ಇದೆ.

ಜಾತಿವಾದ: ಈ ನಡುವೆ ಮನೆ ಹಂಚಿಕೆಯಲ್ಲಿ ಶಾಸಕರು ಮಧ್ಯ ಪ್ರವೇಶಿಸಿ ಹಿಂದೆ ಊರಿನಲ್ಲಿ ಇದ್ದಂತೆ ಜಾತಿವಾರು ಓಣಿಗಳ ಪ್ರತಿರೂಪದಂತೆ ಹೊಸ ಮನೆಗಳನ್ನು ವಿಭಾಗಿಸಲು ತೀರ್ಮಾನಿಸಿ ಮೇಲ್ಜಾತಿಯ ಜನರ ಒತ್ತಡಕ್ಕೆ ಮಣೆ ಹಾಕಿದ್ದಾರೆಂಬ ವರದಿಗಳು ಬರುತ್ತಿವೆ.

ಜ: ಇತರೆ ರಾಜ್ಯಗಳಲ್ಲಿ ಯಾವ ರೀತಿಯಲ್ಲಿ ರೈತರಿಗೆ ನೆರವಾಗುತ್ತಿವೆ?


ಮಾ: ಬೇರೆಗಳಲ್ಲಿ ಉತ್ತಮವಾದ ರೀತಿಯಲ್ಲಿ ರೈತನಿಗೆ ನೆರವು ನೀಡುತ್ತಿದ್ದಾರೆ. ಅವರಿಗೆ ಅರ್ಥವಾಗಿದೆ, ರೈತನಿಲ್ಲ ಎಂದರೆ ದೇಶ ಇಲ್ಲ ಎಂಬುದು ಇವರಲ್ಲಿ ಪ್ರಮುಖವಾಗಿ ನಮ್ಮ ನೆರೆಯ ರಾಜ್ಯ ಕೇರಳ ಇಲ್ಲಿ ನಮ್ಮ ಎಡಪಕ್ಷಗಳು ಏನು ಆಡಳಿತ ಮಾಡಿವೆ. ರೈತರ ಜನಜೀವನ ವನ್ನು ಉತ್ತಮ ಮಟ್ಟಕ್ಕೆ ಕೊಂಡ್ಯೊಯ್ಯಲು ಸಾಧ್ಯವಾಗಿದೆ. ಮೂಲಭೂತವಾಗಿ ರೈತರಿಗೆ ತಗಲುವ ಉತ್ಪಾದನಾ ವೆಚ್ಚ ನಿರ್ವಹಣೆಗೆ ಹಲವು ರೀತಿಯ ಸಬ್ಸಿಡಿ ನೀಡಿರುವುದು. ಶೈಕ್ಷಣಿಕವಾಗಿ, ಆರೋಗ್ಯಕರವಾಗಿ ಹಾಗೂ ಉಪಕಸುಬುಗಳ ಅಭಿವೃದ್ಧಿ ಕೃಷೇತರ ಚಟುವಟಿಕೆಗಳಿಂದ ಹೈನುಗಾರಿಕೆಗಳಿಗೆ ಹೆಚ್ಚಿನ ರೀತಿಯಲ್ಲಿ ಸಾಲಸೌಲಭ್ಯ, ಹಿಂಸಾಚಾರಕ್ಕೆ ಅಲ್ಲಿನ ಸರ್ಕಾರಗಳ ನೆರವಾಗಿವೆ ಹಾಗೂ ಬೆಂಬಲ ಬೆಲೆಯನ್ನು ನಮ್ಮ ರಾಜ್ಯಕ್ಕೆ ಹೋಲಿಸಿ ಕೊಂಡಾಗ ಅಲ್ಲಿ ಜಾಸ್ತಿ ಪ್ರಮಾಣದಲ್ಲಿ ಘೋಷಣೆ ಮಾಡಿದ್ದಾರೆ. ಅಂದ್ರೆ ತಮಿಳುನಾಡು, ಮುಂತಾದ ರಾಜ್ಯಗಳಲ್ಲಿ ರೈತರ ಸಂಕಷ್ಟಗಳು ಸುಧಾರಿಸಿವೆ ಎಂದು ಹೇಳಬಹುದು.ಇದರಲ್ಲಿ ಎಡಪಕ್ಷ ಆಡಳಿತ ಹೊಂದಿರುವ ಕೇರಳ ಸರ್ಕಾರ ಸಮಸ್ಯೆಗಳ ಬಗೆಹರಿಸುವಲ್ಲ ಮುಂಚೂಣಿ ಯಲ್ಲಿರುವುದು ಸ್ಮರಣೀಯ.

ಶರತ್‌ಚಂದ್ರ



ಗ್ರೀಸಿನಲ್ಲಿ ತೀವ್ರ ರಾಜಕೀಯ ಬಿಕ್ಕಟ್ಟು

ಗ್ರೀಸಿನಲ್ಲಿ ಸಾರ್ವಜನಿಕ ವೆಚ್ಚದಲ್ಲಿ ತೀವ್ರ ಕಡಿತ ಮಾಡಿದ "ಮಿತವ್ಯಯ" ಕಾರ್ಯಕ್ರಮ ರಾಜಕೀಯ ಬಿಕ್ಕಟ್ಟು ಉಂಟು ಮಾಡಿದೆ. ಪಾರ್ಲಿಮೆಂಟು 400 ಕೋಟಿ ಡಾಲರುಗಳ ಹೊಸ "ಮಿತವ್ಯಯ" ಕಾರ್ಯಕ್ರಮದ ಸರ್ಕಾರದ ಪ್ರಸ್ತಾವಕ್ಕೆ ಮಂಜೂರು ನೀಡಲು ಚರ್ಚೆ ನಡೆಸುತ್ತಿದ್ದು, ಇದಕ್ಕೆ ಭಾರೀ ಪ್ರತಿರೋಧ ವ್ಯಕ್ತವಾಗಿದೆ. ರಾಜಧಾನಿ ಅಥೆನ್ಸ್ ಮತ್ತು ಇತರ ಪಟ್ಟಣಗಳಲ್ಲಿ ಪ್ರಮುಖ ಚೌಕ ಅಥವಾ ವೃತ್ತಗಳನ್ನು ದೊಡ್ಡ ಸಂಖ್ಯೆಯಲ್ಲಿ ಪ್ರತಿಭಟನಾಕಾರರು ಆಕ್ರಮಿಸುವ ಕೈರೋದ "ತಾಹ್ರಿರ್ ಚೌಕ" ಶೈಲಿಯ ಪ್ರತಿಭಟನೆ ವ್ಯಾಪಕವಾಗಿ ಕಂಡು ಬಂದಿದೆ. ಲಕ್ಷಾಂತರ ಜನ



ಇದರಲ್ಲಿ ಸ್ವಯಂಸ್ಫೂರ್ತಿಯಿಂದ ಭಾಗವಹಿಸಿ ಇದಕ್ಕೆ ದೊಡ್ಡ ಸಾಮೂಹಿಕ ಚಳುವಳಿ ಮತ್ತು ದಂಗೆಯ ರೂಪ ಬಂದಿದೆ. ಇದಕ್ಕೆ "ಕುಪಿತರ" ಚಳುವಳಿ ಎಂಬ ಹೆಸರು ಕೊಡಲಾಗಿದೆ.

ಇದಲ್ಲದೆ ಹಲವು ಸಾರ್ವಜನಿಕ ಮತ್ತು ಖಾಸಗಿ ಕ್ಷೇತ್ರದ ಕಾರ್ಮಿಕರ ಮುಷ್ಕರಗಳು ನಡೆದಿವೆ. ಜೂನ್ 15 ರಂದು ಸರ್ಕಾರ ಮಿತವ್ಯದ ಪ್ರಸ್ತಾವ ಹಿಂತೆಗೆದುಕೊಳ್ಳಬೇಕು ಅಥವಾ ರಾಜೀನಾಮೆ ಕೊಡಬೇಕು ಎಂಬ ಒತ್ತಾಯದೊಂದಿಗೆ ಸಾರ್ವತ್ರಿಕ ಮುಷ್ಕರ ಸಹ ನಡೆದಿದೆ. ಕಾರ್ಮಿಕರು ಸರ್ಕಾರದ ವೇತನ-ಸವಲತ್ತುಗಳ, ಕಲ್ಯಾಣ ಯೋಜನೆಗಳಲ್ಲಿ ಕಡಿತ ಮಾಡುವ ಮಿತವ್ಯಯದ ಕಾರ್ಯಕ್ರಮದ ವಿರುದ್ಧ ಪ್ರತಿಭಟನಾ ಮುಷ್ಕರಗಳನ್ನು ಮಾಡುತ್ತಲೇ ಬಂದಿದೆ. ಇದು ಕಳೆದ ಒಂದು ವರ್ಷದಲ್ಲಿ 13ನೇ ಸಾರ್ವತ್ರಿಕ ಮುಷ್ಕರ. ಇದಕ್ಕೂ ಬಗ್ಗದಾಗ ಮಿತವ್ಯಯದ ಬಗ್ಗೆ ಚರ್ಚೆ ನಡೆಸುತ್ತಿರುವ ಮಾನವ ಸರಪಣಿ ಕಟ್ಟಿ ಪಾರ್ಲಿಮೆಂಟು ಸುತ್ತುವರೆಯಲಾಯಿತು. ಪಾರ್ಲಿಮೆಂಟಿಗೆ ಮಿಲಿಟರಿ ಪೋಲೀಸರ ಸರ್ಪಕಾವಲಿದ್ದರೂ, ಅಲ್ಲಿಗೆ ಬರುವ ದಾರಿಯಲ್ಲೆಲ್ಲ ತಡೆಗಳನ್ನು ಹಾಕಿ ಬಂಧಿಸಿದರೂ, 20 ಸಾವಿರಕ್ಕೂ ಹೆಚ್ಚು ಜನ ಅದನ್ನು ಸುತ್ತುವರೆದಿದ್ದರು.

ಈ ಪ್ರತಿರೋಧ ಪ್ರತಿಭಟನೆಗಳೆಲ್ಲ ಪಾರ್ಲಿಮೆಂಟು ಮತ್ತು ಸರ್ಕಾರದ ಮೇಲೂ ಪರಿಣಾಮ ಬೀರದೆ ಹೋಗಲಿಲ್ಲ. ಸಾರ್ವಜನಿಕ ಪ್ರತಿಭಟನೆಯ ತೀವ್ರತೆ ನೋಡಿ ಆಳುವ ಪಕ್ಷದ ಸದಸ್ಯರೇ "ಮಿತವ್ಯಯ"ದ ಪ್ರಸ್ತಾವದ ವಿರುದ್ಧ ಮತ ನೀಡುವ ನಿರೀಕ್ಷೆ ಇದೆ. ಈ ಪರಿಸ್ಥಿತಿ ಗಮನಿಸಿ ವಿರೋಧ ಪಕ್ಷಗಳು ಅವಿಶ್ವಾಸ ನಿರ್ಣಯ ಮಂಡಿಸಿದವು. ಸರ್ಕಾರ ಕೇವಲ 3 ಮತಗಳ ಅಂತರದಲ್ಲಿ ವಿಶ್ವಾಸಮತ ಗಳಿಸಿತು. ಈ ನಡುವೆ "ಮಿತವ್ಯಯ"ದ ಪ್ರಸ್ತಾವ ಹೇಗಾದರೂ ಪಾರ್ಲಿಮೆಂಟಿನಲ್ಲಿ ಮಂಜೂರು ಮಾಡಿಸಬೇಕು ಎಂಬ ಐ.ಎಂ.ಎಫ್., ಯುರೋಪಿಯನ್ ಕಮಿಶನ್ ಗಳ ಒತ್ತಡದಿಂದ, ಆಳುವ ಪಕ್ಷ ಪ್ರಮುಖ (ಬಲಪಂಥೀಯ) ವಿರೋಧ ಪಕ್ಷದೊಡನೆ ರಾಷ್ಟ್ರೀಯ ಸರ್ಕಾರ ರಚಿಸುವ ಗುಪ್ತ ಮಾತುಕತೆ ಆರಂಭಿಸಿತು. ಅದನ್ನು ಪ್ರಮುಖ ವಿರೋಧ ಪಕ್ಷ ರಟ್ಟು ಮಾಡಿದಾಗ ಅದನ್ನು ಕೈಬಿಡಲಾಗಿದೆ. ಈಗ ಪ್ರಧಾನಿ ಮಂತ್ರಿಮಂಡಲ ಪುನರ್ರಚನೆ ಮಾಡಿ ರಾಜಕೀಯ ಬಿಕ್ಕಟ್ಟು ಪರಿಹರಿಸುವ ಪ್ರಯತ್ನ ನಡೆಸಿದ್ದಾರೆ. ಆದರೆ "ಕುಪಿತ" ಜನ ಮತ್ತು ಸಂಘಟಿತ ಕಾರ್ಮಿಕರ ಬಲ ನೋಡಿದರೆ ಅದು ಕಷ್ಟವಾದೀತು.

ಜನರ ಕೋಪಕ್ಕೆ ಕಾರಣ ಸ್ಪಷ್ಟವಾಗಿದ್ದರೂ, ಐ.ಎಂ.ಎಫ್., ಯುರೋಪಿಯನ್ ಕಮಿಶನ್ ಗಳ ಒತ್ತಡದಲ್ಲಿರುವ ಸರ್ಕಾರ ಅದಕ್ಕೆ ಸ್ಪಂದಿಸುವ ಸ್ಥಿತಿಯಲ್ಲಿ ಇಲ್ಲ. ಈಗಾಗಲೇ ಜಾರಿಯಲ್ಲಿರುವ ಕಡಿತಗಳಿಂದ ಗ್ರೀಸಿನ ಜಿಡಿಪಿ ಶೇ. 5.5. ವಾರ್ಷಿಕವಾಗಿ ಕಡಿಮೆ ಆಗಿದೆ. ಕೈಗಾರಿಕಾ ಉತ್ಪಾದನೆ ಶೇ.11 ರಷ್ಟು ಕುಸಿದಿದೆ. 2005 ರ ಮಟ್ಟದಿಂದ ಕೈಗಾರಿಕಾ ಉತ್ಪಾದನೆ ಶೇ.25 ರಷ್ಟು ಕುಸಿದಿದೆ. ಜನರ ಕೊಳ್ಳುವ ಶಕ್ತಿ ಕುಸಿದಿರುವುದರಿಂದ ಒಟ್ಟು ಬಳಕೆ ವೆಚ್ಚ ಶೇ. 7 ರಷ್ಟು ಕಡಿಮೆ ಆಗಿದೆ. ನಿರುದ್ಯೋಗ ಶೇ. 16.2 ರ ರೆಕಾರ್ಡ್ ಮಟ್ಟಕ್ಕೇರಿದೆ. ಇದು ಕಳೆದ ವರ್ಷ ಐ.ಎಂ.ಎಫ್., ಯುರೋಪಿಯನ್ ಕಮಿಶನ್ ಗಳು ಕೊಟ್ಟ 158 ಶತಕೋಟಿ ಡಾಲರು ಬೇಲೌಟ್ (ಜಾಮೀನು) ನ ಪರಿಣಾಮ ಆಗಿತ್ತು. ಗ್ರೀಸ್ ಸರ್ಕಾರ ಸಾಲ ತೀರಿಸಲಾಗದೆ ದಿವಾಳಿ ಆಗುವ ಸ್ಥಿತಿಯಲ್ಲಿ ಇತ್ತು. ಇದಕ್ಕೆ ಪ್ರಶ್ನಾರ್ಹ ಖಾಸಗಿ ಹಣಕಾಸು ಸಂಸ್ಥೆಗಳಲ್ಲಿ ಹಣ ಹೂಡಿದ್ದು ಮತ್ತು ಅವು ಕಳೆದ ಹಣಕಾಸು ಬಿಕ್ಕಟ್ಟಿನಲ್ಲಿ ದಿವಾಳಿ ಆಗಿದ್ದು ಮುಖ್ಯ ಕಾರಣ. ಆದರೆ ಈ ಹಣ ಸಾರ್ವಜನಿಕ ಅಥವಾ ಕಲ್ಯಾಣ ಯೋಜನೆಗಳಿಗೆ ವೆಚ್ಚವಾಗಿರಲಿಲ್ಲ. ಕಳೆದ ಒಂದು ವರ್ಷದಲ್ಲಿ ಸರ್ಕಾರದ ಮಿತವ್ಯಯದ ನೀತಿಯಿಂದಾಗಿಯೇ ಅದರ ಆದಾಯ ಕುಸಿದು ಪರಿಸ್ಥಿತಿ ಇನ್ನಷ್ಟು ಹದಗೆಟ್ಟಿದೆ. ದೇಶ ದಿವಾಳಿ ಆಗದೆ ಇರಬೇಕಾದರೆ ಇನ್ನೊಂದು ಬೇಲೌಟ್ (ಜಾಮೀನು) ಅಗತ್ಯವಾಗಿದೆ. ಇದಕ್ಕೆ ಶರತ್ತು ಆಗಿ ಇನ್ನಷ್ಟು ಸಾರ್ವಜನಿಕ ವೆಚ್ಚ, ಉದ್ಯೋಗ ಮತ್ತು ಕಲ್ಯಾಣ ಯೋಜನೆಯಲ್ಲಿ ಕಡಿತ ಮಾಡಲು ಅವು ಒತ್ತಡ ಹೇರಿವೆ. ಇದಕ್ಕೆ ಇಂತಹ ತೀವ್ರ ಪ್ರತಿರೋಧ ಬಂದಿರುವುದು.

ಈ ತೀವ್ರ ವರ್ಗ ಸಂಘರ್ಷ ಯಾವ ರೀತಿಯಲ್ಲಿ ಪರಿಹಾರವಾದೀತು ಎಂದು ಇಡೀ ಯುರೋಪು ಕಾದು ನೋಡುತ್ತಿದೆ. ಯಾಕೆಂದರೆ ಸರ್ಕಾರದ ಪ್ರಸ್ತಾವ ಮಂಜೂರಾಗದಿದ್ದರೆ ಸಾಲ ಪಾವತಿ ನಿಲುಗಡೆ ಘೋಷಿಸಬೇಕಾದೀತು. 1990 ರ ದಶಕದಲ್ಲಿ ಅರ್ಜೆಂಟಿನಾ ಇಂತಹುದೇ ಸಂದರ್ಭದಲ್ಲಿ ಇಂತಹ ಘೋಷಣೆ ಮಾಡಿತ್ತು. ಅಲ್ಲದೆ ಗ್ರೀಸಿನ ಸಾಲ ಹಲವು ಖಾಸಗಿ ಸಂಸ್ಥೆಗಳು, ಬ್ಯಾಂಕುಗಳ ಜತೆ ಇದ್ದು, ಬೇಲೌಟ್ (ಜಾಮೀನು) ಮೂಲಕ ಈ ಸಾಲವನ್ನು ಜರ್ಮನಿ, ಫಿನ್ ಲ್ಯಾಂಡ್ ಮುಂತಾದ ಯುರೋಪಿನ ಕೆಲವು ದೇಶಗಳ ಸರ್ಕಾರಗಳು ವಹಿಸಿಕೊಂಡಿದ್ದವು. ಇದು ಯುರೋಪಿಯನ್ ಬ್ಯಾಂಕುಗಳು ತಂದಿಟ್ಟ ಹಣಕಾಸು ಬಿಕ್ಕಟ್ಟನ್ನು ಗ್ರೀಸಿನ ಜನತೆ ಮೇಲೆ ಹೊರಿಸುವ ಹುನ್ನಾರವಾಗಿತ್ತು. ಆದರೆ ಗ್ರೀಸಿನ ಜನತೆ ಇದನ್ನು ಹೊರಲು ನಿರಾಕರಿಸಿದರೆ, ಈ ಬಿಕ್ಕಟ್ಟು ಯುರೋಪಿನ ಹಲವು ದೇಶಗಳಿಗೆ ವ್ಯಾಪಿಸಬಹುದು. ಸ್ಪೈನ್, ಪೋರ್ಚುಗಲ್, ಐರ್ಲೆಂಡ್ ಗಳು ಸಹ ಸುಮಾರು ಇದೇ ಸ್ಥಿತಿಯಲ್ಲಿವೆ. ಯುರೋ ಸಮಾನ ನಾಣ್ಯ ಪದ್ಧತಿಯಿಂದ ಹೊರ ಬಂದು, ಗ್ರೀಸ್ ತನ್ನ ನಾಣ್ಯದ ಅಪಮೌಲ್ಯ ಮಾಡುವುದು ಇನ್ನೊಂದು ಪರಿಹಾರ. ಹಾಗೇನಾದರೂ ಆದರೆ ಅದೂ ಇತರ ದೇಶಗಳಿಗೆ ಹರಡಿ, ಯುರೋಪಿಯನ್ ಕೂಟ ಆರ್ಥಿಕವಾಗಿ ಮುರಿದು ಬೀಳುವ ಸಾಧ್ಯತೆ ಇದೆ. ●

ಡೊನೇಷನ್ ಹಾವಳಿ ವಿರುದ್ಧ ನಾಗರೀಕ ಹೋರಾಟ ಸಮಿತಿ ವತಿಯಿಂದ ಬೆಂಗಳೂರಿನ ಕಮಲಾ ನಗರದ ವಾಣಿ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್ ಮುಂಭಾಗದಲ್ಲಿ ಪ್ರತಿಭಟನೆ



ಜನಶಕ್ತಿ
ಕನ್ನಡ ವಾರಪತ್ರಿಕೆ

ಕಡಲ ತಡಿ......

ಪುಟ 6 ರಿಂದ

ಹೋರಾಟ ಸಮಿತಿಯಿಂದಲೇ ಬೀದಿಬದಿ ವ್ಯಾಪಾರ ನಡೆಸುವ ಮೂಲಕ ಪ್ರತಿಭಟನೆ ನಡೆಸಲಾಗುವುದೆಂದೂ ಎಚ್ಚರಿಕೆ ನೀಡಿದರು.

★

ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯಿಂದ ಪೆಟ್ರೋಲಿಯಂ ದರ ಏರಿಕೆ ವಿರುದ್ಧ ಪ್ರತಿಭಟನೆ

ಮಂಗಳೂರು ಜಿಲ್ಲಾಧಿಕಾರಿಗಳ ಕಛೇರಿ ಎದುರುಗಡೆ ದ.ಕ. ಜಿಲ್ಲೆಯ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯಿಂದ ಅಖಿಲ ಭಾರತ ಜಂಟಿ ಸಮಿತಿಯ ಕರೆಯ ಮೇರೆಗೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಏರಿಕೆಯನ್ನು ಕೇಂದ್ರ ಸರ್ಕಾರವು ಮಾಡಿರುವುದರ ವಿರುದ್ಧ ಜೂನ್ 23ರ ಬೆಳಿಗ್ಗೆ ಪ್ರತಿಭಟನಾ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಪ್ರತಿಭಟನಾ ಪ್ರದರ್ಶನವನ್ನು ಉದ್ದೇಶಿಸಿ ದ.ಕ.ಜಿಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿಯ ಸಂಚಾಲಕರೂ ಸಿಐಟಿಯು ರಾಜ್ಯ ಉಪಾಧ್ಯಕ್ಷರೂ ಆದ. ಬಿ.ಮಾಧವ, ಬಿ.ಎಂ.ಎಸ್. ದ.ಕ.ಜಿಲ್ಲಾಧ್ಯಕ್ಷರಾದ ವಿಶ್ವನಾಥಶೆಟ್ಟಿ, ಎಐಟಿಯುಸಿ ದ.ಕ. ಜಿಲ್ಲಾ ಜಂಟಿ ಕಾರ್ಯದರ್ಶಿ ಸೀತಾರಾಮ ಬೇರಿಂಜ ಹಾಗೂ ಎಚ್.ಎಂ.ಎಸ್. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ರಫೀಕ್ ಮಾತನಾಡಿದರು.

ಕಾರ್ಮಿಕ ಸಂಘಟನೆಗಳ ಜಂಟಿ ಪ್ರತಿಭಟನೆಗಳಲ್ಲಿ ಇದೇ ಮೊದಲ ಬಾರಿ ದೊಡ್ಡ ಸಂಖ್ಯೆಯಲ್ಲಿ ಕಾರ್ಮಿಕರು ಭಾಗವಹಿಸಿದ್ದರು. ಸಿಐಟಿಯು ಸಂಘಟನೆಗೆ ಸೇರಿದ ಕಾರ್ಮಿಕ ಸಂಘಟನೆಗಳ ಕಾರ್ಮಿಕರು ಬೆಳ್ತಂಗಡಿ, ಮೂಡಬಿದ್ರೆ, ಗುರುಪುರ, ಬಂಟ್ವಾಳ, ಉಳ್ಳಾಲ ಹಾಗೂ ಮಂಗಳೂರು ನಗರದ ವಿವಿಧ ಭಾಗಗಳಿಂದ ಆಗಮಿಸಿ ಭಾಗವಹಿಸಿದ್ದರು. ಸಿಐಟಿಯುನ ವಸಂತ ಆಚಾರಿ ಸ್ವಾಗತಿಸಿದರು; ಎಐಟಿಯುಸಿ ಶೇಖರ ಅವರು ಧನ್ಯವಾದ ಅರ್ಪಿಸಿದರು. ●

ಬೆಳ್ತಂಗಡಿಯಲ್ಲಿ ಎಸ್‌ಎಫ್‌ಐ ಪ್ರತಿಭಟನೆ

ಸರ್ಕಾರಿ ಪದವಿ ಕಾಲೇಜುಗಳಲ್ಲಿಯೂ ಅರ್ಹ ಬಡ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವುದಾಗಿ ಸರ್ಕಾರ ಘೋಷಿಸಿದೆ. ಶಾಸಕರೇ ಈ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿ ಸಮಿತಿಗಳ ಅಧ್ಯಕ್ಷರಾಗಿದ್ದು, ಕಾಲೇಜುಗಳಲ್ಲಿ ಸೌಲಭ್ಯಗಳ ಕೊರತೆ ಹಾಗೂ ಉಪನ್ಯಾಸಕರ ಕೊರತೆಯನ್ನು ಇಲ್ಲವಾಗಿಸಲು ಜವಾಬ್ದಾರಿಯುತ ವ್ಯಕ್ತಿಯಾಗಿದ್ದಾರೆ. ಈ ಸಂಸ್ಥೆಗಳ ಕೊರತೆಯನ್ನು ಸರ್ಕಾರದ ಅನುದಾನದಿಂದಲೇ ನೀಗಿಸುವ ಪ್ರಯತ್ನವನ್ನು ಶಾಸಕರು ಹಾಗೂ ಕಾಲೇಜು ಅಭಿವೃದ್ಧಿ ಮಾಡಬೇಕಾಗಿದ್ದು, ಇದಕ್ಕೆ ವ್ಯತಿರಿಕ್ತವಾಗಿ ಬಡ ವಿದ್ಯಾರ್ಥಿಗಳಿಂದಲೇ ಅತಿಯಾದ ಶುಲ್ಕ ಹಾಗೂ ಡೊನೇಷನ್ ವಸೂಲಿ ಮಾಡಲಾಗುತ್ತಿದೆ.

ಬೆಳ್ತಂಗಡಿ ತಾಲ್ಲೂಕಿನ ಸರ್ಕಾರಿ ಪದವಿ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ನೀತಿನಿಯಮಗಳನ್ನು ಉಲ್ಲಂಘಿಸಿ ವಿದ್ಯಾರ್ಥಿಗಳಿಂದಲೇ ಡೊನೇಷನ್ ವಸೂಲಿ ಮಾಡುತ್ತಿರುವುದನ್ನು ವಿರೋಧಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ ಎಸ್‌ಎಫ್‌ಐ ನೇತೃತ್ವದಲ್ಲಿ ಜೂನ್ ದಿನಾಂಕ:18ರಂದು ಪ್ರತಿಭಟನೆ ನಡೆಸಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಎಸ್‌ಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಸುಜಿತ್ ಉಜಿರೆ ಮತ್ತು ತಾಲ್ಲೂಕು ಡಿವೈಎಫ್‌ಐ ಮುಖಂಡ ಶೇಖರ ಲಾಯಿಲ ಮಾತನಾಡಿದರು. ಪ್ರತಿಭಟನೆಯ ಬಳಿಕ ಹನ್ನೊಂದು ಬೇಡಿಕೆಗಳಿರುವ ಮನವಿಯನ್ನು ತಹಶೀಲ್ದಾರ್‌ರಿಗೆ ಸಲ್ಲಿಸಲಾಯಿತು.

ಪ್ರತಿಭಟನೆಯ ನೇತೃತ್ವವನ್ನು ಎಸ್‌ಎಫ್‌ಐ ತಾಲ್ಲೂಕು ಸಮಿತಿಯ ಸುದೀಪ್, ಅಜಯ್, ಚಂದ್ರಾವತಿ, ಸುಕನ್ಯಾ, ಶ್ವೇತಾ ಮತ್ತಿತರರು ವಹಿಸಿದ್ದರು. ●

ಸಂವಿಧಾನ ಬುಡಮೇಲು ಮಾಡುವ ಹುನ್ನಾರ

ಪುಟ 7 ರಿಂದ

ಹೊಣೆ ತಪ್ಪಿಸಿಕೊಳ್ಳಲು?

ಸಂಸತ್ತಿನ ಮುಂಗಾರು ಅಧಿವೇಶನವನ್ನು ವಿಳಂಬಗೊಳಿಸಲು ನಿರ್ಧರಿಸುವ ಮೂಲಕ ಯುಪಿಎ–2 ಸರಕಾರ ಇಂತಹುದೇ ಜನಗಳ ಪ್ರಜಾಪ್ರಭುತ್ವ-ವಿರೋಧಿ ನಿಲುವುಗಳಿಗೆ ಗ್ರಾಸ ಒದಗಿಸಿ ಕೊಟ್ಟಿದೆ. ಬಹುಶಃ ಅದು ಶಾಸಕಾಂಗಕ್ಕೆ ಜವಾಬುದಾರನಾಗಿರಬೇಕಾದ ತನ್ನ ಹಣೆ ಬರೆಹದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದೆ. ಸ್ವತಃ ಇದು ಕೂಡ ನಮ್ಮ ಸಂವಿಧಾನಿಕ ವಿಧಿ–ವಿಧಾನಗಳನ್ನು ಇನ್ನಷ್ಟು ಬುಡಮೇಲು ಮಾಡಲು ತನ್ನ ಕಾಣಿಕೆಯನ್ನು ನೀಡಬಹುದು.

ಸಂಸತ್ತು ವರ್ಷದಲ್ಲಿ ಕನಿಷ್ಟ ನೂರು ದಿನ ಸಭೆ ಸೇರಬೇಕು ಎಂದು ಎಡಪಕ್ಷಗಳು ಸದಾ ಆಗ್ರಹಿಸುತ್ತಾ ಬಂದಿವೆ. ಇತ್ತೀಚಿನ ದಶಕಗಳಲ್ಲಿ ಇದು ಎಂದೂ ಈಡೇರಿಲ್ಲ. ನಿಜಸಂಗತಿಯೆಂದರೆ ಎರಡು ವರ್ಷಗಳ ಹಿಂದೆ ಸಂಸತ್ತು ಒಂದು ವರ್ಷದಲ್ಲಿ ಕೇವಲ 46 ದಿನಗಳ ಕಲಾಪ ನಡೆಸಿತು. ಒಂದು ಶಾಸನವನ್ನು ಸಂಸತ್ತು ಮಾತ್ರವೇ ಮಾಡಬಲ್ಲುದು. ಆದರೆ ಇದಷ್ಟೇ ಸಂಸತ್ತಿನ ಕೆಲಸವಲ್ಲ. ಸರಕಾರ ಜವಾಬುದಾರಿಕೆ ವಹಿಸುವಂತೆ ಮಾಡುವುದು ಮತ್ತು ಸಾರ್ವಜನಿಕ ಮಹತ್ವದ ವಿಷಯಗಳತ್ತ ಸರಕಾರದ ಗಮನ ಸೆಳೆಯುವುದು ಕೂಡ ಅದರ ಕೆಲಸ. ಸಂಸತ್ತಿನ ಅವಧಿಯನ್ನು ಕಡಿತಗೊಳಿಸುವುದೆಂದರೆ, ಸರಕಾರ ತನ್ನ ಜವಾಬುದಾರಿಕೆಯಿಂದ ತಪ್ಪಿಸಿಕೊಳ್ಳುತ್ತದೆ. ಅತ್ತ ಜನತೆಯ ಮೇಲೆ ಹೊರೆ ಹೇರಿರುವಂತಹ ಬೆಲೆಯೇರಿಕೆಯಂತಹ ತುರ್ತಿನ ಪ್ರಶ್ನೆಗಳತ್ತ ಗಮನ ಕೊಡಲಾಗುವುದಿಲ್ಲ. ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಸಂಸತ್ತು ಕನಿಷ್ಠ ನೂರು ದಿನಗಳ ಕಾಲ ಸಭೆ ಸೇರಲೇಬೇಕೆಂದು, ಅಗತ್ಯವೆನಿಸಿದರೆ, ಒಂದು ಸಂವಿಧಾನ ತಿದ್ದುಪಡಿಯ ಮೂಲಕ, ವಿಧಿಸಬೇಕು.

ವೇಳಾಪಟ್ಟಿ ಅಗತ್ಯ

ಇದಲ್ಲದೆ, ಈ ಗುರಿ ಸಾಧನೆಯಾಗುವಂತೆ ಒಂದು ಸಂಸದೀಯ ವೇಳಾಪಟ್ಟಿ ಹೊಂದಿರುವುದು ಅಗತ್ಯವಾಗಿದೆ. ಇಂತಹ ವೇಳಾಪಟ್ಟಿ ಇತರ ಸಂವಿಧಾನಿಕ ಅಧಿಕಾರ ಸಂಸ್ಥೆಗಳಿಗೂ ಒಂದು ಆಕರ ಚೌಕಟ್ಟನ್ನು ಒದಗಿಸುತ್ತದೆ; ಉದಾಹರಣೆಗೆ ಚುನಾವಣಾ ಆಯೋಗಕ್ಕೆ ವಿವಿಧ ರಾಜ್ಯ ವಿಧಾನಸಭೆಗಳಿಗೆ ಚುನಾವಣೆಯ ದಿನಾಂಕಗಳನ್ನು ನಿರ್ಧರಿಸಲು ಇದು ನೆರವಾಗುತ್ತದೆ. ಇದರ ಮಹತ್ವವನ್ನು, ಕಳೆದ ನಾಲ್ಕು ವರ್ಷಗಳಲ್ಲಿ ಎರಡು ಬಾರಿ ಕೆಲವು ರಾಜ್ಯ ವಿಧಾನಸಭೆಗಳಿಗೆ ಚುನಾವಣೆಗಳಿಂದಾಗಿ ಬಜೆಟ್ ಚರ್ಚೆಗಳನ್ನು ಮೊಟಕುಗೊಳಿಸಬೇಕಾಗಿ ಬಂದಿತು ಎಂಬುದರಿಂದ ಕಾಣಬಹುದು. ಬಜೆಟ್ ಚರ್ಚೆಗಳನ್ನು ಈ ರೀತಿ ಮೊಟಕು ಮಾಡುವುದು ಪ್ರಜಾಪ್ರಭುತ್ವದಲ್ಲಿ ಆರೋಗ್ಯಕರ ಆಚರಣೆಯಲ್ಲ.

ಇಂತಹ ಒಂದು ವೇಳಾಪಟ್ಟಿ ಪ್ರಧಾನ ಮಂತ್ರಿಗಳು ಸಂಸತ್ತು ಅಧಿವೇಶನದಲ್ಲಿರುವಾಗ ವಿದೇಶ ಪ್ರಯಾಣ ನಡೆಸುವುವಂತಹ ಸನ್ನಿವೇಶಗಳನ್ನು ಕೂಡ ತಪ್ಪಿಸುತ್ತದೆ. ಈಗ ಇದಕ್ಕೆ ಕೊಡುವ ವಿವರಣೆಯೆಂದರೆ, ಭಾರತ ಪರಸ್ಪರ ಒಪ್ಪಿಗೆಯ ದಿನಾಂಕಗಳನ್ನು ನಿರ್ಧರಿಸುವಲ್ಲಿ ಬೇರೆ ದೇಶಗಳ ವೇಳಾಪಟ್ಟಿಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಎಂಬುದು. ಆದರೆ ಹೀಗಾಗುವುದು ನಮ್ಮದೇ ಸ್ವಂತ ವೇಳಾಪಟ್ಟಿಯೊಂದು ಇಲ್ಲದಿರುವುದರಿಂದ. ಈ ದೌರ್ಬಲ್ಯವನ್ನು ತಕ್ಷಣವೇ ನೀಗಿಸಬೇಕು ಮತ್ತು ಒಂದು ವೇಳಾಪಟ್ಟಿಯನ್ನು ನಿರ್ಧರಿಸಬೇಕು. ಇದರಿಂದ ಸಂಸತ್ತಿನಲ್ಲಿ ಪ್ರಧಾನ ಮಂತ್ರಿಗಳ ಹಾಜರಿಯಾದರೂ, ಆಮೂಲಕ ಶಾಸಕಾಂಗಕ್ಕೆ ಸರಕಾರದ ಜವಾಬುದಾರಿಕೆ ಸಾಧ್ಯವಾಗುತ್ತದೆ.

ಲೋಕಪಾಲ ಶಾಸನದ ಬಗ್ಗೆ ಸರಕಾರದ ಮಾತುಕತೆಗಳ ಫಲ ಏನೇ ಇರಬಹುದು, ಅಂತಿಮವಾಗಿ ಒಂದು ಕಾನೂನನ್ನು ಸಂಸತ್ತು ಮಾತ್ರವೇ ರಚಿಸಬಲ್ಲುದು. ಸಂಸತ್ತಿನ ಅಧಿವೇಶನವನ್ನು ಕರೆಯುವುದನ್ನು ವಿಳಂಬಗೊಳಿಸುವ ಮೂಲಕ ಸರಕಾರ ಸಮಸ್ಯೆಯನ್ನು ದೀರ್ಘಕ್ಕೆ ಎಳೆಯುತ್ತದೆ. ಆಮೂಲಕ ಅದರ ಪರಿಹಾರವನ್ನು ತಡೆಯುತ್ತದಷ್ಟೇ. ಇದು ಅಕ್ಷಮ್ಯ.

ಯುಪಿಎ ದರ್ಬಾರ್ .....

ಪುಟ 2 ರಿಂದ

ಕೂತು ವಿರೋಧಿಸುತ್ತಿದ್ದಾಗ ಈಗ ಪಶ್ಚಿಮ ಬಂಗಾಲದಲ್ಲಿ ಅಧಿಕಾರ ವಹಿಸಿಕೊಂಡಿರುವ ತೃಣಮೂಲ–ಕಾಂಗ್ರೆಸ್ ಸರಕಾರದ ಪೋಲೀಸರು ಸಿಕ್ಕಾಪಟ್ಟೆ ಲಾಠೀಪ್ರಹಾರ ನಡೆಸಿದ್ದಾರೆ. ಇದರಲ್ಲಿ ಸುಮಾರು 30 ಗ್ರಾಮಸ್ಥರು ಮತ್ತು ಕಲ್ಲಿದ್ದಲು ಕಾರ್ಮಿಕರ ಅಖಿಲಭಾರತ ಮುಖಂಡ ಹಾಗೂ ಸ್ಥಳೀಯ ಶಾಸಕ ಗೌರಾಂಗ ಚಟರ್ಜಿಯವರು ತೀವ್ರವಾಗಿ ಗಾಯಗೊಂಡಿದ್ದಾರೆ.

ಇಸಿಎಲ್ ಈ ಪ್ರದೇಶವನ್ನು ಖಾಸಗಿ ಗಣಿ ಮಾಲಿಕರಿಗೆ ವಹಿಸಿ ಕೊಡುವುದಕ್ಕಾಗಿ ಈ ಒಕ್ಕಲೆಬ್ಬಿಸುವ ನೋಟೀಸು ಕೊಟ್ಟಿದೆ. ಆದರೆ ಆ ನೋಟೀಸಿನಲ್ಲಿ ಈ ಪ್ರದೇಶದ 11 ಹಳ್ಳಿಗಳಲ್ಲಿ ವಾಸವಾಗಿರುವ ರೈತರು, ಬರ್ಗಾದಾರರು ಮತ್ತು ಕೃಷಿಕಾರ್ಮಿಕರಿಗೆ ಅಗತ್ಯ ಪರಿಹಾರ ಮತ್ತು ಮರುವಸತಿಯ ಪ್ರಸ್ತಾಪವೂ ಇಲ್ಲ. ಇದನ್ನು ವಿರೋಧಿಸಿ ಅಖಿಲ ಭಾರತ ಕಲ್ಲಿದ್ದಲು ಕಾರ್ಮಿಕರ ಒಕ್ಕೂಟಕ್ಕೆ ಸೇರಿದ ಭಾರತ ಕೋಲಿಯರಿ ಮಜ್ದೂರ್ ಸಭಾ ಕೂಡ ಈಗಾಗಲೇ ಪ್ರತಿಭಟನೆಯನ್ನೂ ಸಲ್ಲಿಸಿದೆ.

ಹಿಂದೆ ಇಂತಹ ಪ್ರಶ್ನೆಗಳು ಎದುರಾದಾಗ ಸರಕಾರೀ ಒಡೆತನದ ಕಲ್ಲಿದ್ದಲು ಕಂಪನಿಗಳು ಕಾರ್ಮಿಕ ಸಂಘಟನೆಗಳೊಂದಿಗೆ ಸಮಾಲೋಚನೆ ನಡೆಸಿ ಸಂಬಂಧಪಟ್ಟ ನಿವಾಸಿಗಳ ಬದುಕಿಗೆ ಬಾಧಕವಾಗದಂತೆ ಕ್ರಮಗಳನ್ನು ಕೈಗೊಳ್ಳಲಾಗುತ್ತಿತ್ತು. ಆದರೆ 1977ರ ನಂತರ ಮೊದಲ ಬಾರಿಗೆ ರಾಜ್ಯ ಸರಕಾರದ ಕಾರ್ಮಿಕ ನೀತಿ ಬದಲಾಗಿರುವ ಸೂಚನೆಯನ್ನು ಈಗ ಈ ಘಟನೆ ನೀಡಿದೆ. ಅಖಿಲ ಭಾರತ ಕಲ್ಲಿದ್ದಲು ಕಾರ್ಮಿಕರ ಒಕ್ಕೂಟ ಈ ಪೋಲೀಸ್ ಅತ್ಯಾಚಾರವನ್ನು ಪ್ರತಿಭಟಿಸಿ, ಕಲ್ಲಿದ್ದಲು ಗಣಿಗಳ ಖಾಸಗೀಕರಣ, ಹಾಗೂ ಭೂಮಿ ಕಳಕೊಳ್ಳುವವರಿಗೆ ಸೂಕ್ತ ಪರಿಹಾರವಿಲ್ಲದೆ ಸ್ವಾಧೀನಪಡಿಸಿಕೊಳ್ಳುವುದನ್ನು ವಿರೋಧಿಸಿ ಜೂನ್ 24 ರಂದು ಮುಷ್ಕರಕ್ಕೆ ಕರೆ ನೀಡಿದೆ.

★

JANASHAKTHI KANNADA VARA PATRIKE JULY 03, 2011 Price : Rs. 5/- RNI No. KARKAN /2006/17926 Posted on every Saturday Postal Reg. No. RNP KA BGS 2078 2010-12
Posted at MBC Bangalore GPO



ಮೊಬೈಲು ಫೋನುಗಳನ್ನು ಅಗತ್ಯಕ್ಕೆ ತಕ್ಕಂತೆ ಹಿತಮಿತವಾಗಿ ಬಳಸುವ ಬಗ್ಗೆ ಗಮನ ನೀಡುವುದು ಒಳ್ಳೆಯದು

ಮಿತಿಮೀರಿದ ಮೊಬೈಲ್ ಬಳಕೆಯಿಂದ ಮೆದುಳು ಕ್ಯಾನ್ಸರ್

ಮೊಬೈಲ್ ತಂತ್ರಜ್ಞಾನದಿಂದಾಗಿ ಇಡೀ ಜಗತ್ತೇ ಕಿರಿದಾಗಿ ವಿಶ್ವ ಗ್ರಾಮವಾಗುತ್ತಿದೆ ಅಂದುಕೊಳ್ಳುತ್ತಿರುವಷ್ಟರಲ್ಲಿ, ಮಿತಿ ಮೀರಿದ ಮೊಬೈಲ್ ಬಳಕೆಯಿಂದ ಮೆದುಳು ಕ್ಯಾನ್ಸರ್ ಬರುವ ಸಾಧ್ಯತೆ ಇದೆ ಎಂದು ವಿಶ್ವ ಆರೋಗ್ಯ ಸಂಸ್ಥೆಯು ಎಚ್ಚರಿಸಿರುವುದು ಆತಂಕಕ್ಕೆ ಕಾರಣವಾಗಿದೆ. ತಂತಿ-ರಹಿತ ಸಂವಹನ ಉಪಕರಣಗಳು (ವೈರ್‌ಲೆಸ್ ಉಪಕರಣಗಳು) ಹೊರಸೂಸುವಂತೆ ಮೊಬೈಲ್‌ನಿಂದ ಹೊರಸೂಸುವ ರೇಡಿಯೋ ತರಂಗಾಂತರ ವಿದ್ಯುದಾಯಸ್ಕಾಂತ ಕ್ಷೇತ್ರದಿಂದ ಮೆದುಳು ಕ್ಯಾನ್ಸರ್ ಉಂಟಾಗುವುದು ಒಳಗೊಂಡಂತೆ ಆರೋಗ್ಯದ ಮೇಲೆ ದುಷ್ಪರಿಣಾಮಗಳು ಉಂಟಾಗುತ್ತವೆ ಎಂದು ಈ ಸಂಸ್ಥೆಯ ಅಂತರಾಷ್ಟ್ರೀಯ ಕ್ಯಾನ್ಸರ್ ಸಂಶೋಧನಾ ಕೇಂದ್ರವು ತಿಳಿಸಿದೆ. ಈ ಸಂಸ್ಥೆಯು ಕ್ಯಾನ್ಸರ್ ಉಂಟು ಮಾಡುವ ಪ್ರಕರಣಗಳನ್ನು ವರ್ಗೀಕರಣ ಮಾಡಿದ್ದು ಇದರಲ್ಲಿ ಮನುಷ್ಯರ ಮೇಲೆ ಉಂಟುಮಾಡುವ ಮೊಬೈಲ್ ಬಳಕೆಯಿಂದ ಬರುವ ಸಾಧ್ಯತೆಯಿದೆ ಎಂದು ವರದಿ ಮಾಡಿದೆ.

ಮೊಬೈಲ್ ಪೋನುಗಳಿಂದ ವಿಕಿರಣ ಹೊರಸೂಸುವುದು:

ಕ್ಷ-ಕಿರಣಗಳು (ಎಕ್ಸ್-ರೇ) ಅಥವಾ ಗಾಮಾ ಕಿರಣಗಳಂತೆ ಮೊಬೈಲ್ ಪೋನುಗಳು ಶಕ್ತಿಶಾಲಿಯಾದ ವಿಕಿರಣಗಳನ್ನೇನೂ ಹೊರಸೂಸುವುದಿಲ್ಲ. ಕ್ಷ-ಕಿರಣಗಳು ಅಥವಾ ಗಾಮಾ ಕಿರಣಗಳನ್ನು ಜೀವಕೋಶಗಳ ಮೇಲೆ ಹಾಯಿಸಿದಾಗ ಅವು ಬಲು ಶಕ್ತಿಶಾಲಿಯಾಗಿದ್ದು, ಜೀವದ್ರವ್ಯ ಗಳಲ್ಲಿರುವ ಇಲೆಕ್ಟ್ರಾನುಗಳನ್ನು ಬೇರ್ಪಡಿಸುತ್ತವೆ. ಆಮೂಲಕ ಅವು ಜೀವಕೋಶದ ಜೀವ ಸೆಲೆಯಾದ ಡಿಆಕ್ಸಿರೈಬೋ ನ್ಯೂಕ್ಲಿಯಿಕ್ ಆಮ್ಲಗಳು ಮತ್ತು ಇತರೆ ಜೀವಕಣಗಳಿಗೆ ಹಾನಿಯುಂಟು ಮಾಡುತ್ತವೆ. ಮೊಬೈಲ್ ಪೋನುಗಳು ವಿದ್ಯುದಾವೇಶ-ಉಂಟುಮಾಡಲಾರದ ವಿಕಿರಣವನ್ನು ಹೊರಹೊಮ್ಮುವುದರಿಂದ ಅಂತಹ ದೊಡ್ಡ ಹಾನಿಯೇನೂ ಸಂಭವಿಸುವುದಿಲ್ಲ. ರಾಸಾಯನಿಕ ಸಂಯುಕ್ತವಸ್ತುಗಳನ್ನು ವಿಭಜಿಸಲು ಮತ್ತು ರಾಸಾಯನಿಕ ಪ್ರತಿಕ್ರಿಯೆಗಳನ್ನು ಉಂಟುಮಾಡಲು ಬೇಕಾಗುವ ಶಕ್ತಿಗೆ ಹೋಲಿಸಿದರೆ ಮೊಬೈಲ್ ಪೋನುಗಳ ವಿಕಿರಣ ಶಕ್ತಿಯು ಲಕ್ಷಾಂತರ ಪಟ್ಟು ಕಮ್ಮಿಯೇ. ರೇಡಿಯೋ ತರಂಗಾಂತರಗಳ ಶಕ್ತಿಯಂತೂ ಇನ್ನೂ ಕಡಿಮೆ. ಆದರೆ ಮೊಬೈಲ್ ಪೋನುಗಳಿಂದ ಹೊರಹೊಮ್ಮುವ ವಿದ್ಯುದಾಯಸ್ಕಾಂತ ವಿಕಿರಣಗಳು ತಮ್ಮ ಶಕ್ತಿಯಿಂದ ಉಷ್ಣ ಪರಿಣಾಮ ಉಂಟು ಮಾಡಿ ಜೀವಕೋಶಗಳಿಗೆ ಹಾನಿಯುಂಟು ಮಾಡಬಲ್ಲವು.

ಪ್ರತಿ ಕೆಜಿ ಜೀವದ್ರವ್ಯವು ತಾನು ನಿರ್ದಿಷ್ಟವಾಗಿ ವಿದ್ಯುದಾವೇಶ-ಉಂಟುಮಾಡಲಾರದ ವಿಕಿರಣವನ್ನು ಹೀರಿಕೊಳ್ಳಬಹುದಾದ ದರ 1.6ಕ್ಕಿಂತ ಹೆಚ್ಚಿರಬಾರದು. ಇದಕ್ಕಿಂತ ಹೆಚ್ಚಿನ ಮಟ್ಟದ ವಿಕಿರಣವನ್ನು ಜೀವದ್ರವ್ಯವು ಹೀರಿಕೊಂಡಲ್ಲಿ ಅದಕ್ಕೆ ಹಾನಿಯುಂಟಾಗುವುದು.

ಹತ್ತು ವರ್ಷಗಳ ಸಮೀಕ್ಷೆ:

ಕಳೆದ ಹತ್ತು ವರ್ಷಗಳ ಕಾಲಾವಧಿಯಲ್ಲಿ ದಿನವೊಂದಕ್ಕೆ 30 ನಿಮಿಷ ಕಾಲ ಮೊಬೈಲ್ ಬಳಸುವ ಬಳಕೆದಾರರಲ್ಲಿ ಮೆದುಳು ಕ್ಯಾನ್ಸರ್ ಬರುತ್ತದೆಂದು ಸುಮಾರು 13 ದೇಶಗಳ 21 ವಿಜ್ಞಾನಿಗಳ ತಂಡ ತನ್ನ ಅಧ್ಯಯನ ಸಮೀಕ್ಷೆಯಿಂದ ಕಂಡುಕೊಂಡಿದೆ. ದೀರ್ಘ ಕಾಲ ಮೊಬೈಲ್ ಬಳಕೆ, ಚಿಕ್ಕ ವಯಸ್ಸಿನಿಂದಲೇ ದೀರ್ಘ ವರ್ಷ ಮೊಬೈಲ್ ಬಳಸುವವರು, ಸಿಗ್ನಲ್ ದುರ್ಬಲವಿರುವೆಡೆ ಮೊಬೈಲ್ ಬಳಸುವುದು, ಹೆಚ್ಚು ಕರೆಗಳನ್ನು ಮಾಡುವವರಲ್ಲಿ ಹೆಚ್ಚಿನ ಸಂಖ್ಯೆಯ ಮೆದುಳಿನ ಕ್ಯಾನ್ಸರ್ ದಾಖಲಾಗಿದೆ. ಆದರೆ ಇನ್ನೂ ಹೆಚ್ಚಿನ ಅಧ್ಯಯನದ ಮೂಲಕ ಹಲವಾರು ಮಾಹಿತಿಗಳನ್ನು ಕಂಡುಕೊಳ್ಳಬೇಕಾಗಿದೆ. ಸ್ಪೀಕರ್ ಬಳಕೆ ಅಥವಾ ಮೆಸೇಜ್ ಬಳಸುವುದು, ಆದಷ್ಟು ಕಡಿಮೆ ಬಳಕೆಯಂತಹ ಕ್ರಮಗಳಿಗೆ ಒಗ್ಗಿಕೊಳ್ಳುವುದು ಸೂಕ್ತ ಎಂದು ತಜ್ಞರು ಹೇಳುತ್ತಾರೆ.

ಮತ್ತೊಂದೆಡೆ, ಅಂತರಾಷ್ಟ್ರೀಯ ಮೊಬೈಲ್ ಪೋನು ತಯಾರಕರ



ಸಂಘವು ತನ್ನದೇ ಸಂಶೋಧನೆ ನಡೆಸಿ ಮೊಬೈಲ್ ಪೋನುಗಳಿಂದ ಆರೋಗ್ಯದ ಮೇಲೆ ಯಾವುದೇ ರೀತಿಯ ಅಡ್ಡ ಪರಿಣಾಮಗಳು ಬೀರುವುದಿಲ್ಲ ಎಂದು ವರದಿ ಮಾಡಿದೆ. ಅಲ್ಲದೆ, ವಿಶ್ವ ಆರೋಗ್ಯ ಸಂಸ್ಥೆಯು ಮೇಲೆ ತಿಳಿಸಿರುವ ಸಂಶೋಧನೆ ಮತ್ತು ಸಮೀಕ್ಷೆ ನಡೆಸಲು ಇದೇ ಮೊಬೈಲ್ ಪೋನು ತಯಾರಕರ ಸಂಘವೇ ವೆಚ್ಚ ಭರಿಸಿದೆ ಎನ್ನಲಾಗಿದ್ದು, ಸಂಶೋಧನೆಯ ಫಲಿತಾಂಶಗಳ ಮೇಲೆ ಈ ಸಂಘದ ಪ್ರಭಾವ ಬೀರದಂತೆ ನೋಡಿಕೊಳ್ಳಲಾಗಿದೆ ಎಂದು ಹೇಳುತ್ತಾರೆ. ಆದರೆ, ನೈಜ ಅಧ್ಯಯನದ ಮೂಲಕ ವಾಸ್ತವ ಮಾಹಿತಿ ಇನ್ನೂ ಹೊರಬರಬೇಕಿದೆ.

ಮೊಬೈಲ್ ಟವರ್‌ಗಳಿಂದ ಆರೋಗ್ಯಕ್ಕೆ ಹಾನಿ:

ಮೊಬೈಲ್ ಟವರ್‌ಗಳಿಂದ ಹೊರಸೂಸುವ ಶಕ್ತಿಯುತ ವಿಕಿರಣಗಳಿಂದ ಪುರುಷರ ಸಂತಾನ ಶಕ್ತಿ ಕುಂದುಹೋಗುತ್ತದೆ ಹಾಗೂ ರೋಗ ನಿರೋಧಕ ಶಕ್ತಿ ಕಡಿಮೆಯಾಗುತ್ತದೆ ಎಂದು ಜವಾಹರ್‌ಲಾಲ್ ನೆಹರೂ ವಿಶ್ವವಿದ್ಯಾಲಯದ ಸಂಶೋಧನೆ ಕೆಲವು ತಿಂಗಳ ಹಿಂದೆ ತಿಳಿಸಿತ್ತು. ಅಲ್ಲದೆ ಹೃದಯ ಸ್ತಂಭನ, ಆರ್‌ತ್ರಿಟಿಸ್, ಕ್ಯಾನ್ಸರ್, ಇಳಿವಯಸ್ಸಿನ ಮರೆಗುಳಿ ಕಾಯಿಲೆ ಇತ್ಯಾದಿಗಳು ಬರುತ್ತವೆ ಎನ್ನಲಾಗಿದೆ. ಇಲಿಗಳ ಮೇಲೆ ಪ್ರಯೋಗ ನಡೆಸಿ ಇನ್ನು ಹಲವು ಫಲಿತಾಂಶ ಪಡೆಯಲಾಗಿದೆ. ಪುರುಷನ ವೀರ್ಯದ ಜೀವಕೋಶದಲ್ಲಿರುವ ಡಿಆಕ್ಸಿರೈಬೋ ನ್ಯೂಕ್ಲಿಯಿಕ್ ಆಮ್ಲದ ಎರಡು ಎಳೆ ಬಂಧವನ್ನು ಮೊಬೈಲ್ ಟವರ್‌ನಿಂದ ಹೊರಸೂಸುವ ವಿಕಿರಣಗಳು ಛಿದ್ರಗೊಳಿಸುತ್ತವೆ ಎನ್ನಲಾಗಿದೆ. •



ಪೆಟ್ರೋಲ್ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರುದ್ಧ ಜೂನ್ 23, 2011 ರಂದು ಕಾರ್ಮಿಕ ಸಂಘಗಳ ಜಂಟಿ ವೇದಿಕೆ (ಜೆಸಿಟಿಯು) ಪ್ರತಿಭಟನೆ, ಬೆಂಗಳೂರಿನ ರಾಜಭವನದ ಸಮೀಪ

JANASHAKTHI KANNADA VARA PATRIKE: Printed by G.N.NAGARAJ, No 12, 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12 18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH